ಮೋಕ್ಷಮಾರ್ಗವಿದೆ. ಇಂಥ ಮೋಕ್ಷಮಾರ್ಗವು ಪ್ರಕಟವಾದ ನಂತರ ಬಾಹ್ಯದಲ್ಲಿ ಬೇಕಾದಂಥ ಉಪಸರ್ಗ ಬರಲಿ, ಗಾಣದ ದಿಂಡಿನಲ್ಲಿ ಹಾಕಿ ಹಿಂಡುತ್ತಿರುವ ಸಮಯದಲ್ಲಿ ಕೂಡ ಮುನಿರಾಜರುಗಳು ಅಂತರ್ಯದ ಅತೀಂದ್ರಿಯ ಆನಂದದಲ್ಲಿ ರಮಿಸುತ್ತಿರುತ್ತಾರೆ. ಯಾವನಾದರೂ ಪೂರ್ವಜನ್ಮದ ವಿರೋಧಿ ದೇವನು ಮುನಿರಾಜರನ್ನು ಎತ್ತಿಕೊಂಡು ಹೋಗಿ ಲವಣ ಸಮುದ್ರದಲ್ಲಿ ಎಸೆಯುವ ಸಮಯದಲ್ಲೂ ಆ ಸಾಧು ಪರಮೇಷ್ಠಿಗಳು ಶ್ರೇಣಿ ಮಂಡಿಸಿ ಕೇವಲಜ್ಞಾನ ಪಡೆದು ಸಿದ್ಧದಶೆಯನ್ನು ಪ್ರಾಪ್ತಮಾಡಿಕೊಳ್ಳುತ್ತಾರೆ. ಅದಕ್ಕಾಗಿಯೇ ಒಂದು ಬಾರಿ ಚೈತನ್ಯ ರತ್ನಾಕರನ ಕಡೆಗೆ ದೃಷ್ಟಿ ಹರಿಸಿ ಅನುಭವ ಮಾಡಿಕೊಂಡರೆ ನಿನಗೆ ಯಾವ ಫಲವು ಪ್ರಾಪ್ತವಾಗುವುದಿಲ್ಲ, ಅಲ್ಪಕಾಲದಲ್ಲಿಯೇ ಸಿದ್ಧಪದ ಎಂದರೆ ಮುಕ್ತಿ ಪಡೆಯುವೆಯೆಂದು ಹೇಳುತ್ತಾರೆ.

ಲೋಕಾಲೋಕಗಳ ಪ್ರಕಾಶಕನಾದಂಥ ನಿಜ ಆತ್ಮನನ್ನು ಯಾರು ಅನುಭವಿಸುತ್ತಾರೆ ಅವರದು ಕೇವಲಜ್ಞಾನ ಪಡೆದುಕೊಳ್ಳುವ ಸಿದ್ಧತೆಯಾಗಿ ಹೋಗಿದೆಯೆಂದು ತಿಳಿಯಬೇಕು. ಇಂಥ ಧರ್ಮಾತ್ಮರುಗಳು ಧನ್ಯ-ಧನ್ಯರಿದ್ದಾರೆ. ಮುನಿಗಳಾದ ನಾವು ಕೂಡ ಇಂಥ ಮೋಕ್ಷಮಾರ್ಗಿಯಾದ ಸಾಧಕರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇವೆ.

ತ್ಯಾಗಿ ಆತ್ಮಧ್ಯಾನಿಯಾದ ಮಹಾತ್ಮನೇ ಧನ್ಯನಿದ್ದಾನೆಂದು ಈಗ ಹೇಳುತ್ತಾರೆ, -

ಧಣ್ಣಾ ತೇ ಭವಯಂತ ಬುಹ ಜೇ ಪರಭಾವ ಚಯಂತಿ
ಲೋಯಾಲೋಯ-ಪಯಾಸಯರು ಅಪ್ಪಾ ವಿಮಲ ಮುಣಂತಿ ॥64॥

ಲೋಕೋತ್ತರ ಬುಧ ಭಗವಂತ ತೆಜಿಸಿರುವನು ಪರಭಾವಗಳ
ಲೋಕಾಲೋಕ ಪ್ರಕಾಶಕನು ತಿಳಿಯುವನು ವಿಮಲಾತ್ಮನನು ॥64॥

ಅರ್ಥ :- ಯಾರು ಪರಭಾವಗಳನ್ನು ತ್ಯಾಗ ಮಾಡುತ್ತಾರೆ ಮತ್ತು ಲೋಕಾಲೋಕ ಪ್ರಕಾಶಕನಾದ ತಮ್ಮ ನಿರ್ಮಲ ಆತ್ಮನ ಅನುಭವ ಮಾಡುತ್ತಾರೆ ಆ ಭಗವಾನ ಜ್ಞಾನಿ ಮಹಾತ್ಮರುಗಳು ಧನ್ಯರಿದ್ದಾರೆ.

ಯಾರು ತಮ್ಮ ನಿರ್ಮಲ ಶುದ್ಧ ಸ್ವಭಾವವನ್ನು ಸಾಧ್ಯವನ್ನಾಗಿ ಮಾಡಿಕೊಂಡು ಸಾಧಿಸಿದ್ದಾರೆ ಅಂಥ ಧರ್ಮಾತ್ಮರು ಧನ್ಯರಿದ್ದಾರೆ. ನೋಡಿರಿ ! ಹಣವುಳ್ಳವರಂತೂ ಧೂಳದ ಅಧಿಪತಿಗಳಿದ್ದು ಅವರನ್ನು ಧನ್ಯರೆಂದು ಹೇಳಲಿಲ್ಲ, ದಾನದಲ್ಲಿ ವಿಪುಲವಾಗಿ ಹಣ ಖರ್ಚು ಮಾಡುವವರನ್ನು ಕೂಡ ಧನ್ಯರೆಂದು ಹೇಳಲಿಲ್ಲ, ಏಕೆಂದರೆ ಅವೇನು ಧನ್ಯವಾದ ಕಾರ್ಯಗಳಲ್ಲ, ಅಂತರ್ಯದಲ್ಲಿ ಸಚ್ಚಿದಾನಂದ ಧ್ರುವ ಧನವು ಬಿದ್ದುಕೊಂಡಿದ್ದು ಅದರಲ್ಲಿ ಯೋಗ ಎಂದರೆ ಒಂದುಮಾಡಿ ಶುದ್ಧ ನಿರ್ಮಲಭಾವವನ್ನು ಪ್ರಕಟ ಮಾಡಿಕೊಳ್ಳುವಂಥ ಧರ್ಮಾತ್ಮನು ಧನ್ಯನಿದ್ದಾನೆ.

ಪರಭಾವಗಳಿಂದ ವಿಮುಖರಾಗಿ ಸ್ವಸನ್ಮುಖದೃಷ್ಟಿ ಮಾಡಿರುವಂಥ ಧರ್ಮಾತ್ಮರುಗಳು ಧನ್ಯರಿದ್ದಾರೆ. ಆತ್ಮನ ಜ್ಞಾನ ಸ್ವಭಾವದಂಥ ಅಸಾಧಾರಣ ಸ್ವಭಾವವು ಬೇರೆ ಯಾವ ಅನ್ಯ ದ್ರವ್ಯಗಳಲ್ಲೂ ಇಲ್ಲ, ಇಷ್ಟೇ ಏಕೆ ಆತ್ಮನ ಇತರ ಯಾವ ಗುಣಗಳಲ್ಲಿ ಕೂಡ ಇಂಥ ಅಸಾಧಾರಣ ಸ್ವಭಾವವಿಲ್ಲ, ಇಂಥ ಜ್ಞಾನ ಸ್ವಭಾವದ ಮೂಲಕವೇ ತಮ್ಮ ಆತ್ಮನನ್ನು ತಿಳಿದವರು ಮತ್ತು ಅದರಲ್ಲಿ ಏಕಾಗ್ರತೆ ಹೊಂದಿದವರು ಅವರು ಧನ್ಯರಿದ್ದಾರೆ, ಪ್ರಶಂಸನೀಯರಿದ್ದಾರೆ.

ಭಗವಾನ ಆತ್ಮನ ಪರಮ ಸಂಪತ್ತನ್ನು ರುಚಿ ಪೂರ್ವಕವಾಗಿ ಸಾಧಿಸುತ್ತಿರುವಂತೆಯೇ ಜಗತ್ತಿನ ಸಮಸ್ತ ಪದಾರ್ಥಗಳಿಂದ ಉದಾಸೀನತೆಯು ಬಂದು ಬಿಡುತ್ತದೆ. ಒಂದು ವೇಳೆ ಪುಣ್ಯೋದಯದಿಂದ ಚಕ್ರವರ್ತಿ, ಕಾಮದೇವ, ನಾರಾಯಣ, ಪ್ರತಿ ನಾರಾಯಣ, ಇಂದ್ರ, ಧರಣೇಂದ್ರ, ಅಹಮಿಂದ್ರ ಮೊದಲಾದ ಪದವಿಗಳು ಪ್ರಾಪ್ತವಾದರೂ ಕೂಡ ಧರ್ಮಾತ್ಮರುಗಳಿಗೆ ಅವುಗಳಲ್ಲಿ ಮೋಹ-ಮಮತೆಗಳು ಉತ್ಪನ್ನವಾಗುವುದಿಲ್ಲ. ನಿಜಪದದ ಪೂರ್ಣ ಸಾಧನೆ ಮಾಡುವಂಥ ಧರ್ಮಾತ್ಮನಿಗೆ ಲೌಕಿಕ ಪದವಿಗಳ ಕುರಿತು ಸ್ವಲ್ಪ ಮಾತ್ರವೂ ಅಪೇಕ್ಷೆಯಿರುವುದಿಲ್ಲ, ಧರ್ಮದ ಅನುರಾಗ, ಪಂಚ-ಪರಮೇಷ್ಠಿಗಳ ಭಕ್ತಿ, ಶಾಸ್ತ್ರಸ್ವಾಧ್ಯಾಯದ ಭಾವ, ಪೂಜೆಯ ಭಾವ, ಅನುಕಂಪೆ ಮೊದಲಾದ ಶುಭ ಭಾವಗಳು

ಧರ್ಮಾತ್ಮನಿಗೆ ಬರುತ್ತವೆ, ಆದರೆ ಅವನಿಗೆ ಅವುಗಳ ಆದರವಿರುವುದಿಲ್ಲ. ಶುದ್ಧ ಸ್ವಭಾವದಲ್ಲಿ ಸ್ಥಿರತೆಯಾಗದಿರುವುದರಿಂದ ಶುಭ ಭಾವಗಳು ಬರುತ್ತವೆ, ಆದರೆ ಧರ್ಮಾತ್ಮನಿಗೆ ಆ ಭಾವಗಳ ಕುರಿತು ಹಾಗೂ ಅವುಗಳ ಫಲದ ಕುರಿತು ಆದರವಿರುವುದಿಲ್ಲ. ಧರ್ಮಾತ್ಮನಿಗೆ ಧರ್ಮ ಪ್ರಭಾವನೆಯ ವಿಕಲ್ಪವು ಬರುತ್ತದೆ, ಆದರೆ ಅದನ್ನು ಬಿಡಲು ಯೋಗ್ಯವೆಂದೇ ಅವನು ತಿಳಿಯುತ್ತಾನೆ. ಒಂದು ನಿಜಪದದ ನಿರ್ವಿಕಲ್ಪ ಸಾಧನೆಯಲ್ಲಿಯೇ ಉಪಯೋಗವನ್ನು ತೊಡಗಿಸುತ್ತಾನೆ. ಏಕೆಂದರೆ ಶುದ್ಧ ಸ್ವಭಾವದಲ್ಲಿ ಎಷ್ಟು ಏಕಾಗ್ರತೆಯಾಗುವುದು ಅಷ್ಟೇ ತನಗೆ ಲಾಭವಿದೆ. ಧರ್ಮ ಪ್ರಭಾವನೆಯಿಂದ ತನ್ನ ಆತ್ಮನಿಗೆ ಯಾವ ಲಾಭವಾಗುವುದಿಲ್ಲ.

ಸಂಸಾರದ ಸಮಸ್ತ ವಿಕಲ್ಪ ಜಾಲಗಳಿಂದ ವಿರಕ್ತರಾಗಿ, ಸಪ್ತ ತತ್ತ್ವಗಳು, ನವ ಪದಾರ್ಥಗಳು ಮೊದಲಾದ ವಿಕಲ್ಪಗಳನ್ನು ಕೂಡ ತ್ಯಾಗ ಮಾಡಿ ಧರ್ಮಾತ್ಮನು ಒಂದು ನಿಜ ಶುದ್ಧಾತ್ಮನನ್ನೇ ಧ್ಯಾನಿಸುತ್ತಾನೆ ಮತ್ತು ಪರಮಾನಂದದ ಅಮೃತಪಾನ ಮಾಡುತ್ತಾನೆ; ಅಂತರ್ಯದಲ್ಲಿನ ಸುಧಾರಸವನ್ನೇ ಕುಡಿಯುತ್ತಾನೆ. ಇಂಥ ಧರ್ಮಾತ್ಮನೇ ಧನ್ಯನಿದ್ದಾನೆ. ಪ್ರಶಂಸನೀಯನಿದ್ದಾನೆ, ಅವನೇ ಮಹಾವಿವೇಕಿಯಿದ್ದಾನೆ, ಅವನೇ ಪಂಡಿತನಿದ್ದಾನೆ, ಪರಮ ಐಶ್ವರ್ಯವಂತನು ಕೂಡ ಅವನೇ ಇದ್ದಾನೆಂದು ಆಚಾರ್ಯದೇವರು ಹೇಳುತ್ತಾರೆ.

ಮನೆಯ ಒಂದು ಕೋಣೆಯಲ್ಲಿ ಕುಳಿತುಕೊಂಡ ಜ್ಞಾನಿಯು ಅತ್ಯಂತ ಶಾಂತಿಯಿಂದ ತನ್ನ ಶಾಂತಿಯ ಅನುಭವ ಮಾಡುತ್ತಾನೆ ಅವನೇ ಧನ್ಯನಿದ್ದಾನೆ, ಐಶ್ವರ್ಯವಂತನಿದ್ದಾನೆ. ಆದರೆ ಧನವುಳ್ಳವನು ಅವನು ನಿಜವಾಗಿ ಐಶ್ವರ್ಯವಂತನಿಲ್ಲ, ಆದರೆ ಆತ್ಮನ ಸಂಪತ್ತನ್ನು ಭೋಗಿಸುವಂಥ ಧರ್ಮಾತ್ಮನು ಮಾತ್ರ ಐಶ್ವರ್ಯವಂತನಿದ್ದಾನೆ.ಧರ್ಮಾತ್ಮ ಜೀವನು ನಿಜ ಶುದ್ಧಾತ್ಮನ ಪ್ರತೀತಿ, ಜ್ಞಾನ, ಸ್ಥಿರತೆಯರೂಪ ರತ್ನತ್ರಯದ ಅಧಿಪತಿಯಿದ್ದಾನೆ ಮತ್ತು ಅವನೇ ಧನಾಢ್ಯನಿದ್ದಾನೆ, ಧನವುಳ್ಳವನು ನಿಜವಾಗಿ ಧನಾಢ್ಯನಿಲ್ಲ.

ಪ್ರಶ್ನೆ :- ಹಾಗಾದರೆ ಧನವುಳ್ಳವನು ಏನು ಮಾಡಬೇಕಾಗುವುದು ?

ಉತ್ತರ :- ಧನವುಳ್ಳವನಂತೂ ಆ ಧನದ ಮೋಹವನ್ನು ಬಿಟ್ಟುಕೊಟ್ಟು ಆತ್ಮನ ಅಭಿರುಚಿ ಮಾಡಿ ರತ್ನತ್ರಯದ ಪ್ರಾಪ್ತಿ ಮಾಡಿಕೊಳ್ಳಬೇಕಾಗುವುದು.

ಸಮ್ಯಗ್ದರ್ಶನ, ಜ್ಞಾನ, ಚಾರಿತ್ರರೂಪದ ಮೂರು ರತ್ನಗಳನ್ನು ಧಾರಣ ಮಾಡುವಂಥವನೇ ನಿಜವಾದ ಭಾಗ್ಯವಂತನಿದ್ದಾನೆ. ಅವನು ಅತೀಂದ್ರಿಯ ಜ್ಞಾನ ಮತ್ತು ಆನಂದದ ಅಧಿಪತಿಯಾಗಿ ಅಲ್ಪಕಾಲದಲ್ಲಿಯೇ ಮೋಕ್ಷ ಲಕ್ಷ್ಮಿಯ ಅಧಿಪತಿಯಾಗುವನು. ಶಾಶ್ವತ ಸುಖದ ಅಧಿಪತಿಯಾಗುವನು.

ಆತ್ಮಾನುಶಾಸನದಲ್ಲಿ ಒಂದು ಅತ್ಯಂತ ಸುಂದರವಾದ ದೃಷ್ಟಾಂತವು ಬರುತ್ತದೆ. ಅತೀಂದ್ರಿಯ ಆನಂದದ ನಿಜಾನುಭವದಲ್ಲಿ-ಸ್ವಸಂವೇದನದಲ್ಲಿ ನಿಮಗ್ನರಾದ ದಿಗಂಬರಸಂತರುಗಳ ಶರೀರಕ್ಕೆ ತಗಲಿದ ರಜಕಣವೇ ಮಾಲಿನ್ಯವೇ ಅವರ ಆಭೂಷಣವಿದೆ, ಪಾಷಾಣದ ಶಿಲೆಯೇ ಅವರು ಕುಳಿತುಕೊಳ್ಳುವ ಸಿಂಹಾಸನವಿದೆ. ಹರಳುಗಳಿಂದ ತುಂಬಿದ ಭೂಮಿಯೇ ಅವರ ಶಯ್ಯೆಯಿದೆ, ಕ್ರೂರವಾದ ಸಿಂಹ - ವ್ಯಾಘ್ರಗಳು ವಾಸಿಸುವ ಗುಹೆಯೇ ಅವರ ಸುಂದರವಾದ ಮನೆಯಿದೆ, ಅನುಭೂತಿಯು ಅವರ ಗಿರಿಗುಹೆಯಿದೆ ಮತ್ತು ಅವರು ಅಜ್ಞಾನದ ಸಮಸ್ತ ಗ್ರಂಥಿಗಳನ್ನು ಕತ್ತರಿಸಿಹಾಕಿದ್ದಾರೆ, ಅಲ್ಲದೆ ಜ್ಞಾನ ಹಾಗೂ ಆನಂದದ ಭಂಡಾರವನ್ನೇ ತೆರೆದು ಬಿಟ್ಟಿದ್ದಾರೆ, ಹೀಗೆ ಜಗತ್ತಿನಿಂದ ಅತ್ಯಂತ ಉದಾಸ ಮತ್ತು ಮೋಕ್ಷ ಲಕ್ಷ್ಮಿಯ ಅಭಿರುಚಿಯುಳ್ಳ ಹಾಗೂ ಸಮ್ಯಕ್ ಜ್ಞಾನದ ಅಧಿಪತಿಯಾದ ಯೋಗಿ ವೃಂದವು ನಮ್ಮ ಮನಸ್ಸನ್ನು ಪವಿತ್ರ ಮಾಡಲಿ.

ಗೃಹಸ್ಥನಿರಲಿ ಅಥವಾ ಮುನಿಯಿರಲಿ ಅವರೀರ್ವರ ಸಲುವಾಗಿ ಆತ್ಮನ ಸ್ಥಿರತೆಯೇ ಸಿದ್ಧ-ಸುಖದ ಉಪಾಯವಿದೆಯೆಂದು ಈಗ ಹೇಳುತ್ತಾರೆ, -

ಸಾಗಾರು ವಿ ಣಾಗಾರು ಕು ವಿ ಜೋ ಅಪ್ಪಾಣಿ ವಸೇಇ
ಸೋ ಲಹು ಪಾವಇ ಸಿದ್ಧಿ-ಸುಹು ಜಿಣವರು ಏಮ ಭಣೇಇ ॥65॥

ಮುನಿಯಿರಲಥವಾ ಗೃಹಿಯಿರಲಿ ವಾಸಿಸುವವನು ನಿಜ ಆತ್ಮನಲಿ
ಮಾಣದೆ ಪಡೆವನು ಸಿದ್ಧಿ-ಸುಖ ಶ್ರೀಜಿನದೇವರ ಕಥನವಿದೆ ॥65॥

ಅರ್ಥ :- ಗೃಹಸ್ಥನಿರಲಿ ಅಥವಾ ಮುನಿಯಿರಲಿ ಯಾರೇ ಇದ್ದರೂ ಯಾರು ತಮ್ಮ ಆತ್ಮನ ಅಂತರ್ಯದಲ್ಲಿ ವಾಸ ಮಾಡುತ್ತಾರೆ ಅವರು ಶೀಘ್ರವಾಗಿ ಸಿದ್ಧಿಯ ಸುಖವನ್ನು ಪಡೆಯುತ್ತಾರೆಂದು ಶ್ರೀಜಿನದೇವರು ಹೇಳಿದ್ದಾರೆ.

ಗೃಹಸ್ಥಾಶ್ರಮದೊಳಗೆ ಆತ್ಮನ ಅನುಭವವು ಆಗುವ ಸಾಧ್ಯತೆಯಿಲ್ಲವೆಂದು ಈಗ ಲೋಕದಲ್ಲಿ ಅದೆಷ್ಟೋ ಜನರು ಹೇಳುತ್ತಾರೆ. ಆತ್ಮನ ಅನುಭವವಂತೂ ಎಂಟನೇ ಗುಣಸ್ಥಾನದಲ್ಲಿಯೇ ಆಗುವುದೆಂದು ಹೇಳುವವರ ಸಲುವಾಗಿ ಈ ಗಾಥೆಯಿದೆ. ಜಿನೇಂದ್ರ ಪರಮಾತ್ಮರಾದ ಭಗವಾನ ತೀರ್ಥಂಕರ ದೇವರು ಸಮವಸರಣದೊಳಗೆ ನೂರು ಇಂದ್ರರುಗಳ ಉಪಸ್ಥಿತಿಯಲ್ಲಿ ಅಪ್ಪಣೆ ಕೊಡುವುದೇನೆಂದರೆ -ಜೀವನು ಸಮ್ಯಗ್ದರ್ಶನ-ಜ್ಞಾನ ಸಹಿತನಾಗಿ ಗೃಹಸ್ಥಾಶ್ರಮದಲ್ಲಿ ಇರುತ್ತಿದ್ದರು ಕೂಡ ಅವನು ಆತ್ಮನ ಅನುಭವ ಮಾಡುತ್ತಾನೆ. ವೀತರಾಗ ಜಿನೇಂದ್ರದೇವರ ವಾಣಿಯು ಇಚ್ಛಾರಹಿತವಾಗಿ ಹೊರಡುತ್ತದೆ ಅದರಲ್ಲಿ ಈ ಮಾತು ಬಂದಿದೆ. ಹೀಗೆ ಜಿನೇಂದ್ರ ದೇವರ ರುಜುವಾತು(ಸಾಕ್ಷ್ಯ) ಕೊಟ್ಟು ಗೃಹಸ್ಥನಿರಲಿ ಅಥವಾ ಮುನಿಯಿರಲಿ ಈರ್ವರ ಸಲುವಾಗಿ ಆತ್ಮನ ಅನುಭವವೇ ಸಿದ್ಧಿಸುಖದ ಉಪಾಯವಿದೆಯೆಂದು ಆಚಾರ್ಯ ಶ್ರೀ ಯೋಗೀಂದ್ರದೇವರು ಹೇಳುತ್ತಾರೆ. ನಾಲ್ಕನೆಯ ಮತ್ತು ಐದನೆಯ ಗುಣಸ್ಥಾನಾವರ್ತಿಯಾದ ಗೃಹಸ್ಥನು ಕೂಡ ಆತ್ಮನಲ್ಲಿ ವಾಸಿಸುತ್ತಾನೆ ಮತ್ತು ವಾಸಿಸುವ ಸಾಧ್ಯತೆಯಿದೆ. ಗೃಹಸ್ಥಾಶ್ರಮದಲ್ಲಿ ರಾಗವಿದ್ದರು ಕೂಡ ಧರ್ಮಾತ್ಮ ಜೀವನು ಅದರಿಂದ ನಿವೃತ್ತನಾಗಿ ಸ್ವರೂಪದಲ್ಲಿ ವಾಸಿಸುತ್ತಾನೆ - ರಮಿಸುತ್ತಾನೆ. ಮುನಿರಾಜರುಗಳು ಉಗ್ರರೂಪದಿಂದ ಆತ್ಮನಲ್ಲಿ ವಾಸಿಸುತ್ತಾರೆ.

ಸಮ್ಯಕ್‌ದೃಷ್ಟಿಗೆ ಮೂರು ಕಷಾಯ ಚೌಕಡಿಗಳಿದ್ದರೆ ಶ್ರಾವಕನಿಗೆ ಎರಡು ಕಷಾಯ ಚೌಕಡಿಗಳಿರುತ್ತವೆ. ಮತ್ತು ಮುನಿರಾಜರುಗಳಿಗೆ ಮಾತ್ರ ಒಂದೇ ಕಷಾಯ ಚೌಕಡಿಯಿರುತ್ತದೆ. ಆದರೆ ನಿಶ್ಚಯದಿಂದ ಈ ಮೂವರು ಆತ್ಮನಲ್ಲಿಯೇ ವಾಸಮಾಡಿರುತ್ತಾರೆ. ಅವರು ಕಷಾಯದಲ್ಲಿ ರಾಗದಲ್ಲಿ ವಾಸ ಮಾಡುವುದಿಲ್ಲ, ಏಕೆಂದರೆ ಅವರ ದೃಷ್ಟಿಯು ಓರ್ವ ಆತ್ಮನ ಮೇಲೆಯೇ ಇರುತ್ತದೆ. ರಾಗಾದಿಗಳಿದ್ದರೂ ಅವನ್ನು ಅವರು ಕೇವಲ ತಿಳಿದುಕೊಳ್ಳುತ್ತಾರೆ. ನಿಶ್ಚಯದಿಂದ ಧರ್ಮಾತ್ಮರು ತಮ್ಮ ತಮ್ಮ ಆತ್ಮನಲ್ಲಿಯೇ ನೆಲೆಸುತ್ತಾರೆ.

ಸಮ್ಯಕ್‌ದೃಷ್ಟಿಯು ಗೃಹಸ್ಥಾವಸ್ಥೆಯಲ್ಲಿದ್ದರೂ ಕೂಡ ಅವರು ವಿಕಲ್ಪಗಳನ್ನು ಮುರಿದು ಹಾಕಿ ಒಮ್ಮೊಮ್ಮೆ ನಿರ್ವಿಕಲ್ಪ ಸ್ವಭಾವದಲ್ಲಿ ವಾಸಿಸುತ್ತಾರೆ. ಸಮ್ಯಕ್‌ದೃಷ್ಟಿಯ ಅಪೇಕ್ಷೆಯಿಂದ ಮುನಿರಾಜರ ಪುರುಷಾರ್ಥವು ವಿಶೇಷವಾಗಿ ಉಗ್ರವಿರುವುದರಿಂದ ಅವರು ಪುನಃ ಪುನಃ ಆತ್ಮನಲ್ಲಿ ವಾಸ ಮಾಡುತ್ತಾರೆ. 'ಆತ್ಮ ಎಂದರೆ ಶುದ್ಧ ಭಾವದ ಭಂಡಾರ'ವಿದ್ದು ಅವರು ರಾಗವನ್ನು ಮುರಿದು ಹಾಕಿ-ಇಂಥ ನಿಜಾತ್ಮನ ಭಂಡಾರವನ್ನು ತೆರೆಯುತ್ತಾರೆ ಮತ್ತು ಅದರಲ್ಲಿಯೇ ವಾಸ ಮಾಡುತ್ತಾರೆ. ಧರ್ಮಾತ್ಮನಿಗೆ ಪುಣ್ಯ-ಪಾಪ ಭಾವದ ಅಭಿರುಚಿ-ಪ್ರೀತಿಯಿಲ್ಲದಿರುವುದರಿಂದ ಅವರು ರಾಗವಿದ್ದರು ಕೂಡ ಆ ರಾಗದಲ್ಲಿ ವಾಸಿಸುವುದಿಲ್ಲ ಎಂದರೆ ಅವರು ಆ ರಾಗದಲ್ಲಿ ವಾಸಿಸುತ್ತಾರೆಂದು ಹೇಳಲಾಗುವುದಿಲ್ಲ, ಧರ್ಮಾತ್ಮನಿಗೆ ಓರ್ವ ಆತ್ಮನ ಪ್ರೀತಿಯಿರುವುದರಿಂದ ಅವನ ವಾಸಸ್ಥಾನವು ಓರ್ವ ಆತ್ಮನೇ ಇದ್ದಾನೆ. ಅವನು ಆತ್ಮನಲ್ಲಿಯೇ ಇರುತ್ತಾನೆ.

ಈ ಗಾಥೆಯಲ್ಲಿ ಮೂರು ಮಾತುಗಳನ್ನು ಸಿದ್ಧ ಮಾಡಿದ್ದಾರೆ. ಮೊದಲನೆಯದು ಯಾರು ಅಂತರ್ಮುಖ ದೃಷ್ಟಿ ಮಾಡಿ ಶ್ರದ್ಧೆ ಜ್ಞಾನ ಹಾಗೂ ಲೀನತೆಯನ್ನು ಪ್ರಕಟ ಮಾಡಿದ್ದಾರೆ ಅವರು ಆತ್ಮನಲ್ಲಿಯೇ ವಾಸಿಸುತ್ತಾರೆ.

ಎರಡನೆಯದು ಗ್ರಹಸ್ಥಾಶ್ರಮದಲ್ಲಿ ಆತ್ಮನೊಳಗೆ ವಾಸಿಸುವ ಸಾಧ್ಯತೆಯಿಲ್ಲವೆಂದು ಹೇಳುವವರ ನಿಷೇಧ ಮಾಡಲಾಗಿದೆ. ಮತ್ತು ಮೂರನೆಯದು ಧರ್ಮಾತ್ಮನಿಗೆ ರಾಗರೂಪದ ವ್ಯವಹಾರವಿರುತ್ತದೆ, ಆದರೆ ಅದರ ಸ್ವಾಮಿತ್ವವಿರುವುದಿಲ್ಲ, ಧರ್ಮಾತ್ಮನು ರಾಗದಿಂದ ಮುಕ್ತನೇ ಇರುತ್ತಾನೆ. ಸಮ್ಯಕ್‌ದೃಷ್ಟಿ ಹೀಗೆ ಹೇಳುತ್ತಾನೆ -

ನನ್ನ ಪ್ರೀತಿಯುಂಟಾಗಿದೆ ಚೈತನ್ಯದ ಜತೆಯಲ್ಲಿ
ಅನ್ಯ ಭಾವವನು ನಾನು ಈಗ ಆದರಿಸುವುದಿಲ್ಲ
ಧರ್ಮ ಜನೇಶ್ವರನ ಹಾಡುವೆನು ಆನಂದದಿಂದ
ಪ್ರೀತ ಜಿನೇಶ್ವರನಲ್ಲಿ ಭಂಗ ಬಾರದ ರೀತಿಯಿಂದ
ಮನ-ಮಂದಿರದಲ್ಲಿ ಅನ್ಯವಾವುದು ಬಾರದಂದು

ಅಖಂಡ ಆನಂದ ಸ್ವರೂಪನಾದ ಪ್ರಭು ನನ್ನ ಆತ್ಮನಿದ್ದು ನಾನು ಅವನದೇ ಗುಣಗಾನ ಮಾಡುತ್ತೇನೆ. ನಾನು ಪುಣ್ಯ- ಪಾಪದ ಗುಣಗಾನ ಮಾಡುವುದಿಲ್ಲ. ನಮ್ಮ ಮನ - ಮಂದಿರದಲ್ಲಿ ವಿಕಲ್ಪಗಳಿಗೆ ಸ್ಥಾನ ಕೊಡದಿರುವುದು ಇದು ನಮ್ಮ ಕುಲ ಪರಂಪರೆಯ ರೀತಿಯಿದೆ.

ಎಲ್ಲಿ ಯಾರದು ಅಭಿರುಚಿಯಿರುತ್ತದೆ ಅಲ್ಲಿ ಅವರ ವಾಸವಿರುತ್ತದೆ; ಎಲ್ಲಿ ಯಾರದು ಅಭಿರುಚಿ ಇರುವುದಿಲ್ಲ ಅಲ್ಲಿ ಅವರದು ವಾಸವಿರುವುದಿಲ್ಲ. ಯಾರು ಆತ್ಮನಲ್ಲಿ ಅಭಿರುಚಿ ಮಾಡಿ ಆತ್ಮನಲ್ಲಿಯೇ ವಾಸ ಮಾಡಿದ್ದಾರೆ ಅವರುಬೇಕಾದರೆ ಗೃಹಸ್ಥರಾಗಿರಲಿ ಅಥವಾ ಮುನಿಯಾಗಿರಲಿ ಅವರೀರ್ವರು ಅಲ್ಪಕಾಲದಲ್ಲಿಯೇ ಸಿದ್ಧ-ಸುಖವನ್ನು ಪಡೆಯುವರು. ಎಲ್ಲಿ ಯಾರದು ಪ್ರೀತಿಯಿರುತ್ತದೆ ಅಲ್ಲಿಯೇ ಅವರು ಲೀನರಿರುತ್ತಾರೆ, ಇತರ ಕಡೆಗೆ ಲೀನರಾಗುವುದು ಅವರಿಗೆ ಒಳ್ಳೆಯದೆನಿಸುವುದಿಲ್ಲ. ಯಾರಿಗೆ ನಿಜಾತ್ಮನ ಪ್ರಭುತೆಯ ದಿವ್ಯ - ಸಂದೇಶವು ಕೇಳುವುದಕ್ಕೆ ದೊರಕಿದೆ, ಅವರಿಗೆ ತಮ್ಮ ಆತ್ಮನ ಹೊರತಾಗಿ ಬೇರೆ ಎಲ್ಲಿಯೂ ಇರುವುದಕ್ಕೆ ಮನಸ್ಸು ಬರುವುದಿಲ್ಲ. ವನ ವಿಹಾರಿಯಾದ ದಿಗಂಬರ ಸಂತರು ಮಹಾಲಕ್ಷ್ಮಿಯ ಅಧಿಪತಿಯಾದ ಆಚಾರ್ಯ ಯೋಗೀಂದುದೇವರು ಭಗವಂತರ ವಾಣಿಯ ಆಧಾರ ತೆಗೆದುಕೊಂಡು ಹೀಗೆ ಆಜ್ಞಾಪಿಸುತ್ತಿದ್ದಾರೆ.

ಧರ್ಮಾತ್ಮನಿಗೆ ಆತ್ಮ-ರಸದ ಎದುರಿಗೆ ಬೇರೆ ಯಾವ ರಸವೂ ಮನಸ್ಸಿಗೆ ಹಿಡಿಸುವುದಿಲ್ಲ-ಎಲ್ಲಿ ಲಕ್ಷ್ಯ ಹೋಗುವುದೇ ಇಲ್ಲ. ಜ್ಞಾನೀ ಗೃಹಸ್ಥನಿರಲಿ ಅಥವಾ ಮುನಿಯಿರಲಿ ಅವರೀರ್ವರು ಆತ್ಮನಲ್ಲಿಯೇ ವಾಸ ಮಾಡುತ್ತಾರೆ. ನೀನು ಈ ಮಾತಿನ ನಿಷೇಧ ಮಾಡಬೇಡ ! ಒಂದು ವೇಳೆ ಈ ವಸ್ತು ಸ್ವಭಾವದ ನಿಷೇಧ ಮಾಡಿದೆಯೆಂದರೆ ನೀನು ಜಿನದೇವರ ವಿರೋಧಿಯಾಗುವೆ. ಮತ್ತು ಯಾರು ಜಿನದೇವರ ವಿರೋಧಿಯಾಗುವರು ಅವರು ಆತ್ಮನ ವಿರೋಧಿ ಯಿದ್ದಾರೆ. ಮಿಥ್ಯಾದೃಷ್ಟಿಯು ಸಮ್ಯಕ್‌ದೃಷ್ಟಿಯಾದನು ಎಂದರೆ ಬಹಿರಾತ್ಮನು ಅಂತರಾತ್ಮನಾದನು ಯಾವಾಗ ಅಂತರಾತ್ಮನಾಗುವನು ಆಗ ಅವನ ದೃಷ್ಟಿಯಲ್ಲಿ ಅವನ ಜೀವನದಲ್ಲಿ ಸ್ವಲ್ಪವಾದರೂ ಅಂತರವಾಗುವುದೋ ಅಥವಾ ಇಲ್ಲವೋ ? ಬಹಿರಾತ್ಮನ ನಿವಾಸವಂತೂ ರಾಗದಲ್ಲಿ ಇರುತ್ತದೆ, ಅಂತರಾತ್ಮನು ರಾಗದಲ್ಲಂತೂ ವಾಸಿಸುವ ಸಾಧ್ಯತೆಯಿಲ್ಲ, ಅವನ ನಿವಾಸವಂತೂ ಆತ್ಮನಲ್ಲಿಯೇ ಇರುತ್ತದೆಯೆಂದು ಸ್ವಲ್ಪ -ವಿಚಾರವನ್ನಾದರೂ ಮಾಡು! ಸೋದರನೇ! ಸರಿಯಿರುವುದನ್ನು ವಿರೋಧಿಸಬೇಡ. ಯಾರು ಆತ್ಮನ ಶ್ರದ್ಧೆ-ಜ್ಞಾನ-ಸ್ಥಿರತೆಯನ್ನು ಪ್ರಾಪ್ತ ಮಾಡಿಕೊಂಡಿದ್ದಾರೆ ಅವರು ಗೃಹಸ್ಥರಿರಲಿ ಅಥವಾ ಮುನಿಯಿರಲಿ ಅಲ್ಪಕಾಲದಲ್ಲಿ ಅವಶ್ಯವಾಗಿ ಸಿದ್ಧ ಸುಖ ಪಡೆಯುತ್ತಾರೆ.

ಆಹಹ ! ಕಾನನದಲ್ಲಿ ವಾಸ ಮಾಡುವಂಥ ವೀತರಾಗೀ ಸಾಧುಗಳನ್ನು ಒಂದು ಸಲ ಕಣ್ಣು ಬಿಟ್ಟು ನೋಡು! ಕಾನನದಲ್ಲಿ ಯಾವ ಪ್ರಕಾರ ಸಿಂಹವು ಗರ್ಜನೆ ಮಾಡುತ್ತದೆ ಅದೇ ಪ್ರಕಾರ ಮುನಿರಾಜರುಗಳು ವಸ್ತು ಸ್ವರೂಪದ ಗರ್ಜನೆ ಮಾಡುತ್ತಾರೆ. ಯಾವ ಪ್ರಕಾರ ಸಿದ್ಧ ಭಗವಂತರು ಶುದ್ಧಾತ್ಮನ ಅನುಭವ ಮಾಡುತ್ತಿದ್ದಾರೆ, ಅದೇ ಪ್ರಕಾರ

ಸಮ್ಯಕ್‌ದೃಷ್ಟಿಯು ಕೂಡ ಆತ್ಮಾನುಭವ ಮಾಡುತ್ತಾನೆ. ಸಿದ್ಧ ಮತ್ತು ಸಾಧಕ ಇವರೀರ್ವರು ಒಂದೇ ಜಾತಿಯ ಅತೀಂದ್ರಿಯ ಆನಂದದ ಅನುಭವ ಮಾಡುತ್ತಾರೆ, ಅದರಲ್ಲಿ ಸ್ವಲ್ಪವು ಕೂಡ ಅಂತರವಿರುವುದಿಲ್ಲ. ಯಾವ ಸಾಧನದ ಮೂಲಕ ಅತೀಂದ್ರಯ ಆನಂದದ ಪ್ರಾಪ್ತಿಯಾಗುತ್ತದೆ ಅದೇ ಸಾಧನವು ಸಿದ್ಧ-ಸುಖದ ಉಪಾಯವಿದೆ ಎಂದರೆ ದರ್ಶನ, ಜ್ಞಾನ ಅಥವಾ ಅತೀಂದ್ರಿಯ ಆನಂದವು ಸ್ವಯಂ ಪೂರ್ಣಾನಂದದ ಸಾಧನವಿದೆ.

ಆದುದರಿಂದ ಅತೀಂದ್ರಿಯ ಆನಂದವೇ ಪೂರ್ಣಾನಂದವಾದ ಸಿದ್ಧ -ಸುಖದ ಸಾಧನವಿದೆ, ಇದನ್ನು ಹೊರತುಪಡಿಸಿ ಬೇರೆ ಯಾವ ವ್ಯವಹಾರ ಮೊದಲಾದವು ಸಾಧನವಿಲ್ಲ. ಸ್ವಾನುಭವವೇ ನಿಶ್ಚಯ ಮೋಕ್ಷ ಮಾರ್ಗ ಸ್ವರೂಪ ರತ್ನತ್ರಯವಿದೆ, ಏಕೆಂದರೆ ಸ್ವಾನುಭವದಲ್ಲಿ ಸಮ್ಯಗ್ದರ್ಶನ-ಜ್ಞಾನ-ಚಾರಿತ್ರ ಇವು ಮೂರೂ ಬಂದು ಬಿಡುತ್ತವೆ. ಅದಕ್ಕಾಗಿಯೇ ಸ್ವಾನುಭವ ಅತೀಂದ್ರಿಯ ಆನಂದವೇ ಮೋಕ್ಷಮಂದಿರದ ನೇರವಾದ ಮಾರ್ಗವಿದೆಯೆಂದು ಹೇಳಿದ್ದಾರೆ. ಇಲ್ಲಿ ಮುನಿರಾಜರಂತೂ ವಿಕಲ್ಪ ಮತ್ತು ಹಿಂಸೆ ಮೊದಲಾದ ಐದು ಪಾಪಗಳ ತ್ಯಾಗ ರೂಪದ ಶುಭ ಪ್ರವೃತ್ತಿಯಿದ್ದರು ಕೂಡ ಅದೇನು ಮೋಕ್ಷಮಾರ್ಗವಲ್ಲ. ನಿಶ್ಚಯ ಚಾರಿತ್ರವೆಂದರೆ ಒಂದು ಸ್ವಾನುಭವವೇ ಇದೆ. ಅತೀಂದ್ರಿಯ ಆನಂದವೇ ಇದೆ.

ತತ್ತ್ವಜ್ಞಾನಿಗಳು ವಿರಳವಾಗಿಯೇ ದೊರಕುತ್ತಾರೆಂದು ಈಗ ಹೇಳುತ್ತಾರೆ, -

ವಿರಲಾ ಜಾಣಹಿಂ ತತ್ತು ಬುಹ ವಿರಲಾ ಣಿಸುಣಹಿಂ ತತ್ತು
ವಿರಲಾ ಝಾಯಹಿಂ ತತ್ತು ಜಿಯ ವಿರಲಾ ಧಾರಹಿಂ ತತ್ತು ॥66॥

ವಿರಳರು ತಿಳಿವರು ತತ್ತ್ವವನು ವಿರಳರು ಕೇಳ್ವರು ತತ್ತ್ವವನು
ವಿರಳರು ಮಾಳ್ಪರು ನಿಜಧ್ಯಾನ ವಿರಳರು ಧರಿಪರು ಎಲೆ ಜೀವ ॥66॥

ಅರ್ಥ :- ತತ್ತ್ವವನ್ನು ತಿಳಿದುಕೊಳ್ಳುವಂಥ ವಿದ್ವಾಂಸರು ವಿರಳವಾಗಿಯೇ ಇದ್ದಾರೆ, ತತ್ತ್ವವನ್ನು ಕೇಳುವಂಥ ಶ್ರೋತೃವಂತೂ ವಿರಳರಾಗಿಯೇ ಇದ್ದಾರೆ. ತತ್ತ್ವವನ್ನು ಧ್ಯಾನಿಸುವಂಥ ಜೀವರುಗಳು ವಿರಳರಾಗಿಯೇ ಇದ್ದಾರೆ. ಮತ್ತು ತತ್ತ್ವವನ್ನು ಧಾರಣ ಮಾಡಿ ಸ್ವಾನುಭವಿಯಾಗುವವರು ಕೂಡ ವಿರಳರಾಗಿಯೇ ಇದ್ದಾರೆ.

ಇಂದು ಭಗವಾನ ಮಹಾವೀರ ಸ್ವಾಮಿಯ ದಿವ್ಯ ಧ್ವನಿಯು ಹೊರಟ ದಿವಸವಿದೆ. ಹಾಗೆ ಪ್ರಭುವಿಗೆ ಕೇವಲ ಜ್ಞಾನವಂತೂ ವೈಶಾಖ ಶುದ್ಧ ದಶಮಿಯ ತಿಥಿಯಂದು ಆಗಿತ್ತು, ಆದರೆ ಅರವತ್ತಾರು ದಿವಸಗಳವರೆಗೆ ದಿವ್ಯ ಧ್ವನಿಯೇ ಹೊರಡಲಿಲ್ಲ. ಆಗ ಭಗವಂತರ ದಿವ್ಯಧ್ವನಿಯನ್ನು ಗ್ರಹಣ ಮಾಡುವಂಥ ಗಣಧರರ ಉಪಸ್ಥಿತಿ ಇಲ್ಲದಿರುವುದರ ಕಾರಣದಿಂದ ದಿವ್ಯಧ್ವನಿಯು ಹೊರಡಲಿಲ್ಲವೆಂದು ವ್ಯವಹಾರದಿಂದ ಹೇಳಲಾಗುತ್ತದೆ. ಆದರೆ ಆಗ ವಾಸ್ತವಿಕವಾಗಿ ವಾಣಿಯು ಹೊರಡುವ ಯೋಗವೇ ಇಲ್ಲದಿರುವುದರಿಂದ ವಾಣಿಯು ಹೊರಡಲಿಲ್ಲ. ಅನಂತರ ಇಂದ್ರನು ವಿಚಾರ ಮಾಡಿ ಇಂದ್ರಭೂತಿಯ - ಗೌತಮರ ಹತ್ತಿರಕ್ಕೆ ಬರುತ್ತಾನೆ ಮತ್ತು ಆರು ದ್ರವ್ಯ, ಏಳು ತತ್ತ್ವ ಹಾಗೂ ಒಂಭತ್ತು ಪದಾರ್ಥಗಳ ಸ್ವರೂಪವನ್ನು ತಿಳಿಸಿಕೊಡುವ ಸಲುವಾಗಿ ಅವರನ್ನು ಕೇಳುತ್ತಾನೆ. ಇವಂತೂ ಗೌತಮರಿಗೆ ಬರುತ್ತಲೇ ಇರಲಿಲ್ಲ, ಆದುದರಿಂದ ಅವರು ನಡೆ ನಿನ್ನ ಗುರುಗಳ ಹತ್ತಿರ ಹೋಗೋಣ ! ಎಂದು ಹೇಳುತ್ತಾರೆ. ಆಗ ಇಂದ್ರನು ಗೌತಮರನ್ನು ಕರೆದುಕೊಂಡು ಭಗವಂತರ ಹತ್ತಿರ ಬರುತ್ತಾನೆ. ಅಲ್ಲಿ ಗೌತವರು ಸಮವಸರಣವನ್ನು ನೋಡುತ್ತಿದ್ದಂತೆಯೇ ಅವರ ಮಾನ ಕಷಾಯವು ಕರಗಿ ಸೋರಿ ಹೋಯಿತು. ಆಗ ಅವರು ಅಂತರ್ಯದಲ್ಲಿ ಹೊರಟು ಹೋಗುತ್ತಾರೆ, ಮತ್ತು ಆತ್ಮ ಜ್ಞಾನವನ್ನು ಪ್ರಾಪ್ತ ಮಾಡಿಕೊಳ್ಳುತ್ತಾರೆ. ಅವರದು ಅಂಥ ಯೋಗ್ಯತೆಯೇ ಇತ್ತಲ್ಲವೆ ! ಕೂಡಲೆ ಭಗವಂತರ ದಿವ್ಯಧ್ವನಿಯು ಹೊರಡುತ್ತದೆ. ಅಂದು ಶ್ರಾವಣವದ್ಯ ಪ್ರತಿಪದೆಯ ದಿವಸವಿದ್ದು ಭಗವಂತರ ಮೊಟ್ಟ ಮೊದಲನೆಯ ದಿವ್ಯಧ್ವನಿಯು ಹೊರಟಿತು ಆದನ್ನು ಗೌತಮ ಗಣಧರರು ಗ್ರಹಣ ಮಾಡಿ ಭಾವಶ್ರುತರೂಪದಿಂದ

ಪರಿಣಮನ ಮಾಡಿ ವಾಣಿಯನ್ನು ಸೂತ್ರಗಳ ರೂಪದಿಂದ ಹೆಣೆದರು. ಅಂತರ್ಮುಹೂರ್ತದಲ್ಲಿ ದ್ವಾದಶಾಂಗದ ರಚನೆ ಮಾಡಿದರು. ಈ ಹೊತ್ತಿನ ದಿವಸ ಅದರ ರಚನೆಯಾಗಿತ್ತು. ಆ ಹನ್ನೆರಡು ಅಂಗ ಮತ್ತು ಹದಿನಾಲ್ಕು ಪೂರ್ವಗಳ ಸಾರವೇನಿದೆಯೆಂಬುದನ್ನು ಇಲ್ಲಿ ಹೇಳಲಾಗಿದೆ.

ಸಂಯೋಗ, ವಿಕಲ್ಪ ಹಾಗೂ ಒಂದು ಸಮಯದ ಅವಸ್ಥೆಯ ಉಪೇಕ್ಷೆ ಮಾಡಿ ತ್ರಿಕಾಲ ಜ್ಞಾಯಕ ಸ್ವಭಾವವನ್ನು ಆದರಿಸಬೇಕೆಂಬ ಸಾರವನ್ನು ಯೋಗಸಾರದ ರೂಪದಲ್ಲಿ ಸರ್ವಜ್ಞ ಭಗವಂತರ ವಾಣಿಯಲ್ಲಿ ಬಂದಿದೆ. ಧ್ರುವ ಶಾಶ್ವತ, ಏಕರೂಪ, ಅನಾದಿ ಅನಂತವಾದಂಥ ಆತ್ಮ ವಸ್ತುವಿನಲ್ಲಿ ಏಕಾಕಾರ ಹೊಂದಿ ಸ್ವರೂಪಾನಂದದ ಅನುಭವ ಮಾಡುವುದನ್ನು ಯೋಗಸಾರವೆಂದು ಹೇಳುತ್ತಾರೆ ಮತ್ತು ಅದು ಮೋಕ್ಷದ ಮಾರ್ಗವಿದೆ.

ಆತ್ಮ ಜ್ಞಾನವನ್ನು ಪ್ರಾಪ್ತಮಾಡಿಕೊಳ್ಳುವುದು ಅತ್ಯಂತ ಕಠಿಣವಿರುವುದರಿಂದ ತೀರ ಕಡಿಮೆ ಸಂಖ್ಯೆಯಲ್ಲಿ ಈ ಆತ್ಮಜ್ಞಾನದ ಲಾಭ ಮಾಡಿಕೊಳ್ಳುವ ಜೀವರುಗಳಿದ್ದಾರೆ. ಆತ್ಮತತ್ತ್ವದ ಮಾತನ್ನು ಹೇಳುವವರಂತೂ ದುರ್ಲಭರಿದ್ದಾರೆ, ಮತ್ತು ಅದನ್ನು ಕೇಳುವಂಥವರು ಕೂಡ ವಿರಳವಾಗಿಯೇ ಇದ್ದಾರೆ. ಯಾರಿಗೆ ನಿಮಿತ್ತದ-ವ್ಯವಹಾರದ ಮತ್ತು ರಾಗಾದಿಗಳ ಮಾತುಗಳು ರುಚಿಸುತ್ತವೆ ಅವರಿಗೆ ಆತ್ಮ ಸ್ವಭಾವದ ಮಾತು ರುಚಿಸುವುದೇ ಇಲ್ಲ.

ಭಗವಾನ ಆತ್ಮನು ಶುದ್ಧ ಆನಂದದ ಪುಂಜನಿದ್ದು ಇವನನ್ನು ಯಾರೋ ಓರ್ವ ಪಂಡಿತ ಜನರೇ ತಿಳಿದುಕೊಳ್ಳುತ್ತಾರೆ. ಶುದ್ಧ ಆತ್ಮ ತತ್ತ್ವದ ಮಾತನ್ನು ಕೇಳುವವರಂತೂ ಎಲ್ಲಿಯೋ ಒಬ್ಬಿಬ್ಬರು ವಿರಳರಾಗಿಯೇ ಇರುತ್ತಾರೆ. ಆತ್ಮತತ್ತ್ವದ ಧ್ಯಾನ ಮಾಡುವವರು ಕೂಡ ತೀರ ವಿರಳರಾಗಿಯೇ ಇರುತ್ತಾರೆ.

ಅಂತರ್ಯದಲ್ಲಿ ಭಗವಾನ ಆತ್ಮನ ಕಡೆಗೆ ಪ್ರವೃತ್ತಿ ಮಾಡಿ, ಸ್ವರೂಪವನ್ನು ಧ್ಯೇಯವನ್ನಾಗಿ ಮಾಡಿಕೊಂಡು ಅದರ ಧ್ಯಾನ ಮಾಡುವಂಥ ಜೀವರುಗಳು ವಿರಳವಾಗಿಯೇ ಇದ್ದಾರೆ. ಪುಣ್ಯ ಮಾಡುವುದು ಅಥವಾ ಅದರ ಫಲದಲ್ಲಿ ಇಂದ್ರ -ಚಕ್ರವರ್ತಿ ಮೊದಲಾದ ಪದಗಳು ದೊರಕುವುದು ದುರ್ಲಭವೆಂದು ಹೇಳಲಿಲ್ಲ, ಆದರೆ ಆತ್ಮನ ಧ್ಯಾನ ಮಾಡುವುದು ದುರ್ಲಭವಿದೆಯೆಂದು ಹೇಳಲಾಗಿದೆ. ಆದುದರಿಂದ ಧ್ಯಾನ ಮಾಡುವಂಥ ಜೀವರುಗಳು ಜಗತ್ತಿನಲ್ಲಿ ದುರ್ಲಭರಿದ್ದಾರೆ. ರಾಗರಹಿತ ವೀತರಾಗ ಆತ್ಮನ ವೀತರಾಗ ಪರಿಣತಿಯನ್ನು ಪ್ರಕಟ ಮಾಡಿ ಅದನ್ನು ಧಾರಣ ಮಾಡುವುದು ಮಹಾದುರ್ಲಭವಿದೆ. ಈ ಧಾರಣವನ್ನು ಸ್ಮೃತಿಯಲ್ಲಿ ತಂದುಕೊಂಡು ಪುನಃ ಪುನಃ ಅನುಭವ ಮಾಡುವಂಥ ಜೀವರುಗಳು ಅತ್ಯಂತ-ಅತ್ಯಂತ ವಿರಳರಾಗಿದ್ದಾರೆ. ಇದು ಸರ್ವಜ್ಞ ಭಗವಂತರ ದಿವ್ಯಧ್ವನಿಯಲ್ಲಿ ಬಂದಂಥ ಮಾತು ಇದೆ.

ಶಾಸ್ತ್ರಗಳ ಧಾರಣ ಶ್ಲೋಕಗಳ ಧಾರಣ ಮಾಡುವಂಥವರಂತೂ ಜಗತ್ತಿನಲ್ಲಿ ಬಹಳಷ್ಟು ಜನರು ಇದ್ದಾರೆ. ಆದರೆ ಸಮ್ಯಗ್ದರ್ಶನ-ಜ್ಞಾನದಲ್ಲಿ ಎಂದರೆ ಅನುಭವದಲ್ಲಿ ಯಾವ ಆತ್ಮನು ಬರುತ್ತಾನೆ ಅವನ ಧಾರಣ ಮಾಡುವಂಥ ಜೀವರುಗಳು ಮಾತ್ರ ತೀರ ಕಡಮೆಯಿದ್ದಾರೆ. ಆದುದರಿಂದ ಅತ್ಯಲ್ಪ ಜೀವರುಗಳು ಈ ಅನುಪಮ ತತ್ತ್ವದ ಲಾಭ ಪಡೆಯುವ ಸಾಧ್ಯತೆಯಿದೆ. ಏಕೆಂದರೆ ಮನರಹಿತ ಅಸಂಜ್ಞೀ ಪಂಚೇಂದ್ರಿಯದ ಜೀವರುಗಳಲ್ಲಂತೂ ವಿಚಾರ ಮಾಡುವ ಶಕ್ತಿಯೇ ಇರುವುದಿಲ್ಲ, ಮತ್ತು ಸಂಜ್ಞೀ ಪಂಚೇಂದ್ರಿಯ ಜೀವರುಗಳಲ್ಲಿ ನಾರಕಿಗಳಂತೂ ಹಗಲಿರುಳು ಕಷಾಯದ ಕಾರ್ಯಗಳಲ್ಲಿಯೇ ತೊಡಗಿರುತ್ತಾರೆ. ಪಶುಗಳಲ್ಲಿ ಕೂಡ ಆತ್ಮ ಜ್ಞಾನ ಪಡೆಯುವುದು ಅತ್ಯಂತ ದುರ್ಲಭವಿದೆ. ದೇವಗಳಲ್ಲಿ ವಿಷಯಗಳ ತೀವ್ರತೆಯಿದ್ದು ವೈರಾಗ್ಯ-ಭಾವನೆಯ ದುರ್ಲಭತೆಯಿದೆ.

ಮನುಷ್ಯ ಗತಿಯಲ್ಲಿಯೇ ಆತ್ಮಜ್ಞಾನದ ಪ್ರಾಪ್ತಿಯ ಸಾಧನವು ಸುಲಭವಿದೆ. ಆದಾಗ್ಯೂ ಅದರ ಪ್ರಾಪ್ತಿಯು ಅತ್ಯಂತ ದುರ್ಲಭವಿದೆ. ಏಕೆಂದರೆ ಮನುಷ್ಯರಲ್ಲಿ ಅದೆಷ್ಟೋ ಜನರಂತೂ ಹಗಲಿರುಳು ಶರೀರದ ಅನುಕೂಲತೆಯನ್ನು ಕಾಯ್ದುಕೊಳ್ಳುವುದರಲ್ಲಿಯೇ ತೊಡಗಿರುತ್ತಾರೆ. ವ್ಯವಹಾರದ ಅಭಿರುಚಿಯುಳ್ಳ ಅದೆಷ್ಟೋ ಜನರು ವ್ಯವಹಾರದ

ಗ್ರಂಥಗಳನ್ನೇ ಓದುತ್ತಿರುತ್ತಾರೆ-ಕೇಳುತ್ತಿರುತ್ತಾರೆ. ಅವರಿಗೆ ಅಧ್ಯಾತ್ಮದ ಗ್ರಂಥಗಳನ್ನು ಓದಲು-ಕೇಳಲು ಸಮಯವೇ ಇಲ್ಲ ಎಂದರೆ ಅದರ ಅವಶ್ಯಕತೆಯೇ ಇಲ್ಲ. ನ್ಯಾಯ,ವ್ಯಾಕರಣ, ಜ್ಯೋತಿಷ , ವೈದ್ಯಕೀಯ ಮೊದಲಾದವುಗಳ ಪಾಂಡಿತ್ಯವನ್ನಂತೂ ಪಡೆದುಕೊಳ್ಳುತ್ತಾರೆ. ಆದರೆ ಅಧ್ಯಾತ್ಮ ಶಾಸ್ತ್ರಗಳನ್ನು ಸೂಕ್ಷ್ಮ ದೃಷ್ಟಿಯಿಂದ ಯಾರೂ ಓದುವುದೂ ಇಲ್ಲ, ಚರ್ಚಿಸುವುದೂ ಇಲ್ಲ. ವ್ಯವಹಾರ ಮಾಡುತ್ತ-ಮಾಡುತ್ತ ಧರ್ಮವಾಗಿ ಬಿಡುವುದೆಂದು ಮನ್ನಿಸುತ್ತಾರೆ; ಆದರೆ ಅಸಂಗ, ನಿರ್ವಿಕಲ್ಪ,ವೀತರಾಗ ತತ್ತ್ವವನ್ನು ತಿಳಿದುಕೊಂಡು ಮನನ ಮಾಡುವಂಥ ಮಹಾನುಭಾವರುಗಳು ತೀರ ಕಡಿಮೆ ಸಂಖ್ಯೆಯಲ್ಲಿ ದೊರಕುತ್ತಾರೆ.

ಭಗವಾನ ಆತ್ಮನ ಅಂತರ್ಯದಲ್ಲಿ ಒಂದು ವೀತರಾಗತೆಯೇ ತುಂಬಿಕೊಂಡಿದೆ; ಕೇವಲ ಚೈತನ್ಯರತ್ನಗಳೇ ತುಂಬಿಕೊಂಡಿವೆ. ಅವನಲ್ಲಿ ರಾಗ-ದ್ವೇಷರೂಪದ ವಿಕಾರಗಳಿಗೆ ಯಾವ ಸ್ಥಾನವೇ ಇಲ್ಲ. ನಿಶ್ಚಯ ನಯದಿಂದ ಓರ್ವ ತನ್ನ ಆತ್ಮನೇ ಆರಾಧ್ಯದೇವನಿದ್ದಾನೆ. ಈ ಮಾತಿನ ಮೇಲೆ ವ್ಯವಹಾರೀ ಜನರು ವಿಶ್ವಾಸವನ್ನೇ ಮಾಡುವ ಸಾಧ್ಯತೆಯಿಲ್ಲ. ನಿಜವಾಗಿ ನೋಡಿದರೆ ತನ್ನ ನಿಜಾತ್ಮನೇ ಆರಾಧಿಸಲು ಯೋಗ್ಯನಿದ್ದಾನೆ, ಸೇವನೆ ಮಾಡಲು ಯೋಗ್ಯನಿದ್ದಾನೆ. ವೀತರಾಗ ದೇವರಂತೂ ವ್ಯವಹಾರದಿಂದ ಆರಾಧ್ಯದೇವರಿದ್ದಾರೆ. ಇಂಥ ಮಾತುಗಳು ಅಧ್ಯಾತ್ಮ ಶಾಸ್ತ್ರಗಳಲ್ಲಿ ತುಂಬಿ ಹೋಗಿವೆ, ಅವನ್ನು ಯಾರೂ ಸೂಕ್ಷ್ಮ ದೃಷ್ಟಿಯಿಂದ ಓದುವುದಿಲ್ಲ-ಕೇಳುವುದಿಲ್ಲ.

ಈ ಜೀವನು ರಾಗದ ಕಥೆಯನ್ನು ಅನಾದಿ ಕಾಲದಿಂದ ಸಾಕಷ್ಟು ಕೇಳಿದ್ದಾನೆ, ಪರಿಚಯ ಮಾಡಿಕೊಂಡಿದ್ದಾನೆ ಮತ್ತು ಅನುಭವಿಸಿದ್ದಾನೆ, ಆದರೆ ರಾಗದಿಂದ ಭಿನ್ನನಾದ ಮತ್ತು ತನ್ನ ಸ್ವಭಾವದಿಂದ ಅಭಿನ್ನನಾದ ಆತ್ಮನ ಮಾತನ್ನು ಎಂದೂ ಕೇಳಿಲ್ಲವೆಂದು ಭ.ಕುಂದಕುಂದಾಚಾರ್ಯ ದೇವರು ಕೂಡ ಸಮಯಸಾರದಲ್ಲಿ ಹೇಳಿದ್ದಾರೆ. ನಿಮಿತ್ತ ಹಾಗೂ ರಾಗದಿಂದ ಭಿನ್ನನಾದ ಭಗವಾನ ಆತ್ಮನ ಮಾತು ಕೇಳುವುದಕ್ಕೆ ದೊರಕುವುದು ಕೂಡ ಅತ್ಯಂತ ದುರ್ಲಭವಿದೆ. ನಿಮಿತ್ತದಿಂದ, ರಾಗ ಮೊದಲಾದವುಗಳ ವ್ಯವಹಾರದಿಂದ ಆತ್ಮನನ್ನು ತಿಳಿದುಕೊಳ್ಳಬಹುದಾಗಿದೆಯೆಂದು ಮನ್ನಿಸುವಂಥವರಿಗೆ ನಿಮಿತ್ತ ಮೊದಲಾದವುಗಳಿಂದ ಆತ್ಮನು ತಿಳಿದು ಬರುವ ಸಾಧ್ಯತೆಯಿಲ್ಲವೆಂಬ ಮಾತನ್ನು ಸ್ವೀಕಾರ ಮಾಡುವುದು ಕೂಡ ಅತ್ಯಂತ ಕಠಿಣವೆನಿಸುತ್ತದೆ. ಸ್ವಭಾವದಿಂದ ಏಕತ್ವ ಮತ್ತು ವಿಭಾವದಿಂದ ವಿಭಕ್ತನಾದ ಆತ್ಮನ ಮಾತು ಜಗತ್ತಿಗೆ ಕೇಳಲು ದೊರಕುವುದು ಕಠಿಣವಿದೆ- ದುರ್ಲಭವಿದೆ.

ಅದೆಷ್ಟೋ ಜನರು - ಜ್ಞಾನಿಯೆನಿಸಿಕೊಳ್ಳುವವರು ಕೂಡ ಕ್ರಿಯಾಕಾಂಡದಿಂದ ಧರ್ಮವಾಗುತ್ತದೆಯೆಂದು ಮನ್ನಿಸುತ್ತಾರೆ, ಆದರೆ ಕ್ರಿಯಾಕಾಂಡದಿಂದಂತೂ ಧರ್ಮವಾಗುವುದಿಲ್ಲ ಮತ್ತು ವಿಕಲ್ಪದಿಂದ ಅಥವಾ ಗುಣಭೇದದಿಂದ ಎಂದರೆ ಭಗವಾನ ಆತ್ಮ ಹಾಗೂ ಅವನ ಆನಂದ ಗುಣವೆಂಬ ಗುಣಭೇದದ ಲಕ್ಷ್ಯದಿಂದ ಕೂಡ ಧರ್ಮವಾಗುವುದಿಲ್ಲ. ಇಂಥ ಮಾತನ್ನು ಹೇಳುವಂಥ ಜ್ಞಾನಿಗಳು ಎಲ್ಲಿಯಾದರೂ ಒಬ್ಬಿಬ್ಬರು ವಿರಳವಾಗಿ ದೊರಕುತ್ತಾರೆ ಮತ್ತು ಇಂಥವರು ದೊರಕಿದರೂ ಕೇಳುವಂಥ ರುಚಿವಂತರು ದೊರಕುವುದು ದುರ್ಲಭವಿದೆ.

ಸೋದರನೇ! ನೀನು ಯಾವ ನಿರ್ದೋಷ ದಶೆಯನ್ನು ಎಂದರೆ ರತ್ನತ್ರಯವನ್ನು ಪ್ರಕಟಪಡಿಸಿಕೊಳ್ಳಲು ಅಪೇಕ್ಷಿಸುತ್ತಿರುವೆಯೋ , ಅಂಥ ಅನಂತ ಪರ್ಯಾಯಗಳ ಪುಂಜರೂಪನು ನೀನು ಸ್ವಯಂ ಇರುವೆ. ಇದಕ್ಕಿಂತ ಬೇರೆ ನಿನಗಿನ್ನೇನು ಬೇಕು ? ಈ ಮಾತುಗಳು ರುಚಿಯುಳ್ಳ ಜೀವರುಗಳ ಸಲುವಾಗಿ ಇವೆ. ಇಂಥ ಜೀವರುಗಳು ಜಗತ್ತಿನಲ್ಲಿ ಅತ್ಯಂತ ವಿರಳರಾಗಿಯೇ ಇದ್ದಾರೆ. ಅವರಲ್ಲೂ ಕೂಡ ಆತ್ಮಾನುಭೂತಿಯನ್ನು ಪ್ರಕಟಪಡಿಸಿಕೊಳ್ಳಬೇಕೆಂಬ ಜೀವರುಗಳಂತೂ ತೀರ ವಿರಳ ..... ವಿರಳ..... ವಿರಳರಾಗಿ ಇದ್ದಾರೆ.

ಈ ಮನುಷ್ಯ ಜನ್ಮವನ್ನು ಪ್ರಾಪ್ತಮಾಡಿಕೊಂಡು ನಿರ್ಮಲ ಅನುಭೂತಿಯನ್ನು ಪ್ರಕಟಪಡಿಸಿಕೊಳ್ಳುವ ಉಪಾಯ ಮಾಡುವುದು ಅತ್ಯಂತ ಆವಶ್ಯಕವಿದೆ. ಯಾರಿಗೆ ಆತ್ಮಜ್ಞಾನದ ಅಭಿರುಚಿಯುಂಟಾಗಿದೆ ಅವರಿಗೆ ಮಾರ್ಗವು ದೊರಕೇ ದೊರಕುತ್ತದೆ. ಆ ಮಾರ್ಗದಿಂದ ಜೀವನು ನೇರವಾಗಿ ಮೋಕ್ಷಕ್ಕೆ ತಲುಪುತ್ತಾನೆ.

ಈ ಭಯಾನಕವಾದ ಸಂಸಾರದಲ್ಲಿ ಭ್ರಮಣ ಮಾಡುತ್ತಿರುವ ಜೀವನಿಗೆ ಆತ್ಮಜ್ಞಾನ ರೂಪದ ಮಹಾರತ್ನವು ಎಲ್ಲಿ ದೊರಕಿಯೇ ಇಲ್ಲ. ಒಂದು ವೇಳೆ ಈಗ ನಿನಗೆ ಈ ಮಹಾರತ್ನವು ದೊರಕಿದ್ದರೆ ಎಂದರೆ ನಿನಗೆ ಆತ್ಮಜ್ಞಾನವಾಗಿದ್ದರೆ ಸ್ವಲ್ಪವೂ ಪ್ರಮಾದ ಮಾಡಬೇಡ. ವಿಷಯಗಳ ಲೋಲುಪತೆಯಲ್ಲಿ ಈ ರತ್ನವು ಕೈತಪ್ಪಿ ಕಳೆದು ಹೋಗದಂತೆ ಅದರ ಎಚ್ಚರಿಕೆ ವಹಿಸಬೇಕು. ಈ ಮಾತನ್ನು 'ಸಾರ ಸಮುಚ್ಚಯ'ದಿಂದ ಎತ್ತಿಕೊಳ್ಳಲಾಗಿದೆ ಮತ್ತು ಪಂಡಿತ ಟೋಡರಮಲ್ಲರು ಕೂಡ 'ರಹಸ್ಯಪೂರ್ಣವಾದ ಪತ್ರ'ದಲ್ಲಿ ಆತ್ಮನ ಅನುಭೂತಿಯೊಳಗೆ ಇರಬೇಕು ಬಾಹ್ಯದಲ್ಲಿ ಹೊರಟು ಹೋಗಬಾರದೆಂದು ಹೇಳಿದ್ದಾರೆ. ಈ ಪತ್ರವಂತೂ ಅತ್ಯಂತ ಬೆಲೆಯುಳ್ಳ ವಸ್ತುವಿದೆ. ಈ ಪತ್ರದ ವಿಷಯದಲ್ಲಿ ಓರ್ವ ವ್ಯಕ್ತಿಯು ತನ್ನ ಅಭಿಪ್ರಾಯ ವ್ಯಕ್ತಪಡಿಸುತ್ತ ಹೇಳುತ್ತಾನೆ - ಈ ಪತ್ರವು ಆಂಗ್ರೇಜಿಯಲ್ಲಿ ಇರುತ್ತಿದ್ದರೆ ಮತ್ತು ಐರೋಪ್ಯ ದೇಶಗಳಲ್ಲಿ ತಲುಪುತ್ತಿದ್ದರೆ ಇದರ ಬೆಲೆಯು ಕೋಟ್ಯಂತರ ರೂಪಾಯಿಗಳಾಗುತ್ತಿತ್ತು.

ಈಗ ಕುಟುಂಬದ ಮೋಹವನ್ನು ಬಿಟ್ಟುಕೊಡುವುದು ಯೋಗ್ಯವಿದೆಯೆಂದು ಹೇಳುತ್ತಾರೆ, -

ಇಹು ಪರಿಯಣ ಣ ಹು ಮಹುತಣಉ ಇಹು ಸುಹು-ದುಕ್ಖಹ ಹೇಉ
ಇಮ ಚಿಂತಂತಹ ಕಿಂ ಕರಇ ಲಹು ಸಂಸಾರಹ ಛೇಉ ॥67॥

ಜಾತ ಪರಿಜನ ಎನ್ನವರಿಲ್ಲ ಇರುವರು ಸುಖ-ದುಃಖದ ಹೇತು
ಈ ತೆರ ಚಿಂತಿಸಿದರೆ ಬೇಗ ಭವ ವಿಚ್ಛೇದವು ಆಗುವುದು ॥67॥

ಅರ್ಥ :- ನಿಶ್ಚಯದಿಂದ ಈ ಕುಟುಂಬ ಪರಿವಾರ ಯಾವುದೂ ನನ್ನದಿಲ್ಲವೆಂಬ ಭಾವವು ಸುಖ - ದುಃಖದ ಕಾರಣವೇ ಇದೆಯೆಂದು ಒಂದಿಷ್ಟು ವಿಚಾರ ಮಾಡುವುದರಿಂದ ಶೀಘ್ರದಲ್ಲಿಯೇ ಸಂಸಾರದ ಛೇದ ಮಾಡಿ ಬಿಡಲಾಗುತ್ತದೆ.

ಧರ್ಮಾತ್ಮ ಜೀವನಿಗೆ ತನ್ನ ಆತ್ಮ ಸ್ವಭಾವದಲ್ಲಿ ಯೋಗ ಎಂದರೆ ಜೋಡಣೆ - ಏಕಾಗ್ರತೆ ಮಾಡುವ ಸಲುವಾಗಿ ಕುಟುಂಬದ ಸಂಬಂಧವಾಗಿರುವ ಮಮತೆಯ ಭಾವವನ್ನು ಬಿಟ್ಟುಕೊಡುವುದು ಯೋಗ್ಯವಾಗಿದೆ. ಕುಟುಂಬದ ಮೋಹದಲ್ಲಿ ಸಿಲುಕಿಕೊಂಡು ಆತ್ಮಧ್ಯಾನದ ಉಪೇಕ್ಷೆ ಮಾಡುವುದು ಯೋಗ್ಯವಿಲ್ಲ. ಕುಟುಂಬ ಪರಿವಾರದವರಂತೂ ಪ್ರತ್ಯಕ್ಷ ಸುಲಿಗೆಗಾರರ ಸಮೂಹವಿದೆ. ತಮ್ಮ ಸ್ವಾರ್ಥಗಳ ಸಲುವಾಗಿ, ತಮ್ಮ ಹೊಟ್ಟೆ ತುಂಬಿಕೊಳ್ಳುವುದರ ಸಲುವಾಗಿ ಕೊಳ್ಳೆಹೊಡೆಯುವವರ ಕೂಟವು ಏಕತ್ರಿತವಾಗಿದೆಯೆಂಬ ಮಾತು ನಿಯಮಸಾರದಲ್ಲಿ ಬರುತ್ತದೆಯಲ್ಲವೇ ! ಸ್ತ್ರೀ - ಪುತ್ರ - ಪರಿವಾರ ಮೊದಲಾದವರೆಲ್ಲರು ಲೌಕಿಕ ಸುಖ - ದುಃಖದ ಎಂದರೆ ಕೇವಲ ದುಃಖಕ್ಕೇನೇ ನಿಮಿತ್ತರಿದ್ದಾರೆ. ಅವರ ಪಾಲನೆ - ಪೋಷಣೆಯಲ್ಲಿ ನಿಂತುಕೊಳ್ಳಬಾರದು, ಆತ್ಮನ ಬೆಲೆ ಮಾಡಿ ಆತ್ಮನ ಧ್ಯಾನ ಮಾಡಬೇಕು.

ಪ್ರಶ್ನೆ :- ಕುಟುಂಬದ ಜನರನ್ನು ಉಪವಾಸ ಸಾಯಿಸಿ ಬಿಡಬೇಕೇನು ?

ಉತ್ತರ :- ಅಯ್ಯಾ ! ಉಪವಾಸ ಯಾರು ಸಾಯುತ್ತಾರೆ ? ಎಲ್ಲರಿಗೂ ತಮ್ಮ ತಮ್ಮ ಪುಣ್ಯದ ಅನುಸಾರವಾಗಿ ದೊರಕೇ ದೊರಕುತ್ತದೆ. ಅವರ ಪಾಲನೆ - ಪೋಷಣೆಯನ್ನು ನೀನು ಮಾಡುವುದರಿಂದಲೇ ಆಗುತ್ತದೆಯೆಂಬುದಾಗಿಲ್ಲ. ಅವರಂತೂ ತಮ್ಮ ಕಾರಣದಿಂದ ಬಂದಿದ್ದಾರೆ ಮತ್ತು ತಮ್ಮ ಕಾರಣದಿಂದಲೇ ಬದುಕುತ್ತಿದ್ದಾರೆ ಹಾಗೂ ತಮ್ಮ ಕಾರಣದಿಂದಲೇ ಹೊರಟು ಹೋಗುವರು. ನಿನ್ನಲ್ಲಿ ಮತ್ತು ಅವರಲ್ಲಿ ಯಾವುದೇ ರೀತಿಯ ಸಂಬಂಧವಿಲ್ಲ. ಈ ಪ್ರಕಾರ ತಿಳಿದುಕೊಂಡು ಮೋಹವನ್ನು ಬಿಟ್ಟುಕೊಟ್ಟು ಅಂತರ್ಯದಲ್ಲಿ ಏಕಾಕಾರವಾಗದಿದ್ದರೆ ಏಕಾಗ್ರತೆ - ಯೋಗಸಾರವಾಗುವ ಸಾಧ್ಯತೆಯಿಲ್ಲ. ಎಲ್ಲಿ ಶರೀರವೇ ನನ್ನದಿಲ್ಲವೆಂದ ಮೇಲೆ ಆ ಶರೀರದ ಸಂಬಂಧಿಗಳು ನನ್ನವರು ಹೇಗಾಗುತ್ತಾರೆ? ಇವನು ನನ್ನ ಪುತ್ರನಿದ್ದಾನೆ, ಇವನು ನನ್ನ ತಂದೆಯಿದ್ದಾನೆ, ಇವನು ನನ್ನ ಪತಿಯಿದ್ದಾನೆಂದು ಎಲ್ಲರು ನನ್ನ ಶರೀರವನ್ನು ಗುರುತಿಸುತ್ತಾರೆ. ಆತ್ಮನನ್ನಂತೂ ಯಾರೂ ಗುರುತಿಸುವುದೇ ಇಲ್ಲ.

ಇಂದ್ರಿಯಗಳ ಸುಖವನ್ನು ಬಯಸುತ್ತಿರುವಂಥ ಜೀವನು ಇಂದ್ರಿಯ ವಿಷಯಗಳಿಗೆ ಸಹಕಾರಿಯಾದ ಕಾರಣಗಳನ್ನು ಬಿಡುವುದೇ ಇಲ್ಲ. ಸ್ತ್ರೀ, ಪುತ್ರ, ಕುಟುಂಬ, ಪರಿವಾರ, ಧನ, ಕನಕ, ಮನೆ, ಮಠ, ಕೀರ್ತಿ, ದೊಡ್ಡಸ್ತನ ಮೊದಲಾದವುಗಳೆಲ್ಲವು ನನ್ನ ಸುಖದ ಸಾಧನಗಳಿವೆಯೆಂದು ಮನ್ನಿಸುವಂಥವನು ಇವುಗಳ ಅಭಿರುಚಿಯನ್ನು ಬಿಟ್ಟು ಕೊಡುವ ಸಾಧ್ಯತೆಯಿಲ್ಲ. ಬಾಲ್ಯಾವಸ್ಥೆಯಲ್ಲಿ ತಂದೆ - ತಾಯಿಗಳಿಂದ ಪಾಲನೆ - ಪೋಷಣೆಯಾಗುತ್ತದೆ ಮತ್ತು ಪ್ರೀತಿ - ಅಕ್ಕರೆಗಳು ದೊರಕುತ್ತವೆ. ಅದಕ್ಕಾಗಿಯೇ ಬಾಲಕನಿಗೆ ತಂದೆ - ತಾಯಿಗಳ ಕುರಿತು ತೀವ್ರ ಮೋಹವಿರುತ್ತದೆ. ಯೌವನಾವಸ್ಥೆಯಲ್ಲಿ ಸ್ತ್ರೀ ಹಾಗೂ ಮಕ್ಕಳುಗಳಿಂದ ಸುಖದ ಪ್ರಾಪ್ತಿ ಮಾಡಿಕೊಳ್ಳುತ್ತಾನೆ, ಅದರಿಂದ ಅವರುಗಳ ಮೇಲೆ ಮೋಹ ಮಾಡುತ್ತಾನೆ. ಯಾರೋ ಮಿತ್ರರಿಂದಾಗಲಿ ಅಥವಾ ಸೇವಕರಿಂದಾಗಲಿ ಇಂದ್ರಿಯ ಸುಖದಲ್ಲಿ ಸಹಕಾರ ದೊರಕುತ್ತಿದ್ದರೆ ಅವರನ್ನು ಮನ್ನಿಸಿ ಅವರ ಮೇಲೆ ಪ್ರೀತಿ ಮಾಡುತ್ತಾನೆ ಮತ್ತು ಯಾರು ಇಂದ್ರಿಯ ಸುಖದಲ್ಲಿ ಬಾಧಕರಾಗುತ್ತಾರೆ ಅವರನ್ನು ಕೆಡಕೆಂದು ತಿಳಿದುಕೊಂಡು ಅವರ ಮೇಲೆ ದ್ವೇಷ ಮಾಡುತ್ತಾನೆ.. ಈ ಪ್ರಕಾರ ಸಮಸ್ತ ಪ್ರಾಣಿಗಳು ಇಂದ್ರಿಯ ಸುಖದ ಸ್ವಾರ್ಥದ ಸಲುವಾಗಿ ಒಬ್ಬರು ಇನ್ನೊಬ್ಬರ ಮೇಲೆ ಮೋಹ ಮಾಡುತ್ತಾರೆ. ಆದರೆ ಆತ್ಮನ ಸುಖವೇ ವಾಸ್ತವಿಕ ಸುಖವಿದೆ ಮತ್ತು ಇಂದ್ರಿಯ ಸುಖವಂತೂ ದುಃಖವೇ ಇದೆಯೆಂದು ಯಾರಿಗೆ ಪ್ರತೀತಿಯುಂಟಾಗಿದೆ ಅವರು ಇಂದ್ರಿಯ ಸುಖದ ನಿಮಿತ್ತಗಳನ್ನು ಸಹಕಾರಿಯೆಂದು ಮನ್ನಿಸುವುದಿಲ್ಲ ಮತ್ತು ಅವುಗಳಲ್ಲಿ ಮೋಹವನ್ನು ಮಾಡುವುದಿಲ್ಲ.

ಯಾವ ಪ್ರಕಾರ ಕಮಲವು ನೀರನ್ನು ಸ್ಪರ್ಶ ಮಾಡುವುದಿಲ್ಲ, ಅದರಿಂದ ಅಲಿಪ್ತವಾಗಿಯೇ ಇರುತ್ತದೆ. ಅದೇ ಪ್ರಕಾರ ಯಾರು ನಿಜಾತ್ಮನ ಅನುಭವ ಮಾಡಿ ಅತೀಂದ್ರಿಯ ಸುಖವನ್ನು ಪ್ರಾಪ್ತಮಾಡಿಕೊಂಡಿದ್ದಾರೆ, ಅಂಥ ಧರ್ಮಾತ್ಮನಾದ ಜೀವನು ಗೃಹಸ್ಥಾಶ್ರಮದಲ್ಲಿದ್ದರು ಕೂಡ ಜಲವನ್ನು ಸ್ಪರ್ಶಿಸದ ಕಮಲದಂತೆ ನಿರ್ಲೇಪನಿರುತ್ತಾನೆ.

ಸ್ತ್ರೀ - ಪುತ್ರ ಮೊದಲಾದವರೆಲ್ಲರು ನನ್ನ ಆತ್ಮನಿಂದ ಅತ್ಯಂತ ಭಿನ್ನರಿದ್ದಾರೆ. ಆತ್ಮನ ಜತೆಯಲ್ಲಿ ಅವರದು ಯಾವುದೇ ರೀತಿಯ ಸಂಬಂಧವಿಲ್ಲ. ಅವರ ಸಂಯೋಗವಂತೂ ವಾಯುವಿನ ಸಮಾನ ಚಂಚಲವಿದೆ. ಯಾವ ಪ್ರಕಾರ ವಾಯುವಿನಿಂದ ತರಗೆಲೆಗಳು ಅತ್ತ-ಇತ್ತ ಹಾರುತ್ತವೆ, ಅದೇ ಪ್ರಕಾರ ಮೊದಲಿನ ಪುಣ್ಯ-ಪಾಪಕ್ಕೆ ಅನುಸರಿಸಿ ಕ್ಷಣಿಕವಾದ ಸಂಯೋಗಗಳು ಬರುತ್ತವೆ ಮತ್ತು ಹೊರಟು ಹೋಗುತ್ತವೆ. ಇಂದ್ರಿಯ ಸುಖದ ಲೋಲುಪಿಯಾದಂಥ ಮತ್ತು ಅತೀಂದ್ರಿಯ ಸುಖದಿಂದ ಅಪರಿಚಿತನಿರುವಂಥ ಮೂರ್ಖ ಜೀವನು ಅನುಕೂಲ ಸಂಯೋಗಗಳಲ್ಲಿ ಅದೇನು ತನಗೆ ಸ್ವರ್ಗವೇ ದೊರಕಿ ಬಿಟ್ಟಿದೆಯೆಂದು ಕಲ್ಪನೆ ಮಾಡುತ್ತಾನೆ. ಆದರೆ ಅವನು ಆತ್ಮಾನುಭವದ ಮೂಲಕ ಅತೀಂದ್ರಿಯ ಸುಖ ಪ್ರಾಪ್ತ ಮಾಡಿಕೊಳ್ಳುವ ಪ್ರಯತ್ನವನ್ನೇ ಮಾಡುವುದಿಲ್ಲ.

ಕೇವಲಜ್ಞಾನ ಲಕ್ಷ್ಮಿಯ ಅಧಿಪತಿಯಿರುವಂಥ ಆತ್ಮನ ಪರಿಚಯ ಮಾಡಿಕೊಂಡು ಅಲ್ಪಕಾಲದಲ್ಲಿ ಕೇವಲ ಜ್ಞಾನ ಪ್ರಕಟಪಡಿಸಿಕೊಳ್ಳುವ ಭಾವನೆಯನ್ನು ಮೋಕ್ಷಾರ್ಥಿಯಾದ ಜೀವರುಗಳೇ ಮಾಡುತ್ತಾರೆ. ವಿಷಯ ಲೋಲುಪಿಯಾದ ಜೀವರುಗಳಂತೂ ತಮ್ಮ ಪುಣ್ಯಾಧೀನದಿಂದ ಪ್ರಾಪ್ತವಾದ ಕ್ಷಣಿಕ ಅನುಕೂಲ ಸಂಯೋಗಗಳಲ್ಲಿಯೇ ನಿಜವಾದ ಸುಖವಿದೆಯೆಂದು ಮನ್ನಿಸಿ ಅವುಗಳಲ್ಲಿಯೇ ಸಿಕ್ಕಿ ಬೀಳುತ್ತಾರೆ. ಅವರಿಗೆ ಅತೀಂದ್ರಿಯ ಸುಖದ ಅಭಿರುಚಿಯು ಇರುವುದೇ ಇಲ್ಲ.

ಅಂತರ್ಯದಲ್ಲಿ ಸುಖದ ಪಿಂಡನಾದ ಭಗವಾನ ಆತ್ಮನು ವಿರಾಜಮಾನನಿದ್ದಾನೆ. ಆದರೆ ಅವನ ದೃಷ್ಟಿ ಮಾಡುವುದಿಲ್ಲ ಮತ್ತು ಬಾಹ್ಯದಲ್ಲಿನ ಕ್ಷಣಿಕ ಸಂಯೋಗಗಳಲ್ಲಿಯೇ ಸುಖ ಮನ್ನಿಸುತ್ತಾರೆ, ಇದು ಭ್ರಾಂತಿಯಿದೆ.

ಸಂಸಾರದಲ್ಲಿ ಯಾರೂ ತಮ್ಮವರಿಲ್ಲವೆಂದು ಈಗ ಹೇಳುತ್ತಾರೆ, -

ಇಂದ-ಫಣಿಂದ-ಣರಿಂದಯ ವಿ ಜೀವಹ ಸರಣು ಣ ಹೋಂತಿ
ಅಸರಣು ಜಾಣಿವಿ ಮುಣಿ-ಧವಲಾ ಅಪ್ಪಾ ಅಪ್ಪ ಮುಣಂತಿ ||68||

ಜೀವನಿಗಾರು ಶರಣಿಲ್ಲ ಇಂದ್ರ ನರೇಂದ್ರ ಫಣೀಂದ್ರ ಸಹ
ಈ ವಿಧ ಅಶರಣ ತಿಳಿದು ಮುನಿ ಆತ್ಮನಿಂದಾತ್ಮನ ತಿಳಿಯುವರು ||68||

ಅರ್ಥ :- ಇಂದ್ರ, ಧರಣೇಂದ್ರ ಮತ್ತು ಚಕ್ರವರ್ತಿಗಳಲ್ಲಿ ಯಾರು ಕೂಡ ಸಂಸಾರೀ ಪ್ರಾಣಿಗಳ ರಕ್ಷಣೆ ಮಾಡುವ ಸಾಧ್ಯತೆಯಿಲ್ಲ. ಉತ್ತಮ ಮುನಿರಾಜರುಗಳು ತಮ್ಮನ್ನು ತಾವು ಅಶರಣರೆಂದು ತಿಳಿದುಕೊಂಡು ತಮ್ಮ ಆತ್ಮನ ಮೂಲಕ ಆತ್ಮನ ಅನುಭವ ಮಾಡುತ್ತಾರೆ.

ಇಂದ್ರ, ಧರಣೇಂದ್ರ ಅಥವಾ ಚಕ್ರವರ್ತಿಗಳಲ್ಲಿ ಯಾರು ಕೂಡ ಈ ಸಂಸಾರೀ ಜೀವಗಳ ರಕ್ಷಕರಾಗುವ ಸಾಧ್ಯತೆಯಿಲ್ಲವೆಂದು ಆತ್ಮಜ್ಞಾನಿಯೂ, ಆತ್ಮಧ್ಯಾನಿಯೂ ಆದ ಸಂತ ಶ್ರೀ ಯೋಗೀಂದುದೇವರು ಅತ್ಯಂತ ಕರುಣಾಪೂರ್ವಕವಾಗಿ ಜಗತ್ತಿಗೆ ಸಾರಿ ಸಾರಿ ಹೇಳುತ್ತಿದ್ದಾರೆ. ಪ್ರತಿಯೊಬ್ಬರಿಗೆ ತಮ್ಮ-ತಮ್ಮ ಭಗವಾನ ಆತ್ಮನೇ ಆಶ್ರಯದಾತನಿದ್ದಾನೆ. ರಕ್ಷಕನಿದ್ದಾನೆ. ಅದಕ್ಕಾಗಿ ಮುನಿರಾಜರುಗಳು ಸ್ವಯಂ ತಮ್ಮ ಆಶ್ರಯ ಪಡೆದು ನಿಜವನ್ನು ಧ್ಯಾನಿಸುತ್ತಾರೆ.

ತಾವು ನಿಜರೂಪದ ಅನುಭವ ಮಾಡಿರೆಂದು ಹೇಳಿ ವ್ಯವಹಾರ ಹಾಗೂ ನಿಮಿತ್ತದ ಮೂಲಕ ಆತ್ಮನ ಅನುಭವವಾಗುವ ಸಾಧ್ಯತೆಯಿಲ್ಲವೆಂದು ಹೇಳುವುದಿದೆ. ಶುದ್ಧ ವೀತರಾಗ ಪ್ರಭು ತನ್ನ ಆತ್ಮನ ಶುದ್ಧ ವೀತರಾಗೀ ಪರಿಣತಿಯಿಂದಲೇ ಅನುಭವವಾಗುವ ಸಾಧ್ಯತೆಯಿದೆ. ಇದನ್ನು ಹೊರತುಪಡಿಸಿ ಅನುಭವದ ಕುರಿತು ಬೇರೆ ಯಾವ ಉಪಾಯವಿಲ್ಲವೆಂದು ಮೊದಲು ನಿರ್ಣಯ ಮಾಡಬೇಕಾಗುವುದು.

ಜೀವನಿಗೆ ಯಾವಾಗ ಪ್ರತಿಕೂಲತೆಯ ಅಥವಾ ಮರಣದ ಸಮಯವು ಬಂದು ಬಿಡುತ್ತದೆ ಆಗ ಅವನನ್ನು ಅದರಿಂದ ಬಿಡಿಸಿಕೊಳ್ಳುವ ಸಲುವಾಗಿ ಈ ಜಗತ್ತಿನಲ್ಲಿ ಯಾರೂ ಸಮರ್ಥರಿಲ್ಲ. ಚಕ್ರವರ್ತಿಯಂಥವರಿಗೆ ಕೂಡ ಮರಣ ಸಮಯದಲ್ಲಿ ಆರು ಖಂಡದ ರಾಜ್ಯವನ್ನು ಬಿಟ್ಟುಕೊಟ್ಟು ಹೋಗಬೇಕಾಗುತ್ತದೆ.

ಬ್ರಹ್ಮದತ್ತ ಚಕ್ರವರ್ತಿಯು ತನ್ನ ಏಳು ನೂರು ವರುಷಗಳ ಆಯುಷ್ಯವನ್ನೆಲ್ಲ ಭೋಗದಲ್ಲಿ ಕಳೆದು ಕೊನೆಯ ಸಮಯದಲ್ಲಿ ಪಚ್ಚರತ್ನದ ಮಂಚದ ಮೇಲೆ ಹಂಸತೂಲಿಕಾ ತಲ್ಪದಲ್ಲಿ ಮಲಗಿಕೊಂಡಿದ್ದನು. ಸಹಸ್ರ ಸಹಸ್ರ ಯಕ್ಷರು ಅವನ ಸೇವೆಯಲ್ಲಿ ಉಪಸ್ಥಿತರಿದ್ದರು, ತೊಂಭತ್ತಾರು ಸಾವಿರ ರಾಣಿಯರು ಎದುರಿಗೆ ನಿಂತುಕೊಂಡಿದ್ದರು. ಅವನನ್ನು ಮರಣದ ದವಡೆಯಿಂದ ಉಳಿಸಿಕೊಳ್ಳಲು ಅದೆಷ್ಟೋ ರಾಜ ವೈದ್ಯರುಗಳು ಶತ ಪ್ರಯತ್ನ ಮಾಡುತ್ತಿದ್ದರು ಅಂಥದರಲ್ಲಿ ಬ್ರಹ್ಮದತ್ತ ಚಕ್ರವರ್ತಿಯು ಮೂವತ್ತು ಮೂರು ಸಾಗರದ ಆಯುಷ್ಯವನ್ನು ಕಟ್ಟಿಕೊಂಡು ನೇರವಾಗಿ ಏಳನೆಯ ನರಕಕ್ಕೆ ಇಳಿಯುತ್ತಾನೆ,. ಅಲ್ಲಿ ಹೋಗಿ ಅಯ್ಯೋ ! ಇಲ್ಲಿ ನನಗೆ ಯಾರೂ ಆಶ್ರಯದಾತರಿಲ್ಲವಲ್ಲ ! ಎಂದು ಕೂಗಿಕೊಂಡು ರೋದಿಸುತ್ತಾನೆ. ಆದರೆ ಸೋದರನೇ ! ನೀನು ನಿನ್ನ ಆತ್ಮನನ್ನು ತಿಳಿದುಕೊಳ್ಳಲಿಲ್ಲ. ಎಲ್ಲಿ ವಿಕಲ್ಪಗಳೇ ಆಶ್ರಯವಿಲ್ಲವೆಂದ ಮೇಲೆ ಸಂಯೋಗಗಳೇನು ಆಶ್ರಯ ಕೊಡುವವು ? ಅನಂತ ಸಾಮರ್ಥ್ಯದ ಅಧಿಪತಿಯಾದ ಆತ್ಮನ ದೃಷ್ಟಿಯನ್ನಂತೂ ಎಂದೂ ಮಾಡಲಿಲ್ಲವೆಂದಮೇಲೆ ಅವನ ಹೊರತಾಗಿ ಯಾರು ಆಶ್ರಯ ಕೊಡುವರು ? ಭಗವಂತರು ಕೂಡ ಆಶ್ರಯದಾತರಿಲ್ಲ, ತನ್ನ ಪ್ರಭುವೇ ತನಗೆ ಆಶ್ರಯದಾತನಿದ್ದಾನೆ. ತನ್ನ ಆತ್ಮನೇ ಅರಹಂತನಿದ್ದಾನೆ, ತನ್ನ ಸ್ವರೂಪವೇ ಸಿದ್ಧಸಮಾನವಿದೆ, ತನ್ನ ಸ್ವರೂಪವೇ ಆಚಾರ್ಯ, ಉಪಾಧ್ಯಾಯ, ಸಾಧುಗಳ ವೀತರಾಗಿ ಪರಿಣತಿಯಂತೆ ಇದೆ. ಸ್ವಯಂ ಆತ್ಮನೇ ಪಂಚಪರಮೇಷ್ಠಿಪದರೂಪನಿದ್ದಾನೆಂದು ಅಷ್ಟಪಾಹುಡದಲ್ಲಿ ಭ.ಕುಂದಕುಂದಾಚಾರ್ಯ ದೇವರು ಹೇಳಿದ್ದಾರೆ. ಆದುದರಿಂದ ತನಗೆ ನಿಜವಾಗಿ ತನ್ನ ಆತ್ಮನೇ ಆಶ್ರಯದಾತನಿದ್ದಾನೆ, ಲೋಕದಲ್ಲಿ ಬೇರೆ ಯಾರೂ ಇಲ್ಲ.

ಈ ಪ್ರಕಾರ ಜ್ಞಾನೀ ಜೀವರುಗಳು ಅಶರಣ ಭಾವನೆಯನ್ನು ಭಾವಿಸಿ ಕರ್ಮ ಕ್ಷಯದ ಉಪಾಯ ಮಾಡುವುದು ಯೋಗ್ಯವಿದೆ. ಏಕೆಂದರೆ ಕರ್ಮಗಳ ಸಂಯೋಗವು ಒಂದು ಸಮಯದ ಸಲುವಾಗಿ ಕೂಡ ಲಾಭಕಾರಿಯಿಲ್ಲ.

ನಾನು ಪರ ಜೀವಗಳನ್ನು ಸುಖಿ-ದುಃಖಿಯನ್ನಾಗಿ ಮಾಡುತ್ತೇನೆಂಬ ಮನ್ನಣೆಯೇ ನಿಜವಾಗಿ ಮಹಾ-ಮಿಥ್ಯಾತ್ವವಿದೆಯೆಂದು ಶ್ರೀ ಸಮಯಸಾರದಲ್ಲಿ ಕೂಡ ಹೇಳಲಾಗಿದೆ. ಎಲ್ಲರೂ ತಮ್ಮ - ತಮ್ಮ ಪೂರ್ವ ಕರ್ಮದ ಉದಯಕ್ಕೆ ಅನುಸರಿಸಿ ಆಯುಷ್ಯ ಮತ್ತು ಸಂಯೋಗಗಳನ್ನು ಪಡೆದುಕೊಂಡು ಬರುತ್ತಾರೆ. ಅದರಲ್ಲಿ ಯಾವ ಅನ್ಯ ಜೀವರುಗಳು ಅದಲು-ಬದಲು ಮಾಡುವ ಸಾಧ್ಯತೆಯಿಲ್ಲ, ಯಾವಾಗ ಮರಣ ಸಮಯ ಬರುತ್ತದೆ ಆಗ ಯಾವ ವೈದ್ಯ, ಬ್ರಾಹ್ಮಣ, ಸ್ತ್ರೀ-ಪುತ್ರ , ತಾಯಿ-ತಂದೆ, ಸೇವಕ-ನೌಕರ ಅಥವಾ ಇಂದ್ರ-ಚಂದ್ರ ಮೊದಲಾದವರಾರೂ ಬದುಕಿಸಿಕೊಳ್ಳುವ ಸಾಧ್ಯತೆಯಿಲ್ಲವೆಂದು ಬೃಹದ್ ಸಾಮಾಯಿಕ ಪಾಠದಲ್ಲಿ ಬಂದಿದೆ. ಶರಣಭೂತವಂತೂ ಓರ್ವ ತನ್ನ ಆತ್ಮನೇ ಇದ್ದಾನೆಂದು ತಿಳಿದುಕೊಂಡು ಸಜ್ಜನರಾದವರು ತಮ್ಮ ಆತ್ಮನ ಕಾರ್ಯ ಮಾಡುವಲ್ಲಿ ಸ್ವಲ್ಪ ಕೂಡ ವಿಲಂಬ ಮಾಡಬಾರದು. ಇಂಥ ಮನುಷ್ಯ ದೇಹ, ಉತ್ತಮ ಕುಲ, ಇಂದ್ರಿಯಗಳ ಪರಿಪಕ್ವತೆ ಮತ್ತು ಜೈನ ಧರ್ಮದ ಸಂಯೋಗವು ದೊರೆತ ನಂತರ ಆತ್ಮಹಿತದ ಕಾರ್ಯದಲ್ಲಿ ಎಳ್ಳಷ್ಟೂ ವಿಲಂಬ ಮಾಡುವುದು ಒಳ್ಳೆಯದಲ್ಲ. ಆ ಕಾರ್ಯವನ್ನು ಇಂದೇ ಈ ಕ್ಷಣದಲ್ಲಿಯೇ ಮಾಡಬೇಕಾಗುವುದು. ಇಂದೇ ನಿನ್ನ ಹಿತವನ್ನು ಸಾಧಿಸಿಕೊ ವಿಲಂಬ ಮಾಡಬೇಡೆಂದು ಆಚಾರ್ಯ ಅಮೃತಚಂದ್ರದೇವರು ಶ್ರೀ ಪ್ರವಚನಸಾರದ ಟೀಕೆಯಲ್ಲಿ ಹೇಳುತ್ತಾರೆ.

ಪೂರ್ಣಾನಂದದ ಪ್ರಭು ಚೈತನ್ಯ ರತ್ನಾಕರನಾದಂಥ ನಿಜಾತ್ಮನಲ್ಲಿ ದೃಷ್ಟಿ ಮಾಡುತ್ತಿರುವಂತೆಯೇ ನಿಧಿಯು ಪ್ರಕಟವಾಗುವಂತಿದೆ, ಮತ್ತು ಬಾಹ್ಯದಲ್ಲಿ ದೃಷ್ಟಿ ಹರಿಸುತ್ತಿದ್ದಂತೆಯೇ ಅಗ್ನಿ ರಾಶಿಯು ಪ್ರಜ್ವಲಿಸುವಂತಿದೆ ಎಂದರೆ ವಿಕಲ್ಪಗಳು ಉತ್ಪನ್ನವಾಗುತ್ತವೆ, ಆಕುಲತೆಯಾಗುತ್ತದೆ ಮತ್ತು ನಿರಾಕುಲವಾದ ಸ್ವಭಾವದಲ್ಲಿ ದೃಷ್ಟಿ ಹಾಕುವುದರಿಂದ ಪರ್ಯಾಯದಲ್ಲಿ ನಿರಾಕುಲತೆಯು ಪ್ರಕಟವಾಗುವುದು. ಆದುದರಿಂದ ಎಲೈ ಜೀವನೇ ! ನೀನು ಸ್ವಭಾವದಲ್ಲಿ ದೃಷ್ಟಿ ಹಾಕುವಾಗ ಸ್ವಲ್ಪವೂ ವಿಲಂಬ ಮಾಡಬೇಡ . ಇಂದೇ ಹಾಕು, ಈ ಕ್ಷಣವೇ ಹಾಕು.

ಜೀವನು ಸದಾ ಏಕಾಕಿಯಿದ್ದಾನೆ ಅವನಿಗೆ ಯಾರೂ ಸಂಗಡಿಗರಿಲ್ಲವೆಂದು ಈಗ ಹೇಳುತ್ತಾರೆ, -

ಇಕ್ಕ ಉಪಜ್ಜಇ ಮರಇ ಕು ವಿ ದುಹು ಸುಹು ಭುಂಜಇ ಇಕ್ಕು
ಣರಯಹ ಜಾಇ ವಿ ಇಕ್ಕ ಜಿಉ ತಹ ಣಿವ್ವಾಣಹಂ ಇಕ್ಕು ॥69॥

ಓರ್ವನೆ ಜನ್ಮ-ಮರಣಗಳ ಓರ್ವನೆ ದುಃಖ-ಸುಖಗಳ ಪಡೆವನು
ಓರ್ವನೆ ನರಕ ತಲುಪುವನು ಓರ್ವನೆ ಮೋಕ್ಷ ಪಡೆವನು ಜೀವ ॥69॥

ಅರ್ಥ :- ಜೀವನು ಏಕಾಕಿಯೇ ಜನ್ಮ ತಾಳುತ್ತಾನೆ ಮತ್ತು ಏಕಾಕಿಯೇ ಮರಣ ಹೊಂದುತ್ತಾನೆ, ಸುಖವನ್ನಾಗಲಿ ಅಥವಾ ದುಃಖವನ್ನಾಗಲಿ ಏಕಾಕಿಯೇ ಭೋಗಿಸುತ್ತಾನೆ. ಜೀವನು ನರಕದಲ್ಲಿ ಏಕಾಕಿಯೇ ಹೋಗುತ್ತಾನೆ ಮತ್ತು ಜೀವನು ನಿರ್ವಾಣವನ್ನು ಕೂಡ ಏಕಾಕಿಯೇ ಪ್ರಾಪ್ತ ಮಾಡಿಕೊಳ್ಳುತ್ತಾನೆ.

ಜೀವನು ಏಕಾಂಗಿಯಾಗಿಯೇ ಜನ್ಮಕ್ಕೆ ಬರುತ್ತಾನೆ ಮತ್ತು ಏಕಾಂಗಿಯಾಗಿಯೇ ದೇಹ ತ್ಯಾಗ ಮಾಡಿ ಪರಲೋಕದಲ್ಲಿ ಹೊರಟು ಹೋಗುತ್ತಾನೆ, ಯಾವ ಸ್ವಜನರು ಜತೆಯಲ್ಲಿ ಹೋಗುವುದಿಲ್ಲ, ಜೀವನದುದ್ದಕ್ಕೂ ಎಂಥ ಭಾವಗಳನ್ನು ಮಾಡಿರುತ್ತಾನೆ ಅವುಗಳಿಗೆ ಅನುಸರಿಸಿ ಜೀವನು ಸತ್ತು ಬೇರೆ ಗತಿಯಲ್ಲಿ ಹೋಗುತ್ತಾನೆ. ಜೀವನು ನರಕದಲ್ಲಿ ಹೋಗುವುದಾದರೂ ಏಕಾಕಿಯೇ ಹೋಗುತ್ತಾನೆ ಮತ್ತು ಸ್ವಭಾವ ದೃಷ್ಟಿ ಮಾಡಿ ಆತ್ಮನಲ್ಲಿ ನಿಮಗ್ನನಾಗಿ ಸಂಪೂರ್ಣ ಕರ್ಮಗಳ ಕ್ಷಯ ಮಾಡಿ ಮೋಕ್ಷದಲ್ಲಿ ಹೋಗುವುದಾದರೂ ಒಬ್ಬನೇ ಹೋಗುತ್ತಾನೆ. ಅಲ್ಲಿ ದೇವ - ಶಾಸ್ತ್ರ - ಗುರುಗಳಾಗಲಿ ಅಥವಾ ಸಂಘ - ಸಂಸ್ಥೆಗಳಾಗಲಿ ಯಾವವೂ ಜತೆಯಲ್ಲಿ ಹೋಗುವುದಿಲ್ಲ, ಸ್ವರೂಪದಲ್ಲಿ ಏಕಾಗ್ರತೆ

ಮಾಡಿ ತನ್ನ ಆತ್ಮನೇ ತನಗೆ ಮುಕ್ತಿಯನ್ನು ಪ್ರಾಪ್ತ ಮಾಡಿಸುತ್ತಾನೆ, ಇದರಲ್ಲಿ ಯಾರೂ ಯಾವ ಪ್ರಕಾರದಿಂದಲೂ ಸಹಾಯ ಮಾಡುವುದಿಲ್ಲ.

ಈ ಗಾಥೆಯಲ್ಲಿ ಏಕತ್ವ ಭಾವನೆಯ ಮೇಲೆ ವಿಚಾರ ಮಾಡಲಾಗಿದೆ. ಚತುರ್ಗತಿಗಳಲ್ಲಿ ಭ್ರಮಣ ಮಾಡುತ್ತಿರುವಾಗ ಈ ಜೀವನಿಗೆ ಅನೇಕ ಜನ್ಮಗಳಲ್ಲಿ ಅನೇಕ ತಾಯಿ-ತಂದೆಗಳು, ಅಣ್ಣ-ತಮ್ಮಂದಿರು, ಅಕ್ಕ-ತಂಗಿಯರು, ಸ್ತ್ರೀ-ಪುತ್ರ -ಮಿತ್ರರುಗಳು ಹಾಗೂ ಜಡವಸ್ತುಗಳು ಸಂಯೋಗದಲ್ಲಿ ಬಂದಿವೆ ಮತ್ತು ವಿಯೋಗವಾಗಿ ಹೋಗಿವೆ. ಆದಾಗ್ಯೂ ಆತ್ಮನು ಏಕಾಕಿಯೇ ಉಳಿದಿದ್ದಾನೆ. ಯಾರೂ ಜತೆಯಲ್ಲಿ ಬರಲಿಲ್ಲ. ಆದುದರಿಂದ ಎಲೈ ಜೀವನೇ ! ನೀನು ಈ ಪ್ರಕಾರ ವಿಚಾರ ಮಾಡಿ ಶೀಘ್ರವಾಗಿ ನಿನ್ನ ಹಿತ ಮಾಡಿಕೊಳ್ಳು !

ಜೀವನು ಹೇಗೆ ಶುಭಾಶುಭ ಭಾವ ಮಾಡುತ್ತಾನೆ ಹಾಗೆಯೇ ಕರ್ಮಗಳು ಕಟ್ಟುತ್ತವೆ ಮತ್ತು ಅಂಥದೇ ಅವುಗಳ ಫಲವು ದೊರಕುತ್ತದೆ. ಒಂದು ದೃಷ್ಟಾಂತವು ಬರುತ್ತದೆ - ಕಿರಿಯ ತಮ್ಮನಿಗೆ ಕ್ಷಯರೋಗ ಹಿಡಿದುಕೊಳ್ಳುತ್ತದೆ. ಅದನ್ನು ಗುಣಪಡಿಸುವ ಸಲುವಾಗಿ ಹಿರಿಯ ಸಹೋದರನು ತನ್ನ ತಮ್ಮನಿಗೆ ತಿಳಿದು ಬಾರದ ರೀತಿಯಲ್ಲಿ ಆಹಾರದೊಳಗೆ ಮೊಟ್ಟೆ ಬೇಯಿಸಿ ಕೊಡುತ್ತಾನೆ. ಮುಂದೆ ಅವರೀರ್ವರು ಸತ್ತು ನರಕದಲ್ಲಿ ನಾರಕಿಗಳಾಗುತ್ತಾರೆ. ಅಲ್ಲಿ ಕಿರಿಯ ತಮ್ಮನು ಹಿರಿಯ ಅಣ್ಣನಿಗೆ ಹೊಡೆಯಲಾರಂಭಿಸಿದಾಗ ಅಯ್ಯೊ ಸೋದರನೇ ! ನಾನಂತೂ ನಿನ್ನ ರೋಗ ಗುಣಪಡಿಸುವ ಸಲುವಾಗಿ ಪಾಪ ಮಾಡಿದ್ದೆನು ಮತ್ತು ಈಗ ನೀನು ನನಗೆ ಹೊಡೆಯುತ್ತಿರುವೆಯಲ್ಲ! ಎಂದು ಅಣ್ಣನು ತಮ್ಮನಿಗೆ ಕೇಳುತ್ತಾನೆ. ಆಗ ಕಿರಿಯನು ಹೇಳುವುದೇನೆಂದರೆ- ನನಗಂತೂ ಯಾವುದೂ ಗುರುತಿಲ್ಲ. ನೀನು ನನ್ನ ಸಲುವಾಗಿ ಪಾಪವನ್ನೇಕೆ ಮಾಡಿದೆ ? ನಾನಂತೂ ನಿನ್ನನ್ನು ಹೊಡೆದೇ ಹೊಡೆಯುತ್ತೇನೆ. ಈ ದೃಷ್ಟಾಂತದಿಂದ ಪ್ರತಿಯೊಬ್ಬ ಜೀವನು ಗಂಭೀರವಾಗಿ ವಿಚಾರಮಾಡಬೇಕಾಗುವುದು. ಕುಟುಂಬದೊಳಗಿನ ಜನರು ಪಾಪದಲ್ಲಿ ಪಾಲುಗಾರರಾಗುವುದಿಲ್ಲ. ಆದುದರಿಂದ ತಾನು ಪಾಪ ಮಾಡುವ ಮೊದಲು ಜೀವನು ಸ್ವಯಂ ಸರಿಯಾಗಿ ವಿಚಾರ ಮಾಡಬೇಕಾಗುವುದು.

ಪ್ರತಿಯೊಂದು ಜೀವದ ಸತ್ತಾ ಭಿನ್ನ-ಭಿನ್ನವಿದೆ, ಪ್ರತಿಯೊಂದರ ಭಾವಗಳು ಕೂಡ ಬೇರೆ - ಬೇರೆಯಿವೆ, ಪ್ರತಿಯೊಂದರ ಕರ್ಮ ಬಂಧನವು ಪೃಥಕ್, ಪೃಥಕ್ ಇದೆ. ಪ್ರತಿಯೊಂದರ ಸಾತಾ-ಅಸಾತಾದ ಭೋಗ ಮತ್ತು ಸಂಯೋಗಗಳು ಭಿನ್ನವಿವೆ. ಸಂಯೋಗಗಳನ್ನು ಯಾವ ಜೀವನೂ ಭೋಗಿಸುವ ಸಾಧ್ಯತೆಯಿಲ್ಲ, ಆದರೆ ಸಮಸ್ತ ಜೀವರುಗಳು ತಮ್ಮ-ತಮ್ಮ ರಾಗ-ದ್ವೇಷಗಳನ್ನು ಭೋಗಿಸುತ್ತಾರೆ.

ನಾಲ್ವರು ಒಡಹುಟ್ಟಿದ ಸಹೋದರರಿದ್ದು ಅವರಲ್ಲಿ ಓರ್ವನು ಅತ್ಯಂತ ಧನಿಕನಾಗಿ ಸಾಂಸಾರಿಕ ಸುಖಗಳನ್ನು ಭೋಗಿಸುತ್ತಾನೆ, ಎರಡನೆಯವನು ತೀರ ನಿರ್ಧನನಾಗಿ ಸರಿಯಾಗಿ ಎರಡು ವೇಳೆ ಊಟಕ್ಕೂ ಗತಿಯಿಲ್ಲದೆ ತುಂಬ ಕಷ್ಟದಿಂದ ಜೀವನ ನಿರ್ವಾಹ ಮಾಡುತ್ತಾನೆ. ಮೂರನೆಯವನು ದೊಡ್ಡ ವಿದ್ವಾಂಸನಾಗಿ ದೇಶ-ವಿದೇಶಗಳಲ್ಲಿ ಮನ್ನಣೆ ಪಡೆಯುತ್ತಾನೆ ಮತ್ತು ನಾಲ್ಕನೆಯವನು ಅತ್ಯಂತ ಮೂರ್ಖನಾಗಿದ್ದುಕೊಂಡು ಎಲ್ಲಿ ಹೋದರೂ ನಿಂದೆ - ನಿರಾದರಕ್ಕೆ ಪಾತ್ರನಾಗುತ್ತಾನೆ. ಇದೇ ಪ್ರಕಾರ ಶ್ರೇಣಿಕ ಹಾಗೂ ಅಭಯಕುಮಾರ ಇವರೀರ್ವರಲ್ಲಿ ಅತಿಶಯ ಪ್ರೀತಿಯಿತ್ತು. ಒಂದು ತಟ್ಟೆಯಲ್ಲಿ ಈರ್ವರು ಜತೆಯಲ್ಲೇ ಭೋಜನ ಮಾಡುತ್ತಿದ್ದರು; ಆದರೆ ಶ್ರೇಣಿಕನು ಸತ್ತು ನರಕಕ್ಕೆ ಹೋಗುತ್ತಾನೆ ಮತ್ತು ಅಭಯಕುಮಾರನು ಮರಣಹೊಂದಿ ಸ್ವರ್ಗದಲ್ಲಿ ಹೋಗುತ್ತಾನೆ. ಯಾರ ಭಾವಗಳು ಹೇಗೆ ಇರುತ್ತವೆ ಅವರಿಗೆ ಅಂಥ ಫಲವು ದೊರಕುತ್ತದೆ. ಒಟ್ಟಿಗೆ ಇರುವಂಥವರು ಮತ್ತು ಒಟ್ಟಿಗೆ ಊಟ ಮಾಡುವಂಥವರು ಕೂಡ ಒಬ್ಬನು ನರಕದಲ್ಲಿ ಹೋಗುತ್ತಾನೆ ಮತ್ತು ಇನ್ನೊಬ್ಬನು ಮೋಕ್ಷದಲ್ಲಿ ಹೋಗುತ್ತಾನೆ. ಇದೆಲ್ಲವು ಅವರವರ ಭಾವಗಳ ವಿವಿಧತೆಯಿದೆ. ಆದುದರಿಂದ ನಿನಗೆ ಸುಖದ ಅಪೇಕ್ಷೆಯಿದ್ದರೆ ನೀನು ನಿನ್ನ ಪರಿಣಾಮವನ್ನು ತಿದ್ದಿಕೊಳ್ಳು ! ನಿನ್ನ ಆತ್ಮನು ಆನಂದಕಂದನಿದ್ದು ಅವನಲ್ಲಿ ದೃಷ್ಟಿಯಿರಿಸಿ ಅವನ ಧ್ಯಾನ ಮಾಡು ಅವನ ಅನುಭವ ಪಡೆ ! ಇದುವೇ ಮೋಕ್ಷದ ಉಪಾಯವಿದ್ದು ಬೇರೆ ಯಾವುದೂ ಮೋಕ್ಷದ ಉಪಾಯವಿಲ್ಲ. ಸಂಸಾರದಲ್ಲಿ ಪ್ರತಿಯೊಬ್ಬ ಜೀವನು ತಮ್ಮ-ತಮ್ಮ

ಸ್ವಾರ್ಥದ ಸಂಗಡಿಗರಿದ್ದಾರೆ. ತಮ್ಮ ಸ್ವಾರ್ಥವು ಸಾಧಿಸದಿದ್ದರೆ ಪತ್ನೀ-ಪುತ್ರ, ಬಂಧು-ಮಿತ್ರರುಗಳು ಕೂಡ ಬಿಟ್ಟು ಹೊರಟು ಹೋಗುತ್ತಾರೆ. ಆದುದರಿಂದ ಯಾರ ಮೇಲೆಯೂ ಮಮತೆ ಮಾಡಿ ಮೋಸ ಹೋಗುವುದಕ್ಕಿಂತ ತಾವು ತಮ್ಮ ಕಲ್ಯಾಣ ಮಾಡಿಕೊಳ್ಳಬೇಕು.

ನೌಕೆಯಲ್ಲಿ ಅದೆಷ್ಟೋ ಜನರು ಒಟ್ಟಿಗೆ ಕುಳಿತುಕೊಂಡಿರುತ್ತಾರೆ, ಆದರೆ ನದಿಯ ಆಚೆಯ ದಡ ತಲುಪಿದ ನಂತರ ಅವರೆಲ್ಲರು ತಮ್ಮ - ತಮ್ಮ ನಗರಗಳಿಗೆ ಹೊರಟು ಹೋಗುತ್ತಾರೆ. ಅದೇ ಪ್ರಕಾರ ಒಂದು ಕುಟುಂಬದಲ್ಲಿ ಅನೇಕ ಜೀವರುಗಳು ಏಕತ್ರಿತರಾಗಿರುತ್ತಾರೆ, ಆದರೆ ಮರಣಹೊಂದಿ ಅವರಲ್ಲಿ ಒಬ್ಬನು ಸ್ವರ್ಗಕ್ಕೆ ಹೋಗುತ್ತಾನೆ, ಒಬ್ಬನು ನರಕಕ್ಕೆ ಹೋಗುತ್ತಾನೆ, ಒಬ್ಬನು ತಿರ್ಯಂಚನಾಗುತ್ತಾನೆ, ಒಬ್ಬನು ಮನುಷ್ಯನಾಗುತ್ತಾನೆ ಮತ್ತೆ ಒಬ್ಬನು ಕೇವಲಜ್ಞಾನ ಪ್ರಾಪ್ತ ಮಾಡಿಕೊಂಡು ಮೋಕ್ಷಕ್ಕೆ ಹೊರಟು ಹೋಗುತ್ತಾನೆ. ಈ ಪ್ರಕಾರ ಯಾರೂ ಯಾರ ಸಂಗಡಿಗರಿಲ್ಲ, ಆದುದರಿಂದ ತಾವು ಯಾರ ಮೇಲೆಯೂ ರಾಗ-ದ್ವೇಷಗಳನ್ನು ಮಾಡದೆ ಸಮಭಾವವನ್ನೇ ಮಾಡಬೇಕಾಗುವುದು.

ದಯೆ, ದಾನ, ಪೂಜೆ ಮೊದಲಾದವುಗಳ ಭಾವಗಳು ಪುಣ್ಯ ಭಾವಗಳಿದ್ದು ಹಿಂಸೆ, ಅಸತ್ಯ, ಕಳವು ಮೊದಲಾದವುಗಳ ಭಾವಗಳು ಪಾಪಭಾವಗಳಿವೆ . ಎರಡೂ ಭಾವಗಳಿಂದ ತಮ್ಮನ್ನು ಭಿನ್ನವಾಗಿ ತಿಳಿದುಕೊಂಡು ಸ್ವಭಾವದ ಶ್ರದ್ಧೆ - ಜ್ಞಾನ ಹಾಗೂ ಧ್ಯಾನ ಮಾಡುವುದೇ ಶುದ್ಧಿಯ ಉತ್ಪತ್ತಿ, ವೃದ್ಧಿ ಮತ್ತು ಮೋಕ್ಷದ ಉಪಾಯವಿದೆ. ರತ್ನತ್ರಯದ ಆರಾಧನೆ ಮಾಡಿ ಜೀವನು ಏಕಾಕಿಯಾಗಿಯೇ ಮೋಕ್ಷ ಪಡೆಯುತ್ತಾನೆ.

ಪ್ರತಿಯೊಂದು ಜೀವದ ದ್ರವ್ಯ, ಕ್ಷೇತ್ರ, ಕಾಲ, ಭಾವಗಳು ಭಿನ್ನ-ಭಿನ್ನವಿವೆ. ಪ್ರತಿಯೊಂದು ಜೀವವು ಪರಮ ಶುದ್ಧವಿದೆ. ಆ ಶುದ್ಧ ಸ್ವಭಾವದಲ್ಲಿ ಅಷ್ಟಕರ್ಮ, ಶರೀರ, ವಿಭಾವ ಭಾವ ಮತ್ತು ಬೇರೆ ಯಾವುದರ ಸಂಯೋಗವಿಲ್ಲ ಆದಂತೂ ಅಸಂಯೋಗಿ ತತ್ತ್ವವಿದೆ. ಪುಣ್ಯ-ಪಾಪದ ಭಾವಗಳಿಂದ ರಹಿತ ನಿರಂಜನ ನಿಜ ಪರಮಾತ್ಮನ ಶ್ರದ್ಧೆ-ಜ್ಞಾನ - ಸ್ಥಿರತೆ ಮಾಡುವುದು ಅದು ಮೋಕ್ಷಮಾರ್ಗವಿದೆ. ಆ ಮೋಕ್ಷಮಾರ್ಗವು ಅದು ತನ್ನ ಸ್ವತಂತ್ರ ಪುರುಷಾರ್ಥದಿಂದ ಆಗುತ್ತದೆ. ಅದರಲ್ಲಿ ಯಾರೂ ಸಹಾಯಕರಾಗುವುದಿಲ್ಲ.

ಈಗ ನೀನು ನಿರ್ಮೋಹಿಯಾಗಿ ಆತ್ಮನ ಧ್ಯಾನ ಮಾಡೆಂದು ಹೇಳುತ್ತಾರೆ, -

ಏಕ್ಕಲಉ ಜಇ ಜಾಇಸಿಹಿ ತೋ ಪರಭಾವ ಚಏಹಿ
ಅಪ್ಪಾ ಝಾಯಹಿ ಣಾಣಮಉ ಲಹು ಸಿವ-ಸುಕ್ಖ ಲಹೇಹಿ ॥70॥

ನೀನೋರ್ವನೆ ಇರುವೆ ಎಲೆ ಜೀವ ಪರಿತೆಜಿಸು ಪರಭಾವಗಳ
ಜ್ಞಾನಮಯಾತ್ಮನ ಧ್ಯಾನಿಸು ನೀ ಪಡೆಯುವೆ ಶಿವಸುಖ ಶೀಘ್ರದಲಿ ॥70॥

ಅರ್ಥ :- ಜೀವನೇ ! ನೀನು ಏಕಾಕಿಯಾಗಿ ಹೋಗುವುದಿದ್ದರೆ ರಾಗ - ದ್ವೇಷ - ಮೋಹ ಮೊದಲಾದ ಪರಭಾವಗಳನ್ನು ಬಿಟ್ಟುಕೊಟ್ಟು ಜ್ಞಾನಮಯನಾದ ಆತ್ಮನ ಧ್ಯಾನ ಮಾಡಿದರೆ ಶೀಘ್ರದಲ್ಲಿಯೇ ಮೋಕ್ಷದ ಸುಖ ಪಡೆಯುವೆ.

ಎಲೈ ಆತ್ಮನೇ ! ನೀನು ಏಕಾಕಿಯೇ ಇರುವೆ, ಆದುದರಿಂದ ಮೋಹ-ರಾಗ-ದ್ವೇಷ ಮೊದಲಾದ ಸಮಸ್ತ ಪರಭಾವಗಳನ್ನು ತ್ಯಾಗ ಮಾಡಿ, ನಿರ್ಮಲಾನಂದನೂ, ಜ್ಞಾನಮಯನೂ, ಸದಾ ಶುದ್ಧ ಪವಿತ್ರನೂ ಆದ ನಿಜಾತ್ಮನ ಧ್ಯಾನ ಮಾಡು ಅದರಿಂದ ನಿನಗೆ ಬೇಗನೆ ಮೋಕ್ಷದ ಸುಖವು ದೊರಕುವುದು.

ಆತ್ಮನು ಜ್ಞಾಯಕ ಸ್ವಭಾವಿಯಿದ್ದಾನೆ. ಎಲ್ಲಿ-ಎಲ್ಲಿ ಜ್ಞಾನವಿದೆ ಅಲ್ಲಿ - ಅಲ್ಲಿ ನಾನು ಇದ್ದೇನೆ ಮತ್ತು ಎಲ್ಲಿ-ಎಲ್ಲಿ ಜ್ಞಾನವಿಲ್ಲ ಅಲ್ಲಿ-ಅಲ್ಲಿ ನಾನು ಇಲ್ಲವೇ ಇಲ್ಲ. ಭಕ್ತಿಯಲ್ಲಿ, ರಾಗ ಮೊದಲಾದ ಭಾವಗಳಲ್ಲಿ ಜ್ಞಾನವು ಇಲ್ಲ, ಆದುದರಿಂದ

ಅವು ನಾನಲ್ಲ. ನಾನು ಚೈತನ್ಯಮಾತ್ರನಿದ್ದೇನೆಂದು ತಿಳಿದುಕೊಂಡು ರಾಗಾದಿಗಳ ತ್ಯಾಗ ಮಾಡಿ ತನ್ನ ಜ್ಞಾನಮಯನಾದ ಆತ್ಮನಲ್ಲಿ ಏಕಾಗ್ರವಾಗುವುದು ಅದು ಯೋಗಸಾರವಿದೆ.

ಎಲೈ ಭವ್ಯ ಜೀವರುಗಳೇ ! ಆತ್ಮನು ತನ್ನ ಜ್ಞಾನದ ಭೂಮಿಕೆಯಲ್ಲಿ ಬಂದು ಬಿಡುವಂಥ ಕಾರ್ಯವನ್ನೇ ನೀವು ಮಾಡಿರಿ. ದೇಹ ಬಿಡುವ ಮೊದಲು ಈ ಪ್ರಯತ್ನ ಮಾಡಿಕೊಳ್ಳಿರಿ. ಮನೆಗೆ ಬೆಂಕಿ ಹೊತ್ತಿಕೊಂಡಾಗ ಯಾರೂ ಬಾವಿ ತೋಡಲು ಹೋಗುವುದಿಲ್ಲ, ಆದುದರಿಂದ ಮರಣದ ಮೊದಲು ಆತ್ಮನ ಪ್ರಾಪ್ತಿಯ ಯತ್ನ ಮಾಡಿಕೊಳ್ಳಿರಿ. ಮನುಷ್ಯ ಪರ್ಯಾಯದಿಂದಲೇ ಮೋಕ್ಷ ಪದವು ದೊರಕುವ ಸಾಧ್ಯತೆಯಿದೆ. ದೇವಗತಿ, ನರಕಗತಿ ತಿರ್ಯಂಚಗತಿಗಳಿಂದ ಶಿವಪದವು ದೊರಕುವುದಿಲ್ಲ, ಆದುದರಿಂದ ಇಂಥ ಸುಸಂಧಿಯನ್ನು ಕಳೆದುಕೊಳ್ಳಬೇಡಿರಿ.

ರಾಗ ಮೊದಲಾದ ಪರಭಾವಗಳು ನಿನ್ನ ಜ್ಞಾನಭೂಮಿಕೆಯಿಂದ ಪೂರ್ಣ ಹೊರಗೆ ಇವೆ. ಹೊರಗಿನ ಸಂಯೋಗಗಳಲ್ಲಂತೂ ಆತ್ಮನಿಗೆ ಏಕಾಗ್ರವಾಗುವ ಸಲುವಾಗಿ ಸ್ಥಾನವೇ ಇಲ್ಲ. ಆತ್ಮನಿಗೆ ತನ್ನ ಮೋಹ -ರಾಗ-ದ್ವೇಷ ಭಾವಗಳಲ್ಲಿ ಕೂಡ ಎಲ್ಲಿಯೂ ಏಕಾಗ್ರವಾಗುವ ಯಾವ ಸ್ಥಾನವೇ ಇಲ್ಲ. ಕೇವಲಜ್ಞಾನ ಸ್ವರೂಪಿಯಾದ ತನ್ನ ಆತ್ಮನಲ್ಲಿಯೇ ತನಗೆ ಸ್ಥಿರವಾಗಲು ಸ್ಥಾನವಿದೆ. ಆದುದರಿಂದ ತನ್ನ ದ್ರವ್ಯ-ಕ್ಷೇತ್ರ-ಕಾಲ-ಭಾವಗಳಲ್ಲಿಯೇ ಸ್ಥಿರವಾಗುವ ಸ್ಥಾನವಿದೆಯೆಂದು ತಿಳಿದುಕೊಂಡು, ಸ್ವಭಾವದಲ್ಲಿ ಅತ್ಯಂತ ರುಚಿಯುಳ್ಳವನಾಗಿ ಅದರಲ್ಲಿಯೇ ಮಗ್ನವಾಗುವ ಎಂದರೆ ಆತ್ಮಿಕ ಆನಂದವನ್ನು ಪ್ರಾಪ್ತ ಮಾಡಿಕೊಳ್ಳುವ ಉದ್ಯೋಗ - ಪ್ರಯತ್ನ ಮಾಡು. ಅಖಂಡ ಜ್ಞಾನಮಯವಾದ ವಸ್ತುವು ಅದು ನನ್ನ ದ್ರವ್ಯವಿದೆ. ಅಸಂಖ್ಯಾತ ಪ್ರದೇಶವು ಅದು ನನ್ನ ಕ್ಷೇತ್ರವಿದೆ, ಒಂದು ಸಮಯದ ಪರ್ಯಾಯವು ಅದು ನನ್ನ ಕಾಲವಿದೆ ಮತ್ತು ಜ್ಞಾನ, ದರ್ಶನ, ಸುಖ, ವೀರ್ಯ ಮೊದಲಾದವು ನನ್ನ ಶುದ್ಧಭಾವವಿವೆ. ಇದುವೇ ನಿಜವಾಗಿ ನನ್ನ ಸರ್ವಸ್ವವಿದೆ. ಯಾವ ಭಾವದಲ್ಲಿ ಪರದ ಆಶ್ರಯವಿದೆ ಆ ಭಾವವು ನನ್ನದು ಇಲ್ಲ, ನಾನಂತೂ ಏಕಾಕಾರ, ಅಖಂಡ, ಶುದ್ಧ, ಸ್ವಸಂವೇದನಗಮ್ಯ, ಏಕ, ಅವಿನಾಶಿಯಾದ ಪದಾರ್ಥನಿದ್ದೇನೆ. ಅದರ ಶ್ರದ್ಧೆ, ಜ್ಞಾನ, ಚಾರಿತ್ರ ಇವು ನನ್ನ ಸ್ವಭಾವವಿದ್ದು ಇದು ಒಂದೇ ಮೋಕ್ಷಮಾರ್ಗವಿದೆ.

ಪುಣ್ಯವನ್ನು ಕೂಡ ಪಾಪವೆಂದೇ ಮನ್ನಿಸುವವನು ಜ್ಞಾನಿಯಿದ್ದಾನೆಂದು ಈಗ ಹೇಳುತ್ತಾರೆ, -

ಜೋ ಪಾಉ ವಿ ಸೋ ಪಾಉ ಮುಣಿ ಸವ್ವು ಇ ಕೋ ವಿ ಮುಣೇಇ
ಜೋ ಪುಣ್ಣು ವಿ ಪಾಉ ವಿ ಭಣಇ ಸೋ ಬುಹ ಕೋ ವಿ ಹವೇಇ ॥71॥

ತಿಳಿವರು ಪಾಪವ ಪಾಪೆಂದು ಲೋಕದ ಸಕಲ ಜನರುಗಳು
ತಿಳಿವರು ಪುಣ್ಯವ ಪಾಪೆಂದು ಲೋಕದ ವಿರಳ ಬುಧಜನರು ॥71॥

ಅರ್ಥ :- ಪಾಪವನ್ನು ಪಾಪವೆಂದು ತಿಳಿದುಕೊಂಡು ಎಲ್ಲರೂ ಅದನ್ನು ಪಾಪವೆಂದೇ ಮನ್ನಿಸುತ್ತಾರೆ ; ಆದರೆ ಪುಣ್ಯವನ್ನು ಕೂಡ ಪಾಪವೆಂದು ಹೇಳುವಂಥ ಬುದ್ಧಿವಂತರು ಮಾತ್ರ ಎಲ್ಲಿಯೋ ವಿರಳರಾಗಿಯೇ ಇದ್ದಾರೆ.

ಹಿಂಸೆ, ಅಸತ್ಯ, ಕಳವು, ಪರಿಗ್ರಹ, ಅಬ್ರಹ್ಮ ಮೊದಲಾದ ಭಾವಗಳನ್ನಂತೂ ಇಡೀ ಜಗತ್ತೇ ಪಾಪವೆಂದು ಹೇಳುತ್ತದೆ; ಆದರೆ ದಯೆ, ದಾನ, ಅಹಿಂಸೆ, ಸತ್ಯ ಮೊದಲಾದ ಪುಣ್ಯ ಭಾವಗಳನ್ನು ಕೂಡ ಪಾಪವೆಂದು ಹೇಳುವಂಥ ಜ್ಞಾನಿಗಳು ವಿರಳರಾಗಿಯೇ ಇದ್ದಾರೆ. ಇಲ್ಲಿ ಪುಣ್ಯವು ಕೂಡ ಪಾಪವಿದೆಯೆಂದೇ ಸಿದ್ಧ ಮಾಡುತ್ತಾರೆ.

ಜ್ಞಾನಿಗಳಿಗೆ ಕೂಡ ಅಶುಭದಿಂದ ತಪ್ಪಿಸಿಕೊಳ್ಳುವ ಸಲುವಾಗಿ ಶುಭ ಭಾವಗಳು ಬರುತ್ತವೆ, ಆದರೆ ನಿಜಾತ್ಮರೂಪದ ಅಮೃತ ಸ್ವರೂಪದಿಂದ ಚ್ಯುತರಾಗಿ ಪುಣ್ಯಭಾವದಲ್ಲಿ ಬರುವುದು ಅದು ನಿಶ್ಚಯದಿಂದ ಪಾಪವಿದೆ. ಪುಣ್ಯದ ಫಲವು ವಿಷವಿದೆ. ಪುಣ್ಯದ ಫಲದಲ್ಲಿ ಸಂಸಾರವೇ ಫಲಿಸುತ್ತದೆ. ಅದಕ್ಕಾಗಿಯೇ ಜ್ಞಾನಿಗಳು ಪುಣ್ಯವನ್ನು

ಕೂಡ ಪಾಪವೆಂದು ಹೇಳುತ್ತಾರೆ. ನಿಶ್ಚಯದಿಂದ ತನ್ನ ಶುದ್ಧ ಸ್ವರೂಪವನ್ನು ಬಿಟ್ಟುಕೊಟ್ಟು ಬೇರೆ ಯಾವ ಶುಭ-ಅಶುಭ ಭಾವಗಳು ಬರುತ್ತವೆ ಅವೆಲ್ಲವೂ ಅಪವಿತ್ರವಾದ ಭಾವಗಳಿವೆ. ಅಮೃತವನ್ನು ಎಂದರೆ ಆನಂದವನ್ನು ಲೂಟಿ ಮಾಡುವಂಥವುಗಳಿವೆ, ಸಹಾಯ ಮಾಡುವಂಥವುಗಳಿಲ್ಲ, ಆದಕ್ಕಾಗಿಯೇ ಆ ಸಮಸ್ತ ಶುಭಾಶುಭ ಭಾವಗಳು ಪಾಪವಿವೆ, ಸಂಸಾರದ ಫಲವನ್ನೇ ಕೊಡುವಂಥವಿವೆ.ಆನಂದವು ನಿನ್ನ ಆತ್ಮನಲ್ಲಿಯೇ ಇದೆ, ಪರಭಾವಗಳಲ್ಲಂತೂ ಕೇವಲ ದುಃಖವೇ ಇದೆಯೆಂದು ಸರ್ವಜ್ಞದೇವರು ದಿವ್ಯಧ್ವನಿಯಲ್ಲಿ ಹೇಳಿದ್ದಾರೆ.

ಎಲ್ಲಕ್ಕಿಂತ ಮೊದಲು ಆತ್ಮ ಮತ್ತು ಬಂಧದ ಲಕ್ಷಣ ತಿಳಿದುಕೊಂಡು ಎರಡರ ಭೇದ ಜ್ಞಾನ ಮಾಡಬೇಕೆಂದು ಭ.ಕುಂದಕುಂದಾಚಾರ್ಯದೇವರು ಸಮಯಸಾರದ ೨೬೫ ನೇ ಗಾಥೆಯಲ್ಲಿ ಹೇಳುತ್ತಾರೆ. ಆತ್ಮಾರ್ಥಿಗಳು ಮೊಟ್ಟ ಮೊದಲು ಮಾಡಬೇಕಾದ ಕರ್ತವ್ಯವೇನೆಂದರೆ ಜ್ಞಾನ ಸ್ವಭಾವಿಯಾದ ಆತ್ಮನನ್ನು ತಿಳಿದುಕೊಂಡು ಅವನ ಶ್ರದ್ಧೆ ಮಾಡಬೇಕು ಮತ್ತು ಬಂಧ ತತ್ತ್ವವನ್ನು ತಿಳಿದುಕೊಂಡು ಸರ್ವಥಾ ಅದರ ಭೇದ ಮಾಡಬೇಕು. ಯಾರಿಗೆ ಭವಭ್ರಮಣದಿಂದ ಬಿಡುಗಡೆ ಹೊಂದುವುದಿದೆ ಅವರು ಪುಣ್ಯ - ಪಾಪದ ಭಾವಗಳನ್ನು ಸಂಪೂರ್ಣವಾಗಿ ಬಿಟ್ಟುಕೊಟ್ಟು ಅಮೃತ ಸ್ವರೂಪನಾದ ಆತ್ಮನ ಧ್ಯಾನ ಮಾಡಬೇಕಾಗುವುದು.

ಅಯ್ಯೊ ಸೋದರನೇ ! ನೀನು ಸರ್ವಜ್ಞದೇವರ ವಾಣಿಯನ್ನು ಆಲಿಸಿ, ವಿಚಾರಮಾಡಿ ಮೊದಲು ಸತ್ಯದ ನಿರ್ಣಯವನ್ನಾದರೂ ಮಾಡು. ಇನ್ನೂ ನಿರ್ಣಯದ ಸುಳಿವೇ ಇಲ್ಲವೆಂದ ಮೇಲೆ ಸತ್ಯಮಾರ್ಗವು ಎಲ್ಲಿಂದ ಕೈಗೆ ಬರುವುದು ? ಪುಣ್ಯ - ಪಾಪದ ಭಾವಗಳು ಬಂಧ ತತ್ತ್ವವಿವೆ ಮತ್ತು ತನ್ನ ಆತ್ಮನು ಅಬಂಧ ಸ್ವರೂಪಿಯಿದ್ದಾನೆಂದು ತಿಳಿದು ಎರಡರ ಭೇದ ವಿಜ್ಞಾನ ಮಾಡಬೇಕು. ಪುಣ್ಯ - ಪಾಪದ ಭಾವಗಳು ಅವು ನನ್ನ ಸ್ವರೂಪವೇ ಇಲ್ಲವೆಂದು ಮೊದಲು ನಿಶ್ಚಯ ಮಾಡಿ, ಅನಂತರ ಅಬಂಧ ಸ್ವರೂಪಿಯಾದ ತನ್ನ ಪರಮ ಪಾವನ ಪರಮಾತ್ಮನ ಶ್ರದ್ಧೆ, ಜ್ಞಾನ, ಅನುಭವ ಮಾಡಿಕೊಳ್ಳಬೇಕು. ಆ ಅನುಭವವೇ ಮೋಕ್ಷಮಾರ್ಗವಿದೆ.

ಸಾಮಾನ್ಯವಾಗಿ ಸಮಸ್ತ ಜೀವರುಗಳು ಪಾಪ ಭಾವವನ್ನು ಹೇಯವೆಂದು ಮತ್ತು ಪುಣ್ಯ ಭಾವವನ್ನು ಉಪಾದೇಯವೆಂದು ಮನ್ನಿಸಿಕೊಂಡಿದ್ದಾರೆ. ಪುಣ್ಯದ ಫಲದಲ್ಲಿ ಸುಖದ ಅಪೇಕ್ಷೆಯಿಟ್ಟುಕೊಂಡಿದ್ದಾರೆ. ಏಕೆಂದರೆ ಪುಣ್ಯದಿಂದಲೇ ಇಂದ್ರ, ಚಕ್ರವರ್ತಿ, ಬಲದೇವ, ವಾಸುದೇವ ಮೊದಲಾದ ಮಹಾವೈಭವಯುಕ್ತವಾದ ಪದವಿಗಳು ಪ್ರಾಪ್ತವಾಗುತ್ತವೆ. ಆದರೆ ಈ ಪದವಿಗಳು ಕೂಡ ಕೇವಲ ದುಃಖಸ್ವರೂಪವೇ ಇವೆ. ಪುಣ್ಯ-ಪಾಪದ ಭಾವಗಳೆರಡೂ ಒಂದೇ ಜಾತಿಯವಿವೆ. ಎರಡರ ಫಲವು ಸಂಸಾರ ಮತ್ತು ದುಃಖವೇ ಇದೆಯೆಂದು ತಿಳಿದುಕೊಳ್ಳುವಂಥ ಜ್ಞಾನೀ ವಿದ್ವಾಂಸರುಗಳು ಎಲ್ಲಿಯೋ ಒಬ್ಬಿಬ್ಬರು ವಿರಳರಾಗಿಯೇ ಇರುತ್ತಾರೆ. ಯಾವುದರ ಕಾರಣದಿಂದ ಸಂಸಾರದಲ್ಲಿ ಉಳಿಯಬೇಕಾಗಿದೆ, ವಿಷಯ - ಭೋಗಗಳಲ್ಲಿ ಮೋಸ ಹೋಗಬೇಕಾಗಿದೆ ಮತ್ತು ತಮ್ಮ ಸ್ವಾಧೀನತೆಯ ಘಾತ ಮಾಡುವಂಥ ಆ ಪುಣ್ಯವು ಕೂಡ ಪಾಪವೇ ಇದೆಯೆಂದು ಜ್ಞಾನಿಗಳು ನಿಶ್ಚಯದಿಂದ ಮನ್ನಿಸುತ್ತಾರೆ.

ಆತ್ಮನಂತೂ ಅತಿಶಯ ಶಕ್ತಿ ಸಂಪನ್ನನಿದ್ದಾನೆ. ಅವನಲ್ಲಿ ವಿಪರೀತ ಪುರುಷಾರ್ಥವಿದ್ದರೆ ಸಮವಸರಣದಲ್ಲಿ ತೀರ್ಥಂಕರದೇವರು ತಿಳಿಸಿಕೊಟ್ಟರೂ ಕೂಡ ತಿಳಿದುಕೊಳ್ಳಲಾರನು ಮತ್ತು ಸರಳ ಪುರುಷಾರ್ಥಿಯಾದ ಸಮ್ಯಕ್ ದೃಷ್ಟಿಯಿದ್ದರೆ, ಅವನ ಮೇಲೆ ಅಗ್ನಿಯ ವೃಷ್ಟಿಮಾಡಿದರೂ, ಪರೀಷಹಗಳಿಗೆ ಕೊನೆ ಮೊದಲಿಲ್ಲದಿದ್ದರೂ, ಅವನನ್ನು ತನ್ನ ಶ್ರದ್ಧೆಯಿಂದ ಕದಲಿಸಿದರು ಕೂಡ ಅವನು ಕದಲುವುದಿಲ್ಲ. ಯಾವನೋ ದೇವನು ಬಂದು ಪರೀಕ್ಷೆ ಮಾಡುವ ಸಲುವಾಗಿ ನೀನು ಪುಣ್ಯದಿಂದ ಲಾಭವಾಗುತ್ತದೆಯೆಂದು ಮನ್ನಿಸಿದರೆ ನಿನ್ನನ್ನು ಪರೀಷಹಗಳಿಂದ ಮುಕ್ತಮಾಡುವೆನು, ಇಲ್ಲದಿದ್ದರೆ ಸಾಯಿಸಿ ಬಿಡುವೆನೆಂದು ಹೆದರಿಕೆ ಹಾಕಿದರೂ ಕೂಡ ಅವನು ತನ್ನ ಶ್ರದ್ಧೆಯಿಂದ ಚಂಚಲನಾಗುವುದಿಲ್ಲ. ಯಾರು ಯಾರನ್ನೂ ಸಾಯಿಸುವ ಸಾಧ್ಯತೆಯಿಲ್ಲವೆಂಬುದನ್ನು ಅವನು ದೃಢವಾಗಿ ನಂಬಿರುತ್ತಾನೆ. ನಾನಂತೂ ಪುಣ್ಯ-ಪಾಪದ ಭಾವದಿಂದ ರಹಿತನಾದ ಆತ್ಮನಿಂದಲೇ ಲಾಭವಿದೆಯೆಂದು ಮನ್ನಿಸುತ್ತೇನೆ. ಪುಣ್ಯದಿಂದ ಮೂರು ಕಾಲದಲ್ಲಿಯೂ ಲಾಭವಾಗುವುದಿಲ್ಲವೆಂದೇ ಮನ್ನಿಸುತ್ತೇನೆ.

ಜ್ಞಾನಿಗಳಿಗೆ ತಮ್ಮ ಆತ್ಮನ ಆನಂದದ ಎದುರು ಅನ್ಯಭಾವಗಳೆಲ್ಲವೂ ಅತ್ಯಂತ ತುಚ್ಛವೆನಿಸುತ್ತವೆ. ಪುಣ್ಯ-ಪಾಪ ಭಾವಗಳೆರಡೂ ದೋಷಯುಕ್ತವಿದ್ದು ಬಂಧನದ ಅಪೇಕ್ಷೆಯಿಂದ ಅವೆರಡೂ ಸಮಾನವಿವೆ. ಅವೆರಡರ ಬಂಧನದ ಕಾರಣವು ಕಷಾಯಗಳ ಮಲಿನತೆಯಿದೆ. ಅವೆರಡರ ಅನುಭವವು ಸ್ವಾಭಾವಿಕ ಅನುಭವದಿಂದ ವಿರುದ್ಧವಿದೆ. ಅವೆರಡೂ ಅತೀಂದ್ರಿಯ ಶುದ್ಧ ಭಾವದಿಂದ ವಿಪರೀತವಿವೆ. ಅದಕ್ಕಾಗಿಯೇ ಜ್ಞಾನಿಗಳು ಪಾಪದ ಸಮಾನವಾಗಿಯೇ ಪುಣ್ಯವನ್ನು ಕೂಡ ಲಾಭದಾಯಕವೆಂದು ಮನ್ನಿಸುವುದಿಲ್ಲ.

ಪುಣ್ಯ - ಪಾಪದ ಭಾವಗಳಲ್ಲಿ ತನ್ಮಯವಾಗುವುದರಿಂದ ಬಂಧನವಾಗುತ್ತದೆ, ಆದುದರಿಂದ ಮೋಕ್ಷ ಮಾರ್ಗದಲ್ಲಿ ಅವು ಬದ್ಧವಿರೋಧವಿವೆ. ಅವು ಆತ್ಮಿಕ ಧರ್ಮವನ್ನು ಲೂಟಿ ಮಾಡುವಂಥವುಗಳಿವೆ. ವೀತರಾಗ ಮಾರ್ಗದ ಇಂಥ ಮಾತುಗಳನ್ನು ಪಾಮರರು ಗ್ರಹಿಸುವ ಸಾಧ್ಯತೆಯಿಲ್ಲ. ಜ್ಞಾನಿಗಳು ಅವೆರಡರ ಭಾವಗಳನ್ನು ದುಃಖದ ಕಾರಣವೆಂದು ತಿಳಿದುಕೊಂಡು ಅವುಗಳಿಂದ ಅತ್ಯಂತ ವಿರಕ್ತರಿರುತ್ತಾರೆ.

ಜ್ಞಾನಿಗಳು ಒಂದು ಶುದ್ಧೋಪಯೋಗವನ್ನೇ ಕರ್ಮಕ್ಷಯದ ಕಾರಣವೆಂದೂ ಮತ್ತು ಆನಂದದಾಯಕವೆಂದೂ ಮನ್ನಿಸುತ್ತಾರೆ. ಅದೊಂದನ್ನೇ ಮೋಕ್ಷದ ಕಾರಣವೆಂದು ತಿಳಿಯುತ್ತಾರೆ.

ಯಾವ ಪ್ರಕಾರ ಪರಮಾತ್ಮನ ಸ್ವಭಾವವಿದೆ ಅದೇ ಪ್ರಕಾರ ತನ್ನ ಆತ್ಮನಿದ್ದಾನೆಂದು ನಂಬಿ ಆತ್ಮನ ದೃಷ್ಟಿ ಮಾಡಿದರೆ ಯಾವ ಶುದ್ಧ ಆಚರಣೆಯು ಪ್ರಕಟವಾಗುತ್ತದೆ ಅದೇ ಉಪಾದೇಯವಿದೆ, ಹಿತಕಾರಕವಿದೆ. ಪುಣ್ಯ-ಪಾಪದ ಭಾವಗಳು ಕರ್ಮಬಂಧದ ಕಾರಣವಿದ್ದರೆ ಶುದ್ಧಭಾವವು ಕರ್ಮಕ್ಷಯದ ಕಾರಣವಿದೆ. ಪುಣ್ಯ-ಪಾಪದ ಭಾವಗಳು ದುಃಖದಾಯಕವಿದ್ದರೆ ಶುದ್ಧಾತ್ಮನ ದೃಷ್ಟಿ, ಜ್ಞಾನ ಮತ್ತು ಶುದ್ಧ ಉಪಯೋಗವು ಆನಂದದಾಯಕವಿದೆ. ಆತ್ಮನು ಸ್ವಯಂ ಆನಂದಸ್ವರೂಪನಿರುವುದರಿಂದ ಅವನ ಅಂತರ್ಯದ ಉಪಯೋಗವು ಕೂಡ ಆನಂದದಾಯಕವಿದೆ. ಪುಣ್ಯ-ಪಾಪದ ಭಾವಗಳು ಕೇವಲ ದುಃಖದಾಯಕವೇ ಇವೆ.

ಧರ್ಮಾತ್ಮನ ದೃಷ್ಟಿಯು ಆತ್ಮನ ಮೇಲೆಯೇ ಇರುವುದರಿಂದ ಅವನ ಭಾವನೆಯು ಕೂಡ ನಾನು ನಿರಂತರ ನನ್ನ ಆತ್ಮರೂಪದ ಉಪವನದಲ್ಲಿಯೇ ವಿಹರಿಸುವೆನು, ಆತ್ಮನಲ್ಲಿಯೇ ಏಕಾಗ್ರತೆ ಮಾಡಿ ನಿರಂತರ ವೀತರಾಗ ಭಾವದ ಸೇವೆ ಮಾಡುವೆನು ಮತ್ತು ಸಿದ್ಧ ಸಮಾನವಿರುವ ನನ್ನ ಪದದಲ್ಲಿಯೇ ಪ್ರೀತಿ ಮಾಡುವೆನೆಂಬುದಾಗಿರುತ್ತದೆ.

ಜ್ಞಾನಿಗಳಿಗೆ ಇನ್ನೂ ಆತ್ಮವೀರ್ಯವು ಎಂದರೆ ಆತ್ಮಬಲವು ಕಡಿಮೆಯಿರುವುದರಿಂದ ಕರ್ಮೋದಯದ ವಶದಿಂದ ಗೃಹಸ್ಥರಿಗೆ ಯೋಗ್ಯವಾದ ಸಮಸ್ತ ಕಾರ್ಯಗಳನ್ನು ಮಾಡಬೇಕಾಗುತ್ತದೆ. ದಯೆ, ದಾನ, ಪೂಜೆ, ಭಕ್ತಿ ಮೊದಲಾದುವನ್ನು ಮಾಡುತ್ತಾರೆ, ಆದರೆ ಅವರಿಗೆ ಅವುಗಳ ಉದ್ದೇಶವು ಪಂಚೇಂದ್ರಿಯಗಳ ಭೋಗದ ಇಚ್ಛೆಯಿರುವುದಿಲ್ಲ. ಪುಣ್ಯ ಬಂಧ ಮತ್ತು ಪುಣ್ಯಫಲದ ಅಪೇಕ್ಷೆಯಿರುವುದಿಲ್ಲ. ಯಾವುದರಿಂದ ತಮ್ಮ ಶುದ್ಧ ಸ್ವರೂಪವು ಬಂಧನಕ್ಕೊಳಗಾಗುತ್ತದೆ ಅಂಥ ಭಾವಗಳನ್ನು ಜ್ಞಾನಿಗಳು ಹಿತಕಾರಕವೆಂದು ಮನ್ನಿಸುವುದಿಲ್ಲ. ಜ್ಞಾನೀ ಧರ್ಮಾತ್ಮರುಗಳು ತಮ್ಮ ಶುದ್ಧಸ್ವರೂಪದ ಅಭಿರುಚಿಯುಳ್ಳವರಿರುತ್ತಾರೆ, ಮುಕ್ತಿ ಪಥದ ಪಥಿಕರಿರುತ್ತಾರೆ, ಆದರೆ ಸಂಸಾರದ ಪಥಿಕರಿರುವುದಿಲ್ಲ. ಆದುದರಿಂದ ಪುಣ್ಯ-ಪಾಪವೆರಡನ್ನು ಬಂಧನಕಾರಿ-ಸಮಾನವೆಂದು ತಿಳಿದುಕೊಂಡು ಬಂಧನದಿಂದ ಬಿಡುಗಡೆಯಾಗುವ ಸಲುವಾಗಿ ಉತ್ಸುಕರಿರುತ್ತಾರೆ.

ಯಾರಿಗೆ ಆತ್ಮನ ಪವಿತ್ರ ಧರ್ಮವನ್ನು ಪ್ರಕಟ ಮಾಡುವುದಿದೆ ಮತ್ತು ಪೂರ್ಣಾನಂದ ಸ್ವರೂಪವಿರುವ ಮೋಕ್ಷದ ಭಾವನೆಯಿದೆ ಅವರು ಎಲ್ಲ ಪುಣ್ಯ-ಪಾಪಗಳನ್ನು ಬಿಟ್ಟುಕೊಡುವುದು ಯೋಗ್ಯವಿದೆ, ಅವರ ದೃಷ್ಟಿಯಲ್ಲಿ ಆತ್ಮನ ಜ್ಞಾನ ಮತ್ತು ಆತ್ಮನ ಅಭಿರುಚಿಯಿರುತ್ತದೆ. ಯಾರಿಗೆ ಪುಣ್ಯ ಭಾವದ ಅಭಿರುಚಿಯಿಲ್ಲ ಅವರೇ ನಿಜವಾದ ಮೋಕ್ಷಾರ್ಥಿಗಳಿದ್ದಾರೆ.

ಈಗ ಪುಣ್ಯ ಕರ್ಮವು ಚಿನ್ನದ ಬೇಡಿಯಿದೆಯೆಂದು ಹೇಳುತ್ತಾರೆ, -

ಜಹ ಲೋಹಮ್ಮಿಯ ಣಿಯಡ ಬುಹ ತಹ ಸುಣ್ಣಮ್ಮಿಯ ಜಾಣಿ
ಜೇ ಸುಹ ಅಸುಹ ಪರಿಚ್ಚಯಹಿ ತೇ ವಿ ಹವಂತೆ ಹು ಣಾಣಿ ॥72॥

ಹೇಗೆ ಲೋಹಮಯ ಬೇಡಿಯಿದೆ ಹಾಗೆ ಚಿನ್ನಮಯ ತಿಳಿದ ಬುಧ
ಬೇಗ ಶುಭಾಶುಭ ತೆಜಿಸುವವನು ನಿಶ್ಚಯ ಜ್ಞಾನಿ ಇರುವನು ಅವನು ॥72॥

ಅರ್ಥ :- ಎಲೈ ಪಂಡಿತನೇ ! ಯಾವ ಪ್ರಕಾರ ಲೋಹದ ಬೇಡಿಯಿದೆ ಅದೇ ಪ್ರಕಾರ ಸುವರ್ಣದ ಬೇಡಿಯಿದೆಯೆಂದು ತಿಳಿದುಕೊಳ್ಳು. ಯಾರು ಶುಭ - ಅಶುಭ ಈ ಎರಡೂ ಪ್ರಕಾರದ ಭಾವಗಳ ತ್ಯಾಗ ಮಾಡುತ್ತಾರೆ ಅವರೇ ನಿಶ್ಚಯದಿಂದ ಜ್ಞಾನಿಗಳಿದ್ದಾರೆ.

ಎಲೈ ಮಹನೀಯರೇ ! ಪಾಪ ಭಾವವು ಕಬ್ಬಿಣದ ಸಂಕೋಲೆಯಿದೆ ಮತ್ತು ಪುಣ್ಯ ಭಾವವು ಸುವರ್ಣದ ಸಂಕೋಲೆಯಿದೆಯೆಂದು ಕಾನನವಾಸಿಯಾದ ದಿಗಂಬರ ಸಂತರು ಹೇಳುತ್ತಾರೆ. ಅಯ್ಯಾ ಪಂಡಿತನೇ ! ನೀನು ಆ ಬಂಧನಕಾರಕವಾದ ಭಾವಗಳಿಂದ ರಹಿತ ಅಬಂಧ ಸ್ವಭಾವಿಯಾದ ಆತ್ಮನ ದೃಷ್ಟಿ ಮಾಡಿದರೆ ನಿಜವಾದ ಪಂಡಿತನಿರುವೆ. ಮೊದಲಂತೂ ಪುಣ್ಯ - ಪಾಪಗಳೆರಡೂ ಬಂಧನಕಾರಕವಿವೆಯೆಂದು ಜ್ಞಾನದಲ್ಲಿ ಸ್ವೀಕಾರ ಮಾಡು, ಅನಂತರ ಅವೆರಡೂ ಭಾವಗಳ ತ್ಯಾಗ ಮಾಡು ಎಂದರೆ ಶುಭ-ಅಶುಭ ಭಾವಗಳ ದೃಷ್ಟಿಯನ್ನು ಬಿಟ್ಟುಕೊಟ್ಟು ಪೂರ್ಣ ಶುದ್ಧವಿರುವ ನಿಜ ಸ್ವಭಾವದಲ್ಲಿ ಬಂದು ಬಿಡು! ಪುಣ್ಯವನ್ನು ಒಳ್ಳೆಯದೆಂದು ಮತ್ತು ಪಾಪವನ್ನು ಕೆಡಕೆಂದು ಮನ್ನಿಸುವವರಂತೂ ನಿಯಮದಿಂದ ಮಿಥ್ಯಾದೃಷ್ಟಿಗಳಿದ್ದಾರೆ. ಪುಣ್ಯ-ಪಾಪದ ಭಾವಗಳಲ್ಲಿ ಚೈತನ್ಯದ ಕಾಂತಿಯಿಲ್ಲ, ಅವೆರಡೂ ಕರ್ಮಗಳು ಜೀವವನ್ನು ಸಂಸಾರದಲ್ಲಿ ಸಿಕ್ಕಿಸುವಂಥವುಗಳಿವೆ. ಆದುದರಿಂದ ಮೋಕ್ಷಾರ್ಥಿಗಳು ಅವೆರಡೂ ಭಾವಗಳನ್ನು ಸಂಸಾರ ಬಂಧನದ ಕಾರಣವೆಂದು ತಿಳಿದುಕೊಂಡು ಅವುಗಳ ಅಭಿರುಚಿಯನ್ನು ಬಿಟ್ಟುಕೊಟ್ಟು ಮೋಕ್ಷಮಾರ್ಗದ ಉಪಾಯ ಮಾಡಬೇಕು.

ಯಾವ ಪ್ರಕಾರ ಕ್ರೋಧ-ಮಾನ-ಮಾಯೆ-ಲೋಭ, ಹಿಂಸೆ, ಕಳವು, ಅಬ್ರಹ್ಮ ಮೊದಲಾದ ಅಶುಭ ಭಾವಗಳಿಂದ ಘಾತಿಕರ್ಮಗಳು ಕಟ್ಟುತ್ತವೆ ಅದೇ ಪ್ರಕಾರ ಶುಭ ಭಾವಗಳಿಂದ ಕೂಡ ಘಾತಿ ಕರ್ಮಗಳು ಕಟ್ಟುತ್ತವೆ. ಘಾತಿ ಕರ್ಮಗಳಲ್ಲಿ ಕೇವಲ ಪಾಪ ಪ್ರಕೃತಿಗಳೇ ಇವೆ. ಅಘಾತಿ ಕರ್ಮಗಳಲ್ಲಿ ಪುಣ್ಯ ಭಾವದಿಂದ ಅನುಕೂಲ ಸಂಯೋಗಗಳು ದೊರಕುವಂಥ ಶುಭ ಕರ್ಮಗಳು ಕಟ್ಟುತ್ತವೆ . ಜ್ಞಾನಾವರಣ, ದರ್ಶನಾವರಣ ಮೊದಲಾದ ನಾಲ್ಕು ಘಾತಿಕರ್ಮಗಳಲ್ಲಿ ಶುಭ-ಅಶುಭ ಇವೆರಡೂ ಭಾವಗಳಿಂದ ಪಾಪ ಬಂಧವೇ ಆಗುತ್ತದೆ. ಆದುದರಿಂದ ಅತೀಂದ್ರಿಯ ಆನಂದದ ಸ್ವಾದ ತೆಗೆದುಕೊಂಡಿರುವಂಥ ಧರ್ಮಾತ್ಮ ಜೀವನಿಗೆ ಶುಭಭಾವದಲ್ಲಿ ಮತ್ತು ಆದರ ಫಲದಲ್ಲಿ ಪ್ರಾಪ್ತವಾಗುವ ಪಂಚೇಂದ್ರಿಯಗಳ ವಿಷಯಗಳಲ್ಲಿ ಅಭಿರುಚಿಯಿರುವುದಿಲ್ಲ, ಅವುಗಳಲ್ಲಿ ಸುಖ ಬುದ್ಧಿಯಿರುವುದಿಲ್ಲ. ಏಕೆಂದರೆ ಪುಣ್ಯ ಪರಿಣಾಮದಿಂದ ಕೂಡ ಆತ್ಮಘಾತವೇ ಆಗುತ್ತದೆ.

ಪುಣ್ಯ ಫಲದಲ್ಲಿ ಪ್ರಾಪ್ತವಾಗುವಂಥ ವಿಷಯಗಳಲ್ಲಿ ಸಿಲುಕಿ ಬೀಳುವ ಕಾರಣದಿಂದಲೇ ಅಜ್ಞಾನಿ ಜೀವರುಗಳು ನರಕ, ನಿಗೋದ ಮೊದಲಾದ ಗತಿಗಳಲ್ಲಿ ಹೊರಟು ಹೋಗುತ್ತಾರೆ. ಪುಣ್ಯದ ಫಲದಲ್ಲಿ ವೈಭವಗಳು ದೊರಕುತ್ತವೆ. ಮತ್ತು ಆ ವೈಭವದ ಅಭಿಮಾನದಲ್ಲಿ ಮತಿ ಭ್ರಷ್ಟರಾಗುತ್ತಾರೆ. ಅದರಿಂದ ಜೀವರುಗಳು ನರಕದಲ್ಲಿ ಹೊರಟು ಹೋಗುತ್ತಾರೆಂದು 'ಶ್ರೀ ಪರಮಾತ್ಮ ಪ್ರಕಾಶ'ದಲ್ಲಿ ಆಚಾರ್ಯ ಯೋಗೀಂದು ದೇವರು ಹೇಳುತ್ತಾರೆ. ಪುಣ್ಯದ ಫಲದಲ್ಲಿ ದೇವಗತಿ ದೊರಕುವುದು, ಅಲ್ಲಿ ತೃಷ್ಣೆಯ ಕಾರಣ ದೇವಗತಿಯ ವೈಭವವನ್ನು ಭೋಗಿಸುವ ಇಚ್ಛೆಯಿಂದ ಎಂದರೆ ಲೋಲುಪತೆಯಿಂದ ಮಿಥ್ಯಾದೃಷ್ಟಿ ಜೀವನು ಅಲ್ಲಿ ಕೂಡ ದುಃಖಿಯಾಗಿಯೇ ಇರುತ್ತಾನೆ, ಮತ್ತು ಅಲ್ಲಿಂದ ಚ್ಯುತನಾಗಿ ನೇರವಾಗಿ ಏಕೇಂದ್ರಿಯ ಮೊದಲಾದ ಕೀಳು ಪರ್ಯಾಯಗಳಲ್ಲಿ ಹೊರಟು ಹೋಗುತ್ತಾನೆ. ಎರಡನೆಯ ಸ್ವರ್ಗದವರೆಗಿನ

ದೇವಗಳು ಮರಣಹೊಂದಿ ಏಕೇಂದ್ರಿಯ ಕೂಡ ಆಗುವ ಸಾಧ್ಯತೆಯಿದೆ. ಹನ್ನೆರಡನೆಯ ಸ್ವರ್ಗದವರೆಗಿನ ದೇವಗಳು ಮರಣ ಹೊಂದಿ ಪಶುಗಳಾಗುವ ಸಾಧ್ಯತೆಯಿದೆ. ಹನ್ನೆರಡನೆಯ ಸ್ವರ್ಗದ ಮೇಲಿನ ದೇವಗಳು ಎಂದರೆ ಒಂಭತ್ತನೆಯ ಗ್ರೈವೇಯಕದವರೆಗಿನ ದೇವಗಳು ಮರಣಹೊಂದಿ ಮನುಷ್ಯರೇ ಆಗುತ್ತಾರೆ. ಸ್ವರ್ಗದಲ್ಲಿ ಕೂಡ ತೃಷ್ಣಾರೂಪದ ರೋಗದಿಂದ ಪೀಡಿತರಿರುತ್ತಾರೆ. ಅದಕ್ಕಾಗಿಯೇ ಶ್ರೀಮದ್ ರಾಯಚಂದರು 'ಆತ್ಮ ಭ್ರಾಂತಿಗೆ ಸಮಾನವಾದ ರೋಗವಿಲ್ಲ' ವೆಂದು ಹೇಳಿದ್ದಾರೆ. ಆತ್ಮನನ್ನು ಮರೆತು ಇಂದ್ರಿಯ ಸುಖ ಮತ್ತು ಪುಣ್ಯದಲ್ಲಿ ಪ್ರೀತಿಯಿಡುವುದೆಂದರೇನೇ ಆತ್ಮಭ್ರಾಂತಿಯ ರೋಗವಿದೆ. ಇದಕ್ಕೆ ಸಮಾನವಾಗಿ ಬೇರೆ ಯಾವುದೂ ದೊಡ್ಡ ರೋಗವಿಲ್ಲ.

ಸ್ವಯಂ ಭಗವಂತನಿದ್ದರು ಕೂಡ ಅಜ್ಞಾನಿಯು ಬಾಹ್ಯ ಸಂಯೋಗಗಳಲ್ಲಿ ಎಂದರೆ ಪತ್ನಿಯಲ್ಲಿ, ಪುತ್ರರಲ್ಲಿ, ಮನೆ - ಸಂಪತ್ತು ಮೊದಲಾದ ಜಡ ವಸ್ತುಗಳಲ್ಲಿ ಸುಖದ ಭಿಕ್ಷೆ ಬೇಡುತ್ತಾನೆ. ಅವನಿಗಂತೂ ತೃಷ್ಣೆಯ ರೂಪದ ಕ್ಷಯ ರೋಗವು (ಟಿ.ಬಿ.) ಹಿಡಿದುಕೊಂಡಿದೆ. ಈ ರೋಗದಿಂದ ಪೀಡಿತನಾಗಿ ಇಂದ್ರಿಯ ವಿಷಯಗಳ ಹತ್ತಿರ ಸುಖದ ಭಿಕ್ಷೆ ಬೇಡುತ್ತಾನೆ; ಆದರೆ ಪ್ರತಿಕೂಲತೆ, ರೋಗ, ನಿರ್ಧನತೆ ಮೊದಲಾದ ದುಃಖದ ಸಾಧನಗಳು ದೊರಕುವುದರಿಂದ ಯಾವ ಪ್ರಕಾರದ ಆಕುಲತೆಯಾಗುತ್ತದೆ ಅದೇ ಪ್ರಕಾರದ ಆಕುಲತೆಯು ತೃಷ್ಣಾರೂಪದ ರೋಗದಿಂದ ಆಗುತ್ತದೆ. ಈ ಜೀವನು ಅನಂತ -ಅನಂತಬಾರಿ ದೇವ, ಮನುಷ್ಯ, ದೊಡ್ಡ ರಾಜ ಮೊದಲಾದವುಗಳ ವೈಭವವನ್ನು ಪ್ರಾಪ್ತಮಾಡಿ ಕೊಂಡಿದ್ದಾನೆ. ಆದರೆ ಅವುಗಳಿಂದ ಈ ತೃಷ್ಣಾರೂಪದ ರೋಗವು ಹಾಳಾಗಿ ಹೋಗಲಿಲ್ಲ. ಏಕೆಂದರೆ ಆತ್ಮನ ಆನಂದದ ಅಭಿರುಚಿಯಿಲ್ಲದೆ ತೃಷ್ಣೆಯ ದಾಹವು ಶಮನವಾಗುವ ಸಾಧ್ಯತೆಯಿಲ್ಲ.

ಧರ್ಮಾತ್ಮರಾದ ಜೀವರುಗಳು ಪಂಚೇಂದ್ರಿಯದ ವಿಷಯಗಳನ್ನು ಹೇಯವೆಂದು ಎಂದರೆ ಬಿಟ್ಟುಕೊಡಲು ಯೋಗ್ಯವೆಂದು ತಿಳಿದುಕೊಳ್ಳುತ್ತಾರೆ, ಆದುದರಿಂದ ವಿಷಯ ಸುಖದ ಕಾರಣಭೂತವಾದ ಪುಣ್ಯ ಭಾವಗಳನ್ನು ಕೂಡ ಅವರು ಹೇಯವೆಂದು ಮನ್ನಿಸುತ್ತಾರೆ. ಇದಕ್ಕೆ ವಿಪರೀತವಾಗಿ ಅಜ್ಞಾನಿ ಜೀವರುಗಳು ಇಂದ್ರಿಯ ವಿಷಯಗಳಲ್ಲಿ ಸುಖ ಮನ್ನಿಸುತ್ತಾರೆ. ಆದುದರಿಂದ ಅವರು ಪುಣ್ಯ ಕರ್ಮದ ಬಂಧನವನ್ನು ಕೂಡ ಸುಖ ರೂಪವೆಂದು ಮನ್ನಿಸುತ್ತಾರೆ. ಯಾರು ಶುಭಾಶುಭ ಭಾವಗಳನ್ನು ಅಧಿಕವಾಗಿ ಎಂದರೆ ಮಹಾನವೆಂದು ಮನ್ನಿಸುತ್ತಾರೆ ಅವರು ತಮ್ಮ ಆತ್ಮನನ್ನು ಕೀಳಾಗಿ ಮನ್ನಿಸುತ್ತಾರೆ. ಅವರಿಗೆ ಆತ್ಮನ ಮೇಲೆ ಪ್ರೀತಿಯಿಲ್ಲ, ಆದರೆ ವಿಷಯ ಮತ್ತು ವಿಷಯಗಳ ಕಾರಣಗಳಲ್ಲಿ ಪ್ರೀತಿ ಮಾಡುತ್ತಾರೆ.

ಶುದ್ಧ ಚಿದಾನಂದ ನಿಜಾತ್ಮನ ಅಭಿರುಚಿಯುಳ್ಳ ಅನುಭವಿಯು ಬೇಕಾದರೆ ಪಶುವಾಗಿದ್ದರು ಕೂಡ ಅವನಿಗೆ ಆತ್ಮನ ಅತೀಂದ್ರಿಯ ಆನಂದದ ಅನುಭವವಿದೆ. ಅವನೇ ವಾಸ್ತವಿಕ ಸುಖಿಯಿದ್ದಾನೆ. ಚಿಕ್ಕದಾದ ಕಪ್ಪೆಯಿರಲಿ ಅಥವಾ ಗುಬ್ಬಚ್ಚಿಯಂಥ ಪಕ್ಷಿಯಿರಲಿ, ಆದರೆ ಅದು ಇರುವುದು ಆತ್ಮವಲ್ಲವೆ? ಅದಕ್ಕೆ ಆತ್ಮನ ಅನುಭವವಾಗುವ ಸಾಧ್ಯತೆಯಿದೆ. ಸರ್ವಜ್ಞ ಭಗವಂತರ ಸಮವಸರಣದಲ್ಲಿ ಸರ್ಪ, ಸಿಂಹ ಮೊದಲಾದ ಕ್ರೂರ ಹಿಂಸಕ ಪ್ರಾಣಿಗಳು ಕೂಡ ಹೋಗುತ್ತವೆ. ಅಲ್ಲಿ ಅವು ಒಂದು ವೇಳೆ ಆತ್ಮನ ದೃಷ್ಟಿಪೂರ್ವಕವಾಗಿ ಅನುಭವ ಮಾಡಿಕೊಂಡರೆ ಅವಕ್ಕೂ ಕೂಡ ಅತೀಂದ್ರಿಯ ಆನಂದವು ಪ್ರಕಟವಾಗುತ್ತದೆ. ಅದೆಷ್ಟೋ ಜೀವಗಳು ವಿಶೇಷ ಆತ್ಮಲೀನತೆ ಮಾಡಿ ಪಂಚಮ ಗುಣಸ್ಥಾನವನ್ನು ಕೂಡ ಪ್ರಾಪ್ತಮಾಡಿಕೊಳ್ಳುತ್ತವೆ. ಇದರ ನಂತರ ರಾತ್ರಿಯಲ್ಲಿ ಭೋಜನ - ಪಾನಾದಿಗಳನ್ನೂ ಮಾಡುವುದಿಲ್ಲ, ಹಗಲು ಹೊತ್ತಿನಲ್ಲೇ ನಿರ್ದೋಷ ಭೋಜನವು ಎಂದರೆ ವನಸ್ಪತಿ ಮೊದಲಾದವು ದೊರಕಿದರೆ ಸ್ವೀಕರಿಸುತ್ತವೆ. ಇಂಥ ಪಶುಗಳು ಕೂಡ ತಮ್ಮ ಶುದ್ಧ ಸ್ವರೂಪದ ಅತಿರಿಕ್ತವಾಗಿ ಬೇರೆ ಯಾವುದೇ ವಿಷಯಗಳಲ್ಲಿ ಆನಂದ ಮನ್ನಿಸುವುದಿಲ್ಲ. ಆದರೆ ಆತ್ಮ ಸ್ವರೂಪದಿಂದ ಅಪರಿಚಿತನಿರುವಂಥ ದೊಡ್ಡ ಶ್ರೇಷ್ಠಿಯು ಕೂಡ ಪುಣ್ಯ - ಪಾಪದ ಭಾವ ಮತ್ತು ಅವುಗಳ ಫಲದಲ್ಲಿ ಸುಖವನ್ನು ಮನ್ನಿಸಿ ಆಕುಲತೆಯ ಅನುಭವವನ್ನೇ ಮಾಡುತ್ತಾನೆ.

ಸಮ್ಯಕ್‌ದೃಷ್ಟಿಗೆ ನರಕದಲ್ಲಿ ಕೂಡ ಅತೀಂದ್ರಿಯ ಆನಂದವಿರುತ್ತದೆ.

'ಬಾಹ್ಯದಲ್ಲಿ ನಾರಕ ಕೃತ ದುಃಖ ಭೋಗಿಸಿದರೆ ಅವನು ಅಂತರ್ಯದಲ್ಲಿ ಸುಖರಸವನ್ನು ಗಳಗಳ ಕುಡಿಯುವನು'

ಆತ್ಮನ ಶುದ್ಧ ದೃಷ್ಟಿಯ ಕಾರಣದಿಂದ ನರಕದ ಅಸಹ್ಯ ದುಃಖಗಳ ಮಧ್ಯದಲ್ಲಿ ಕೂಡ ಸಮ್ಯಕ್‌ದೃಷ್ಟಿಗೆ ಸುಖದ ವಿಪುಲತೆಯಿದೆ. ಅಹಹ ! ಎಲ್ಲಿ ಜ್ಞಾನಿ ಪಶು ಮತ್ತು ಎಲ್ಲಿ ನಾರಕಿ. ಎಲ್ಲಿ ಮಿಥ್ಯಾದೃಷ್ಟಿ ಶ್ರೇಷ್ಠಿ ! ಮಿಥ್ಯಾದೃಷ್ಟಿ ದೇವನು ಒಂಭತ್ತನೆಯ ಗ್ರೈವೇಯಕದಲ್ಲಿ ಕೂಡ ಆಕುಲತೆಯ ಅನುಭವ ಮಾಡುತ್ತಾನೆ. ಮತ್ತು ಯಾವನೋ ಓರ್ವರಾಜನು ಮರಣ ಹೊಂದಿ ಏಳನೆಯ ನರಕದಲ್ಲಿ ಹೋದರೆ ಅಲ್ಲಿ ಅಹಹ ! ನೀನು ಸ್ವಭಾವದ ಸಾಧನೆ ಮಾಡುವಲ್ಲಿ ಸ್ವತಂತ್ರನಿರುವೆಯೆಂದು ತನಗೆ ಸಂತರುಗಳು ಹೇಳಿದ ಮಾತುಗಳು ಸ್ಮರಣೆಯಲ್ಲಿ ಬಂದು ಬಿಟ್ಟರೆ ಮತ್ತು ಅದಕ್ಕೆ ಅನುಸರಿಸಿ ತನ್ನ ದೃಷ್ಟಿಯನ್ನು ಅಂತರ್ಯದಲ್ಲಿ ಹಾಕಿದರೆ ಆಗ ಅವನು ತನ್ನ ಅನುಭವದಲ್ಲಿ ಅತೀಂದ್ರಿಯ ಆನಂದವನ್ನು ಪಡೆಯಬಹುದಾಗಿದೆ. ಈ ಅತೀಂದ್ರಿಯ ಆನಂದದ ಕಾರಣವು ಸ್ವಭಾವದ ದೃಷ್ಟಿ ಮತ್ತು ಅನುಭವವಿದೆ. ಅಜ್ಞಾನಿಗಳಿಗೆ ಪುಣ್ಯದ ಅಭಿರುಚಿಯಿರುವುದರಿಂದ ಅವರು ಸ್ವರ್ಗದ ದೈವದತ್ತವಾದ ಸುಖಗಳ ಮಧ್ಯದಲ್ಲಿ ಕೂಡ ಕೇವಲ ಆಕುಲತೆಯ ಅನುಭವವನ್ನೇ ಮಾಡುತ್ತಾರೆ.

ಈಗ ಭಾವ ನಿರ್ಗ್ರಂಥವೇ ಮೋಕ್ಷ ಮಾರ್ಗವಿದೆಯೆಂದು ಹೇಳುತ್ತಾರೆ, -

ಜಇಯಾ ಮಣು ಣಿಗ್ಗಂಥು ಜಿಯ ತಇಯಾ ತುಹು ಣಿಗ್ಗಂಥು
ಜಇಯಾ ತುಹು ಣಿಗ್ಗಂಥು ಜಿಯ ತೋ ಲಬ್ಭಇ ಸಿವಪಂಥು ॥73॥

ತವ ಮನಸಿದ್ದರೆ ನಿರ್ಗ್ರಂಥ ನಿಜದಲಿ ನೀನಿಹೆ ನಿರ್ಗ್ರಂಥ
ಜೀವನೆ ನೀನಿರೆ ನಿರ್ಗ್ರಂಥ ಆಗಲೆ ಪಡೆಯುವೆ ಶಿವಪಂಥ ॥73॥

ಅರ್ಥ :- ಎಲೈ ಜೀವನೇ ! ಯಾವಾಗ ನಿನ್ನ ಮನಸ್ಸು ನಿರ್ಗ್ರಂಥವಾಗುವುದೋ ಆಗ ನೀನು ನಿಜವಾದ ನಿರ್ಗ್ರಂಥನಿರುವೆ. ಜೀವನೇ ! ನೀನು ನಿಜವಾದ ನಿರ್ಗ್ರಂಥನಿದ್ದರೆ ಆಗ ಮಾತ್ರ ನೀನು ಮೋಕ್ಷ ಮಾರ್ಗವನ್ನು ಪ್ರಾಪ್ತಮಾಡಿಕೊಂಡಿರುವೆ.

ಎಲೈ ಆತ್ಮನೇ ! ಒಂದು ವೇಳೆ ನಿನ್ನ ಮನಸ್ಸಿನಲ್ಲಿ ರಾಗದ ಏಕತೆಯು ಮುರಿದು ಹೋಗಿದ್ದರೆ, ಮಿಥ್ಯಾತ್ವದ ಗ್ರಂಥಿಯನ್ನು ತುಂಡರಿಸಿ ಹಾಕಿದ್ದರೆ ಮತ್ತು ಶುದ್ಧ ಆತ್ಮನ ದೃಷ್ಟಿಯಾಗಿದ್ದರೆ ನಿನ್ನ ಮನಸ್ಸು ನಿರ್ಗ್ರಂಥವಿದೆ. ಎಂದರೆ ರಾಗದ ಏಕತೆಯನ್ನು ಮುರಿದು ಹಾಕಿ ಆತ್ಮನ ಸಂಪತ್ತಿನಲ್ಲಿ ಏಕತ್ವ ಸಾಧಿಸಿದ್ದರೆ ಅವನ ಮನಸ್ಸು ವಾಸ್ತವದಲ್ಲಿ ನಿರ್ಗ್ರಂಥವಿದೆ. ಮತ್ತು ಅವನು ಮೋಕ್ಷಮಾರ್ಗವನ್ನು ಪ್ರಾಪ್ತ ಮಾಡಿಕೊಂಡಿದ್ದಾನೆ. ಎಲೈ ಜೀವನೇ ! ನೀನು ಭಾವನಿರ್ಗ್ರಂಥಾವಸ್ಥೆಯನ್ನು ಒಂದು ವೇಳೆ ಪ್ರಾಪ್ತ ಮಾಡಿಕೊಂಡಿದ್ದರೆ ನೀನು ಮೋಕ್ಷಮಾರ್ಗಿಯಾಗಿರುವೆಯೆಂದು ತಿಳಿದುಕೊಳ್ಳು. ಆಗ ಬಾಹ್ಯದಲ್ಲಂತೂ ದ್ರವ್ಯಲಿಂಗವು ಬಂದೇ ಬರುವುದು. ಆದರೆ ಭಾವನಿರ್ಗ್ರಂಥತೆಯಿಲ್ಲದಿದ್ದರೆ ಅದು ನಿಜವಾದ ಮೋಕ್ಷ ಮಾರ್ಗವಲ್ಲವೆಂದು ಇಲ್ಲಿ ತಿಳಿಸಿಕೊಡಲಾಗಿದೆ.

ಶ್ರದ್ಧೆಯ ಅಪೇಕ್ಷೆಯಿಂದ ಸಮ್ಯಕ್‌ದೃಷ್ಟಿಯು ಕೂಡ ಭಾವನಿರ್ಗ್ರಂಥನಿದ್ದಾನೆ. ತನ್ನ ಶುದ್ಧ ಸ್ವಭಾವದ ಪ್ರೀತಿ, ದೃಷ್ಟಿ ಮತ್ತು ಅನುಭವ ಮಾಡುವಂಥ ಸಮ್ಯಕ್‌ದೃಷ್ಟಿಗೆ ರಾಗದ ಕುರಿತು ಪ್ರೀತಿಯಿಲ್ಲದಿರುವುದರಿಂದ ಅವನು ನಿಜವಾಗಿ ಭಾವನಿರ್ಗ್ರಂಥನಿದ್ದಾನೆ. ಎಲ್ಲಿಯವರೆಗೆ ವಸ್ತ್ರದ ಗ್ರಹಣವಿದೆ ಅಲ್ಲಿಯವರೆಗೆ ಪೂರ್ಣ ಪರಿಗ್ರಹದ ತ್ಯಾಗವಿಲ್ಲ,

ಮೊದಲಂತೂ ಅಂತರಂಗದಲ್ಲಿ ಮನಸ್ಸನ್ನು ಗ್ರಂಥಿರಹಿತವನ್ನಾಗಿ ಮಾಡಬೇಕಾಗುವುದು. ಮನಸ್ಸಿನಲ್ಲಿ ದಯೆ-ದಾನದ ವಿಕಲ್ಪಗಳು ಉತ್ಪನ್ನವಾಗುತ್ತಿರುವುದು ಅದು ಕೂಡ ರಾಗದ ಗ್ರಂಥಿಯಿದೆ. ಆ ಗ್ರಂಥಿಯನ್ನು ಭೇದ ಮಾಡಿ ಮೊದಲು ಮನಸ್ಸನ್ನು ನಿರ್ಗ್ರಂಥ ಮಾಡುವುದೇ ನಿಜವಾಗಿ ಮೋಕ್ಷಮಾರ್ಗವಿದೆ. ಆತ್ಮ ವಸ್ತುವು ಸ್ವಯಂ ನಿರ್ಗ್ರಂಥವಿದೆಯೆಂದ ಮೇಲೆ ಅದರ ದೃಷ್ಟಿ ಮಾಡುವಂಥವನು ಕೂಡ ಭಾವದಿಂದ ನಿರ್ಗ್ರಂಥನಿದ್ದಾನೆ. ಆದರೆ ಬಾಹ್ಯದಲ್ಲಿ ಕೇವಲ ದ್ರವ್ಯದಿಂದ ನಿರ್ಗ್ರಂಥನಿರುವವನದು ಒಂದು ಭವವು ಕೂಡ ಕಡಿಮೆಯಾಗುವುದಿಲ್ಲ, ಭವದ ಅಭಾವ ಮಾಡುವ ಸಲುವಾಗಿ ಭಾವನಿರ್ಗ್ರಂಥತೆಯ ಅವಶ್ಯಕತೆಯಿದೆ.

ಭಾವ ನಿರ್ಗ್ರಂಥನಿರುವ ಜೀವನಿಗೆ ಅಂತರಂಗದ ಪರಿಗ್ರಹವಿರುವುದಿಲ್ಲ, ಮನಸ್ಸಿನಲ್ಲಿ ಉತ್ಪನ್ನವಾಗುವಂಥ ಸಮಸ್ತ ರಾಗ-ದ್ವೇಷಗಳ ರೂಪದ ಮಲಿನ ಭಾವಗಳನ್ನು ದೂರ ಮಾಡಿರುತ್ತಾನೆ. ಸಮಸ್ತ ಜೀವ ಕೋಟಿಯ ಮೇಲೆ ಸಮತಾಭಾವ ಹಾಗೂ ಕರುಣಾಭಾವವಿರುತ್ತದೆ. ಅವನು ಪರಮ ಸಂತೋಷಿಯಿರುತ್ತಾನೆ ಮತ್ತು ಭಾವನಿರ್ಗ್ರಂಥವಿರುವ ಜ್ಞಾನೀ ಸಮ್ಯಕ್‌ದೃಷ್ಟಿ ಜೀವನಿಗೆ ಆತ್ಮರಸದ ಪಿಪಾಸೆಯು. ಅತಿಶಯವಿರುತ್ತದೆ. ಇಂಥ ಲಕ್ಷಣಗಳಿಂದ ಯಾವನು ಯುಕ್ತನಿದ್ದಾನೆ ಅವನೇ ಭಾವನಿರ್ಗ್ರಂಥನಿದ್ದಾನೆ. ಇದಕ್ಕೆ ವಿಪರೀತವಾಗಿ ಯಾವನಾದರು ಜೀವನು ಸಮಸ್ತ ಬಾಹ್ಯ ಪರಿಗ್ರಹಗಳನ್ನು ಎಂದರೆ ಪತ್ನೀ, ಪುತ್ರ, ಪರಿವಾರ, ಮನೆ-ಮಠ, ಧನ-ಸಂಪತ್ತು ಮೊದಲಾದವುಗಳ ತ್ಯಾಗ ಮಾಡಿ ಕಾನನದಲ್ಲಿ ವಾಸ ಮಾಡುತ್ತಿದ್ದರು ಕೂಡ ಅವನು ಅಂತರಂಗದ ಪರಿಗ್ರಹಗಳಾದ ಮಿಥ್ಯಾತ್ವ ಕಷಾಯ ಮೊದಲಾದವುಗಳ ತ್ಯಾಗ ಮಾಡಿದಲ್ಲದೆ ನಿರ್ಗ್ರಂಥನೆನಿಸುವುದಿಲ್ಲ, ಆ ಜೀವನು ಮೋಕ್ಷಮಾರ್ಗಿಯು ಕೂಡ ಇಲ್ಲ, ಆದರೆ ಅವನು ಸಂಸಾರ ಮಾರ್ಗಿಯಿದ್ದಾನೆ.

ಯಾವ ಪ್ರಕಾರ ಅಕ್ಕಿಯ ಮೇಲಿರುವ ಸಿಪ್ಪೆಯನ್ನು - ಹೊಟ್ಟನ್ನು ತೆಗೆದು ಹಾಕಿದರೂ ಕೂಡ ಅದರ ಅಂತರ್ಯದ ಹೊಂಬಣ್ಣವನ್ನು ತೆಗೆದುಹಾಕದಿದ್ದರೆ ಅಕ್ಕಿಯ ನಿಜವಾದ ಸ್ವಾದವು ಬರುವುದಿಲ್ಲ, ಅದೇ ಪ್ರಕಾರ ಯಾವನಾದರೂ ಜೀವನು ಬಾಹ್ಯ ಸಂಯೋಗಗಳನ್ನಂತೂ ತ್ಯಾಗ ಮಾಡಿ ಬಿಡುವನು, ಆದರೆ ಅಂತರ್ಯದಲ್ಲಿ ಶುದ್ಧಾತ್ಮನ ದೃಷ್ಟಿ ಹಾಗೂ ಅನುಭವ ಮಾಡಿಕೊಳ್ಳದಿದ್ದರೆ, ಸಮದರ್ಶಿ ಎಂದರೆ ಸಮತಾಭಾವವನ್ನು ಪ್ರಾಪ್ತ ಮಾಡಿಕೊಳ್ಳದಿದ್ದರೆ, ಆತ್ಮಾನಂದದ ಪಿಪಾಸೆಯುಳ್ಳವನಾಗದಿದ್ದರೆ ಮತ್ತು ಮೋಹ-ರಾಗ-ದ್ವೇಷಗಳ ರೂಪದ ಅಂತರಂಗ ಪರಿಗ್ರಹವನ್ನು ಧಾರಣ ಮಾಡಿಕೊಂಡೇ ಇದ್ದರೆ ಅವನಿಗೆ ಮೋಕ್ಷ ಲಾಭದ ಪ್ರಾಪ್ತಿಯಾಗುವುದಿಲ್ಲ, ಮತ್ತು ಅವನು ನಿಜವಾದ ನಿರ್ಗ್ರಂಥನಿಲ್ಲ, ಆದರೆ ಕೇವಲ ದ್ರವ್ಯದಿಂದ ನಿರ್ಗ್ರಂಥನಿದ್ದಾನೆ.

ಸನಾತನ ವೀತರಾಗ ಧರ್ಮವನ್ನು ಸ್ಪಷ್ಟವಾಗಿ ತಿಳಿಸಿಕೊಟ್ಟು ಸುಲಭ ಮಾಡಿ ಕೊಟ್ಟಿದ್ದಾರೆ. ಆತ್ಮ ತತ್ತ್ವದ ದೃಷ್ಟಿ ಜ್ಞಾನ ಮತ್ತು ಅನುಭವರೂಪದ ರತ್ನತ್ರಯವೇ ಮೋಕ್ಷಮಾರ್ಗವಿದೆ. ಜ್ಞಾನಿಗಳು ಆ ಮಾರ್ಗದ ಮೇಲೆ ಗಮನ ಮಾಡಿ ಮೋಕ್ಷ ಮಂದಿರದಲ್ಲಿ ತಲುಪಿ ಬಿಡುತ್ತಾರೆ.

ಈ ದೇಹದಲ್ಲಿಯೇ ಭಗವಂತನಿರುತ್ತಾನೆಂದು ಈಗ ಹೇಳುತ್ತಾರೆ, -

ಜಂ ವಡಮಜ್ಝಹ ಬೀಉ ಫುಡು ಬೀಯಹ ವಡು ವಿ ಹು ಜಾಣು
ತಂ ದೇಹಹ ದೇಉ ವಿ ಮುಣಹಿ ಜೋ ತಇಲೋಯ-ಪಹಾಣು ॥74॥

ವಟದಲಿ ಬೀಜವು ಇರುವಂತೆ ಬೀಜದಿ ವಟವಿದೆಯೆಂದರಿ ನೀ
ದಿಟದಿಂ ದೇಹದಿ ದೇವನಿಹ ತಾಂ ಮೂಲೋಕದಿ ಮುಖ್ಯನಿಹ ॥74॥

ಅರ್ಥ :- ಯಾವ ಪ್ರಕಾರ ವಟದ ವೃಕ್ಷದಲ್ಲಿ ಅದರ ಬೀಜವು ಸ್ಪಷ್ಟರೂಪದಿಂದ ವ್ಯಾಪಕವಿದೆ ಅದೇ ಪ್ರಕಾರ ಬೀಜದಲ್ಲಿ ವಟದ ವೃಕ್ಷವನ್ನು ಕೂಡ ತಿಳಿದುಕೊಳ್ಳು. ಹಾಗೆಯೇ ಈ ಶರೀರದಲ್ಲಿ ಆ ದೇವನನ್ನು ಕೂಡ ಅನುಭವ ಮಾಡು, ಅವನು ಮೂರು ಲೋಕದಲ್ಲಿ ಮುಖ್ಯನಿದ್ದಾನೆ.

ಯಾವ ಪ್ರಕಾರ ಬೀಜದಲ್ಲಿ ವಟ ವೃಕ್ಷವು ಪ್ರಕಟವಿದೆ ಮತ್ತು ವಟ ವೃಕ್ಷದಲ್ಲಿ ಬೀಜವು ಸ್ವಷ್ಟರೂಪದಿಂದ ವ್ಯಾಪ್ತವಿದೆ. ಅದೇ ಪ್ರಕಾರ ಈ ಶರೀರರೂಪದ ವಟದಲ್ಲಿ ಭಗವಾನ ಆತ್ಮನು ವಿರಾಜಮಾನನಿದ್ದಾನೆ. ಮತ್ತು ಆತ್ಮ ಬೀಜದಲ್ಲಿ ಪರಮಾತ್ಮಶಕ್ತಿಯ ವಟವು ಪ್ರಕಟವಿದೆ. ನಿನ್ನ ಶಕ್ತಿಯಲ್ಲಿ ಪರಮಾತ್ಮತನವು ಇದ್ದಾಗಲೇ ಅದು ಪರ್ಯಾಯದಲ್ಲಿ ಪ್ರಕಟವಾಗುತ್ತದೆಯಲ್ಲವೇ ! ಮೂರು ಲೋಕಗಳಲ್ಲಿ ನಿನ್ನ ಆತ್ಮನೇ ಪ್ರಮುಖ ದೇವನಿದ್ದಾನೆ. ಭಗವಾನ ಅರಹಂತರು ಮತ್ತು ಸಿದ್ಧ ಪ್ರಭುಗಳು ಕೂಡ ನಿನ್ನ ಸಲುವಾಗಿ ಪ್ರಮುಖ ದೇವರಿಲ್ಲ. ನಿನ್ನ ಪರಮಾತ್ಮ ಪದವೇ ನಿನ್ನ ಸಲುವಾಗಿ ಪ್ರಧಾನವಿದೆ. ಹೇಗೆ ಪರಮಾತ್ಮನು ಪರ್ಯಾಯದಲ್ಲಿ ಕೂಡ ಪೂರ್ಣನಿದ್ದಾನೆ, ಅದೇ ಪ್ರಕಾರ ಪ್ರತಿಯೊಂದು ಜೀವವು ಶಕ್ತಿಯ ಅಪೇಕ್ಷೆಯಿಂದ ಪೂರ್ಣವಿದೆಯೆಂದು ತಿಳಿದುಕೊಂಡು ಎಲ್ಲಿಯವರೆಗೆ ತನ್ನ ಶಕ್ತಿಯ ವಿಶ್ವಾಸ ಮಾಡುವುದಿಲ್ಲ ಅಲ್ಲಿಯವರೆಗೆ ದೃಷ್ಟಿಯು ಸಮ್ಯಕ್ ಆಗುವುದಿಲ್ಲ ಎಂದರೆ ಸಮ್ಯಗ್ದರ್ಶನವಾಗುವುದಿಲ್ಲ. ಮತ್ತು ಸಮ್ಯಗ್ದರ್ಶನವಾದಲ್ಲದೆ ಜೀವದ ಕಲ್ಯಾಣವಾಗುವುದಿಲ್ಲ.

ಮದುವೆಯ ಸಮಯದಲ್ಲಿ ವರನು ಕೇವಲ ಒಂದು ದಿವಸದ ಸಲುವಾಗಿಯೇ ಮುಖ್ಯನಿರುತ್ತಾನೆ, ಆದರೆ ಎಲೈ ಜೀವನೇ ! ನೀನು ಮೂರು ಕಾಲ ಮತ್ತು ಮೂರು ಲೋಕಗಳಲ್ಲಿ ಮುಖ್ಯನಿರುವೆ. ನೀನು ನಿನ್ನ ಶಕ್ತಿಯಿಂದ ಯಾವಾಗಲೂ ಮೂರು ಲೋಕದಲ್ಲಿ ಮುಖ್ಯನಿರುವೆ.

ಯಾವ ಪ್ರಕಾರ ಬೀಜವು ವಟದಲ್ಲಿ ವ್ಯಾಪಕವಿದೆ ಅದೇ ಪ್ರಕಾರ ಭಗವಾನ ಆತ್ಮನು ಅನಂತ ಜ್ಞಾನ-ದರ್ಶನದಲ್ಲಿ ವ್ಯಾಪಕನಿದ್ದಾನೆ. ಆತ್ಮನು ದೇಹದ ಆಕಾರ ರೂಪದಿಂದ ದೇಹದಲ್ಲಿ ವಾಸಮಾಡಿಕೊಂಡಿದ್ದರು ಕೂಡ ದೇಹದಿಂದ ಅತ್ಯಂತ ಭಿನ್ನನಿದ್ದು ತನ್ನ ಗುಣ-ಪರ್ಯಾಯಗಳಲ್ಲಿ ವ್ಯಾಪಕನಿದ್ದಾನೆ. ಇಡೀ ವಟದ ವಿಶಾಲವಾದ ವೃಕ್ಷದಲ್ಲಿ ಮೂಲ ಬೀಜವು ಸರ್ವತ್ರ ವ್ಯಾಪಿಸಿಕೊಂಡಿದೆ. ಅದೇ ಪ್ರಕಾರ ಭಗವಾನ ಆತ್ಮನು ತನ್ನಲ್ಲಿ ಸರ್ವತ್ರ ವ್ಯಾಪಿಸಿಕೊಂಡಿದಾನೆ. ಕೇವಲಜ್ಞಾನ ಮೊದಲಾದ ಅನಂತ ಪರ್ಯಾಯಗಳ ಬೀಜನಂತೂ ಆತ್ಮನೇ ಇದ್ದಾನೆ. ಆದುದರಿಂದ ನೀನು ಸ್ವಯಂ ನಿನ್ನ ದೇವನಿರುವೆ.

ನನಗೆ ಆರಾಧನೆ ಯೋಗ್ಯ, ಸೇವನೆ ಯೋಗ್ಯನಂತೂ ನನ್ನ ಆತ್ಮನೇ ಇದ್ದಾನೆಂದು ಮೋಕ್ಷಾರ್ಥಿಗಳು ಮೊದಲು ವಿಚಾರ ಮಾಡಬೇಕಾಗುವುದು. ಅನಂತ ಆನಂದ ಅನಂತಗುಣಗಳಿಂದ ವಿರಾಜಮಾನನಿರುವಂಥವನೇ ನನ್ನ ಸಲುವಾಗಿ ಧ್ಯಾನಯೋಗ್ಯನಿದ್ದಾನೆ, ಆರಾಧನೆಯೋಗ್ಯನಿದ್ದಾನೆ.

ಬೀಜದಲ್ಲಿ ವಟವಿರುವಂತೆ ಈ ಆತ್ಮ ಸ್ವಭಾವದಲ್ಲಿ ಪೂರ್ಣ ಪರಮಾತ್ಮ ಸ್ವರೂಪವು ಶಕ್ತಿರೂಪದಿಂದ ತುಂಬಿಕೊಂಡಿದೆ. ಯಾವ ಪ್ರಕಾರ ಕಪ್ಪು ಮೆಣಸಿನಕಾಳು ಆಕಾರದಲ್ಲಿ ಅತ್ಯಂತ ಚಿಕ್ಕದು, ವರ್ಣದಲ್ಲಿ ಕರಿದು ಇದ್ದರೂ ಕೂಡ ಅದರಲ್ಲಿ ಅರವತ್ತಾನ್ಲುಕ್ಕು ಪ್ರಹರ ಎಂದರೆ ಪರಿಪೂರ್ಣ ಖಾರತನವು ತುಂಬಿಕೊಂಡಿದೆ ಅದನ್ನು ಪುಡಿ ಮಾಡುವುದರಿಂದ-ಬೀಸುವುದರಿಂದ ಅದು ವ್ಯಕ್ತವಾಗುತ್ತದೆ. ಅಂತರ್ಯದಲ್ಲಿ ಖಾರತನವು ಇರುವುದರಿಂದಲೇ ಅದು ಬಾಹ್ಯದಲ್ಲಿ ಬಂದಿದೆ. ಆದುದರಿಂದ ಪ್ರಾಪ್ತವಿರುವುದರದೇ ಪ್ರಾಪ್ತಿಯಿದೆ. ಅದೇ ಪ್ರಕಾರ ಪ್ರತಿಯೊಬ್ಬ ಆತ್ಮನಲ್ಲಿ ಜ್ಞಾನ - ಆನಂದವು ವ್ಯಾಪಿಸಿಕೊಂಡಿದೆ, ಆದರೆ ಈ ಜೀವನಿಗೆ ಜಗತ್ತಿನ ಪದಾರ್ಥಗಳ ಮಹಿಮೆಯು ಬರುತ್ತದೆ, ಆದರೆ ತನ್ನ ಸ್ವಭಾವದ ಮಹಿಮೆಯು ಬರುವುದಿಲ್ಲ. ಆದ್ದರಿಂದಲೇ ತನ್ನ ಕಾರ್ಯವಾಗುತ್ತಿಲ್ಲ.

ಸುಣ್ಣದ ಹರಳು ಬಿತ್ತಿ ಅದಕ್ಕೆ ಕೇವಲ ನೀರು ಹನಿಸುವುದೇಕೆ ಆದರೆ ಹಾಲು ಅಥವಾ ತುಪ್ಪದ ವೃಷ್ಟಿಮಾಡಿದರೂ ಕೂಡ ಅದರಿಂದ ವಟವೃಕ್ಷವಾಗುವುದಿಲ್ಲ, ಏಕೆಂದರೆ ಆ ಸುಣ್ಣದ ಹರಳಿನಲ್ಲಿ ವಟವಾಗುವ ಸಾಮರ್ಥ್ಯವೇ ಇಲ್ಲ. ಅಯ್ಯಾ! ನಿಂಬೆ ಮೊದಲಾದುವಲ್ಲಿ ಕೂಡ ವಟವೃಕ್ಷವಾಗುವ ಸಾಮರ್ಥ್ಯವಿಲ್ಲ. . ವಟದ ಬೀಜದಲ್ಲಿಯೇ ವಟವೃಕ್ಷವಾಗುವ ಸಾಮರ್ಥ್ಯವು ತುಂಬಿಕೊಂಡಿದೆ. ಇದೆಲ್ಲವನ್ನು ತರ್ಕದಿಂದ - ನ್ಯಾಯದಿಂದ ತಿಳಿದುಕೊಳ್ಳಬೇಕಾಗುವುದು.

ಬಾವಿಯೊಳಗೆ ನೀರು ಇದ್ದರೆ ಕೊಡದಲ್ಲಿ ಬರುವುದು, ಅದೇ ಪ್ರಕಾರ ಪ್ರಾಪ್ತವಿರುವುದರ ಪ್ರಾಪ್ತಿಯಾಗುತ್ತದೆ. ಪ್ರತಿಯೊಬ್ಬ ಆತ್ಮನಲ್ಲಿ ಅತೀಂದ್ರಿಯ ಜ್ಞಾನ, ಆನಂದ ಮೊದಲಾದವುಗಳ ಸಾಮರ್ಥ್ಯವು ತುಂಬಿದೆ-ಪ್ರಾಪ್ತವಿದೆ, ಅದರೊಳಗಿಂದ ಪರ್ಯಾಯದಲ್ಲಿ ಅದರಪ್ರಾಪ್ತಿಯಾದರೆ ಪರಮಾತ್ಮನಾಗುವನು.

ಚಂಬುವಿನಲ್ಲಿ ನೀರು ತುಂಬಿಕೊಂಡಿದ್ದರೂ ಕೂಡ ಆ ನೀರು ಚಂಬುವಿನಿಂದ ಅತ್ಯಂತ ಭಿನ್ನವಿದೆ. ಅದೇ ಪ್ರಕಾರ ಚಿದಾನಂದ ಸ್ವರೂಪನಾದ ಭಗವಾನ ಆತ್ಮನು ಶರೀರದ ಆಕಾರರೂಪದಿಂದ ಶರೀರದ ಒಳಗೆ ಇರುತ್ತಿದ್ದರೂ ಕೂಡ ಅವನು ಶರೀರದಿಂದ ಅತ್ಯಂತ ಭಿನ್ನನಿದ್ದಾನೆ.

ಈ ಆತ್ಮನಲ್ಲಿ ಅನಂತ ಜ್ಞಾನ,ಅನಂತ ಆನಂದ ಮೊದಲಾದ ಅನಂತ ಶಕ್ತಿಗಳು ತುಂಬಿಕೊಂಡಿವೆ. ಅವನ ಸ್ವಭಾವವೇ ತಿಳಿದುಕೊಳ್ಳುವುದಿದೆ, ಅವನು ಯಾರನ್ನು - ಯಾವುದನ್ನು ತಿಳಿದುಕೊಳ್ಳುವುದಿಲ್ಲ ? ಸ್ವಭಾವದಲ್ಲಿ ಮರ್ಯಾದೆಯೆಲ್ಲಿದೆ? ಅವನು ಎಲ್ಲವನ್ನು ತಿಳಿಯುವನು. ಸ್ವಭಾವದಲ್ಲಿ ಮರ್ಯಾದೆಯಿರುವುದಿಲ್ಲ.

ಯಾರು ಪರಮಾತ್ಮರಾಗಿ ಹೋಗಿದ್ದಾರೆ ಅವರು ಸ್ವಯಂ ತಮ್ಮ ಸ್ವತಂತ್ರ ಶಕ್ತಿಯಿಂದ ಪರಮಾತ್ಮರಾಗಿದ್ದಾರೆ. ಮತ್ತು ಯಾರು ಆಗುವವರಿದ್ದಾರೆ ಅವರು ಕೂಡ ತಮ್ಮ ಸ್ವತಂತ್ರ ಶಕ್ತಿಯಿಂದಲೇ ಆಗುವರು. ಏಕೆಂದರೆ ಪ್ರತಿಯೊಬ್ಬ ಆತ್ಮನ ಶಕ್ತಿಯು ಸ್ವತಂತ್ರವಿದೆ. ಯಾವ ಪ್ರಕಾರ ಒಂದು ಮೂಟೆಯಲ್ಲಿ ಲಕ್ಷಾಂತರ ಕೋಟ್ಯಂತರ ಕಪ್ಪು ಮೆಣಸಿನಕಾಳು ತುಂಬಿಕೊಂಡಿದ್ದರೂ ಅವುಗಳಲ್ಲಿ ಪ್ರತಿಯೊಂದು ಮೆಣಸಿನಕಾಳಿನಲ್ಲಿ ಪರಿಪೂರ್ಣ ಶಕ್ತಿಯು ತುಂಬಿದೆ. ಅದೇ ಪ್ರಕಾರ ಅನಂತ ಆತ್ಮರುಗಳು ತಮ್ಮ-ತಮ್ಮ ಸ್ವತಂತ್ರ ಶಕ್ತಿಯಿಂದ ವಿರಾಜಮಾನರಿದ್ದಾರೆ.

ಇಂಥ ಆತ್ಮನನ್ನು ಎಲೈ ಜೀವನೇ ! ನೀನು ಶರೀರದಿಂದ ನೋಡಬೇಡ ! ಕರ್ಮದಿಂದ ನೋಡಬೇಡ ! ಮತ್ತು ಪರ್ಯಾಯದ ಭೇದದಿಂದ ಕೂಡ ನೋಡಬೇಡ ! ಆದರೆ ಏಕರೂಪವಾದ ಸ್ವಭಾವದಿಂದ ನೋಡು ! ಸ್ವಭಾವದ ಮೇಲೆ ದೃಷ್ಟಿ ಮಾಡುವುದರಿಂದಲೇ ಶ್ರದ್ಧೆ-ಜ್ಞಾನದಲ್ಲಿ ಸಮಸ್ತ ಶಕ್ತಿಗಳ ಕಾಂತಿಯು ಪ್ರಕಟವಾಗುತ್ತದೆ, ಅನುಭವದಲ್ಲಿ ಬರುತ್ತದೆ. ವರ್ತಮಾನ ಪರ್ಯಾಯದಲ್ಲಿ ಕಂಡು ಬರುತ್ತಿರುವ ರಾಗವು ಅದು ಸ್ವಭಾವವಲ್ಲ, ಆದರೆ ಅದರ ನಾಶವಾಗುವುದರಿಂದ ಸ್ವಭಾವವು ಪ್ರಕಟವಾಗುತ್ತದೆ. ಅಲ್ಪ ಜ್ಞತೆಯು ದೂರವಾಗುವುದರಿಂದ ಸರ್ವಜ್ಞತೆಯು ಪ್ರಕಟವಾಗುವುದು. ರಾಗದೊಳಗಿಂದ ಅಥವಾ ಅಲ್ಪ ಜ್ಞತೆಯೊಳಗಿಂದ ಪೂರ್ಣತೆಯು ಬರುವುದಿಲ್ಲ, ಪೂರ್ಣತೆಯು ಸ್ವಭಾವದೊಳಗಿಂದ ಪ್ರಕಟವಾಗುತ್ತದೆ.

ಯಾವ ಪ್ರಕಾರ ಹಿಪ್ಪಲಿಯನ್ನು ಅದರ ಶಕ್ತಿಯ ಸತ್ವದಿಂದ ನೋಡಿದ ಮೇಲೆ ಅದರಲ್ಲಿ ಅಲ್ಪ ಕಾರತನವಾಗಲಿ ಅಥವಾ ಕಪ್ಪುತನವಾಗಲಿ ಇಲ್ಲ, ಅದಂತೂ ಪೂರ್ಣಕಾರತನ ಮತ್ತು ಹಸಿರು ವರ್ಣದಿಂದ ತುಂಬಿಕೊಂಡ ತತ್ತ್ವವಿದೆ. ಅದೇ ಪ್ರಕಾರ ಭಗವಾನ ಆತ್ಮನನ್ನು ಸ್ವಭಾವದಿಂದ ನೋಡಿದ ಮೇಲೆ ಕರ್ಮದ ಸಂಗತಿಯಿಂದ ಉತ್ಪನ್ನವಾದ ವಿಕಾರ ಮತ್ತು ಕರ್ಮದ ಉದಯದಿಂದ ಆದ ಹೀನಾಧಿಕತೆಗಳು ಅವನ ಸ್ವಭಾವದಲ್ಲಿ ಇಲ್ಲ, ಸಿದ್ಧಾಂತವನ್ನು ತಿಳಿಸಿಕೊಡುವ ಸಲುವಾಗಿ ದೃಷ್ಟಾಂತಗಳನ್ನು ಕೊಡಲಾಗುತ್ತದೆ; ಅವುಗಳಿಂದ ಸಿದ್ಧಾಂತವನ್ನು ತಿಳಿದುಕೊಳ್ಳಬೇಕಾಗುವುದು.

ಜಗತ್ತಿನ ಜೀವರುಗಳು ಅಪ್ರಯೋಜನಭೂತವಾದವುಗಳನ್ನು ಬಹಳಷ್ಟು ಓದಿದ್ದಾರೆ, ಆದರೆ ಸತ್ಯತತ್ತ್ವವನ್ನು ಓದಲಿಲ್ಲ-ತಿಳಿದುಕೊಳ್ಳಲಿಲ್ಲ. ಶಾಸ್ತ್ರಗಳನ್ನು ಓದಿ ಅವುಗಳ ಸಾರ ತಿಳಿದುಕೊಂಡರೆ ಶಾಸ್ತ್ರ ಓದುವುದರ ಪ್ರಯೋಜನವಿದೆ. ತನ್ನ ಸ್ವರೂಪವು ಹೇಗೆ ಇದೆಯೆಂಬುದರ ವಿಷಯವಾಗಿ ಜೀವನು ಎಂದೂ ವಿಚಾರವನ್ನೇ ಮಾಡಲಿಲ್ಲ. ಈ ಮಾತನ್ನು ಹೇಳುವವರೂ ಇಂದು ವಿರಳರಾಗಿದ್ದಾರೆ.

ಪೂರ್ಣ ಜ್ಞಾನ, ಪೂರ್ಣ ಆನಂದ, ಪೂರ್ಣ ಸ್ವಚ್ಛತೆ, ಪ್ರಭುತೆ, ಶಾಂತಿ ಮೊದಲಾದ ಪೂರ್ಣ ಸ್ವಭಾವದ ದೃಷ್ಟಿ ಮಾಡುವುದರಿಂದ ವರ್ತಮಾನದಲ್ಲಿ ಯಾವ ನವೀನ ಪರ್ಯಾಯವು ಪ್ರಕಟವಾಗುವುದು ಅದರ ಅಪೇಕ್ಷೆಯು

ಕೂಡ ತ್ರಿಕಾಲೀ ದ್ರವ್ಯದ ದೃಷ್ಟಿಯಲ್ಲಿ ಇರುವುದಿಲ್ಲ, ಅನಾದಿ ಅನಂತ ಸತ್ .... ಸತ್ .... ಸತ್ .... ಇದೆ ..... ಇದೆ.... ಇದೆ, ಅದರ ಆದಿಯಿಲ್ಲ ಎಂದರೆ ಉತ್ಪತ್ತಿ ಇಲ್ಲ ಮತ್ತು ನಾಶವು ಕೂಡ ಇಲ್ಲದಂಥ ಆತ್ಮ ತತ್ತ್ವವಿದೆ. ಅದರ ಪ್ರತಿಯೊಂದು ಶಕ್ತಿಯು ಕೂಡ ತ್ರಿಕಾಲ ಸತ್ ಇದೆ. ತ್ರಿಕಾಲೀ ಸ್ವಭಾವದ ದೃಷ್ಟಿ ಮಾಡುವಂಥವರಿಗೆ ಶರೀರ, ವಿಕಾರ ಮತ್ತು ಅಪೂರ್ಣ ನಿರ್ಮಲ ಪರ್ಯಾಯವಂತೂ ದೂರವಿರಲಿ, ಆದರೆ ಪೂರ್ಣ ನಿರ್ಮಲ ಪರ್ಯಾಯದಷ್ಟು ಕೂಡ ಆತ್ಮನು ಕಂಡು ಬರುವುದಿಲ್ಲ, ಪೂರ್ಣ .... ಪೂರ್ಣ .... ನಿರ್ಮಲ ಏಕರೂಪವಾದ ವಸ್ತುವೇ ದೃಷ್ಟಿಯಲ್ಲಿ ಕಂಡು ಬಂದಾಗಲೇ ಪರ್ಯಾಯದಲ್ಲಿ ಸಮ್ಯಗ್ದರ್ಶನ - ಜ್ಞಾನ - ಚಾರಿತ್ರಗಳು ಪ್ರಕಟವಾಗುತ್ತವೆ. ಆದುದರಿಂದ ಅಂಥ ದೃಷ್ಟಿ ಮಾಡುವುದು ಅದು ಒಂದು ಮಾತ್ರ ಮುಕ್ತಿಯ ಉಪಾಯವಿದೆ, ಅದನ್ನು ಹೊರತುಪಡಿಸಿ ಬೇರೆ ಯಾವ ಉಪಾಯವೇ ಇಲ್ಲ.

ಕರ್ಮ ಮತ್ತು ಕರ್ಮದ ನಿಮಿತ್ತದಿಂದ ಆಗುವಂಥ ಯಾವ ಪರಿಣಾಮಗಳಿವೆ ಅವು ನಾನಲ್ಲ ; ನಾನಂತೂ ಪರಿಪೂರ್ಣ ಅಖಂಡಾನಂದ ಏಕರೂಪ ತತ್ತ್ವನಿದ್ದೇನೆಂದು ಯಾವಾಗ ದೃಷ್ಟಿಯು ತನ್ನ ಆತ್ಮನ ಸ್ವಭಾವವನ್ನು ಸ್ವೀಕಾರ ಮಾಡುತ್ತದೆ ಆಗ ಅಂತರ್ಯದೊಳಗಿಂದ ಶಾಂತಿ ಹಾಗೂ ಆನಂದವು ಪ್ರಕಟವಾಗುತ್ತದೆ. ಆದುದರಿಂದ ಯಾರಿಗೆ ಸುಖ,ಶಾಂತಿ ಮತ್ತು ಸ್ವತಂತ್ರತೆಯು ಬೇಕಾಗಿರುವುದೋ ಅವರು ಪೂರ್ಣಾನಂದನಾದ ಪ್ರಭುವಿನ ದೃಷ್ಟಿ ಮಾಡಬೇಕು, ಇದು ಒಂದೇ ಸುಖಿಯಾಗುವ ಉಪಾಯವಿದೆ.

ಚೈತನ್ಯ ಸ್ವಭಾವವು ಸ್ಫಟಿಕದ ಹಾಗೆ ಪೂರ್ಣನಿರ್ಮಲವಿದೆ. ಅದರಲ್ಲಿ ಪುಣ್ಯ -ಪಾಪದ ಕಪ್ಪು-ಕೆಂಪು ಪ್ರತಿಬಿಂಬದ ಪ್ರವೇಶವೇ ಇಲ್ಲ. ಈ ಪ್ರಕಾರದ ದೃಷ್ಟಿ ಮಾಡುವುದು ಅದುವೇ ಧರ್ಮದೃಷ್ಟಿಯಿದೆ. ಧರ್ಮದೃಷ್ಟಿಯುಳ್ಳ ಜೀವರುಗಳೇ ನಿಜವಾಗಿ ಸುಖಿಯಿದ್ದಾರೆ. ಅವರನ್ನು ಹೊರತುಪಡಿಸಿ ಯಾವ ಇಂದ್ರ, ನರೇಂದ್ರ, ರಾಜ, ಮಹಾರಾಜ, ಕೋಟ್ಯಾಧೀಶ ಶ್ರೇಷ್ಠಿ ಶ್ರೀಮಂತರುಗಳೆಲ್ಲರೂ ಭಿಕ್ಷುಕರಿದ್ದಾರೆ; ದುಃಖಿಗಳಿದ್ದಾರೆ.

ಸ್ವಭಾವ ದೃಷ್ಟಿಯಿಂದ ನೋಡಿದ ಮೇಲೆ ಪ್ರತಿಯೊಬ್ಬ ಆತ್ಮನು ಸಮಾನವಾಗಿಯೇ ಕಂಡು ಬರುತ್ತಾನೆ. ಆದುದರಿಂದ ಯಾರೂ ಶತ್ರು ಅಥವಾ ಮಿತ್ರರುಗಳಿಲ್ಲ, ಅದೇ ಕಾರಣದಿಂದ ಸ್ವಭಾವದ ದೃಷ್ಟಿಯುಳ್ಳವರಿಗೆ ಯಾರ ಮೇಲೆಯೂ ರಾಗ-ದ್ವೇಷಗಳಾಗುವುದಿಲ್ಲ, ಅವರು ಎಲ್ಲರನ್ನು ಭಗವಂತರನ್ನಾಗಿಯೇ ಕಾಣುತ್ತಾರೆ. ಅಜ್ಞಾನಿಯು ಕೂಡ ಯಾವಾಗ ತನ್ನ ಭಗವಂತತೆಯನ್ನು ಸಂರಕ್ಷಿಸುವನು ಸ್ವೀಕಾರ ಮಾಡುವನು, ಆಗ ಅವನು ಕೂಡ ಭಗವಂತನಾಗಿ ಹೋಗುವನು . ಪ್ರತಿಯೊಬ್ಬರಲ್ಲಿ ಪರಮಾತ್ಮತನದ ಶಕ್ತಿಯು ಪೂರ್ಣವಾಗಿ ತುಂಬಿಕೊಂಡು ನಿಂತಿದೆ. ಆದುದರಿಂದ ಪ್ರತಿಯೊಬ್ಬ ಮೋಕ್ಷಾರ್ಥಿಯು ತನ್ನ ಸಮತೆಯ ಸ್ವಭಾವದಲ್ಲಿ ಸ್ಥಿರವಿರುವುದು, ಲೀನವಿರುವುದು, ವಿಹರಿಸುವುದು, ಸಮಸ್ತ ನಯಗಳ ವಿಚಾರದಿಂದ ಕೂಡ ಮುಕ್ತರಾಗಿ ಆತ್ಮಾನಂದದಲ್ಲಿ ನಿಮಗ್ನರಾಗಿರಬೇಕು. ಮುಮುಕ್ಷುಗಳಿಗೆ ಇದುವೇ ಉಚಿತವಿದೆ.

'ನಾನು ಸ್ವಯಂ ಜಿನೇಂದ್ರನಿದ್ದೇನೆಂ'ಬ ಅನುಭವವೇ ಮೋಕ್ಷದ ಉಪಾಯವಿದೆಯೆಂದು ಈಗ ಹೇಳುತ್ತಾರೆ,-

ಜೋ ಜಿಣ ಸೋ ಹಉ ಸೋ ಜಿ ಹಉ ಏಹಉ ಭಾಉ ಣಿಭಂತು
ಮೋಕ್ಖಹಂ ಕಾರಣ ಜೋಇಯಾ ಅಣ್ಣು ಣ ತಂತು ಣ ಮಂತು ॥75॥

ನಾನಿಹೆ ಜಿನನು ಜಿನನೆ ನಾನಿಹೆ ಎಂದರಿ ನಿಸ್ಸಂದೇಹದಲಿ
ಮುನಿವರ ಇದುವೆ ಶಿವಕಾರಣವು ಮಂತ್ರತಂತ್ರಗಳು ಬೇರಿಲ್ಲ ॥ 75॥

ಅರ್ಥ:- ಆ ಜಿನೇಂದ್ರ ಪರಮಾತ್ಮನೇ ನಾನಿದ್ದೇನೆ ಮತ್ತು ನಾನೇ ಜಿನೇಂದ್ರ ಪರಮಾತ್ಮನಿದ್ದೇನೆಂದು ಸಂದೇಹರಹಿತನಾಗಿ ಭಾವನೆ ಮಾಡು ಎಲೈ ಯೋಗಿಯೇ ! ಇಂಥ ಭಾವನೆಯೇ ಮೋಕ್ಷದ ಉಪಾಯವಿದೆ. ಇದನ್ನು ಹೊರತುಪಡಿಸಿ ಬೇರೆ ಯಾವ ತಂತ್ರವೂ ಇಲ್ಲ ಮತ್ತು ಮಂತ್ರವೂ ಇಲ್ಲ.

ಆತ್ಮನ ಪೂರ್ಣ ವೀತರಾಗ ದಶೆಗೆ ಪ್ರಾಪ್ತನಾದ ಪರಮಾತ್ಮನಿರುವಂತೆಯೇ ನಾನು ಇದ್ದೇನೆ. ಏಕೆಂದರೆ ನಾನೇ ಪರಮಾತ್ಮನಾಗಲು ಯೋಗ್ಯನಿದ್ದೇನೆ. ಒಂದು ವೇಳೆ ನಿನಗೆ ಮುಕ್ತಿಯ ಪ್ರಯೋಜನವಿದ್ದರೆ ನಾನೇ ಪರಮಾತ್ಮ ನಿದ್ದೇನೆಂದು ಮೊದಲು ನಿಶ್ಚಯಮಾಡುವ ನಿರ್ಣಯ ಮಾಡೆಂದು ಶ್ರೀ ಯೋಗೀಂದು ದೇವರು ಹೇಳುತ್ತಾರೆ.

ಯಾರು ಆತ್ಮನೊಳಗಿನ ರಾಗ-ದ್ವೇಷಗಳನ್ನು ಹಾಗೂ ಅಲ್ಪಜ್ಞತೆಯನ್ನು ನಾಶ ಮಾಡಿ ವೀತರಾಗ-ಸರ್ವಜ್ಞತೆಯನ್ನು ಪ್ರಕಟ ಮಾಡಿಕೊಂಡಿದ್ದಾರೆ, ಅಂಥ ಪರಮಾತ್ಮನ ಸಮಾನವಾಗಿಯೇ ನಾನು ಇದ್ದೇನೆ. ನನ್ನ ಮತ್ತು ಪರಮಾತ್ಮರ ಜಾತಿಯಲ್ಲಿ ಯಾವುದೇ ಅಂತರವಿಲ್ಲ, ಸರ್ವಜ್ಞ ಭಗವಂತರು ಯಾವ ದಶೆಗೆ ಪ್ರಾಪ್ತರಾಗಿದ್ದಾರೆ ಅಂಥ ದಶೆಯನ್ನು ಧಾರಣ ಮಾಡುವಂಥ ಶಕ್ತಿ ಸಂಪನ್ನನಾದ ನಾನು ಸ್ವಯಂ ಜಿನೇಂದ್ರನೇ ಇದ್ದೇನೆ.

ಯಾವ ಪ್ರಕಾರ ಎಳ್ಳಿನೊಳಗಿಂದ ಹೊರಟಿರುವ ಎಣ್ಣೆಯು ಸ್ವಚ್ಛವಿದೆ, ಅಷ್ಟೇ ಸ್ವಚ್ಛವಾದ ಎಣ್ಣೆಯು ಎಳ್ಳಿನಲ್ಲಿ ತುಂಬಿಕೊಂಡಿದೆ. ಅದೇ ಪ್ರಕಾರ ಆತ್ಮನಲ್ಲಿ ವೀತರಾಗತೆಯು ತುಂಬಿಕೊಂಡಿದೆಯೆಂದು ಆತ್ಮನನ್ನು ದೃಷ್ಟಿಯಲ್ಲಿ ಸ್ವೀಕಾರ ಮಾಡುವುದೇ ಸುಖ ಪಡೆಯುವ ಎಂದರೆ ಪರಮಾತ್ಮನಾಗುವ ಸುಲಭ ಸರಳವಾದ ಉಪಾಯವಿದೆ. ಇಂಥ ಮಾತುಗಳು ಕೇಳಲು ದೊರಕುವುದು ಕೂಡ ತುಂಬ ದುರ್ಲಭವಿದೆ.

ಪ್ರತಿಯೊಬ್ಬ ಆತ್ಮನು ಸ್ವಭಾವದಿಂದ - ಶಕ್ತಿಯಿಂದ ಸಮಾನನಾಗಿದ್ದಾನೆ. ಯಾರು ಸ್ವಭಾವದ ಅವಲಂಬನೆ ಪಡೆದು ಪೂರ್ಣದಶೆಯನ್ನು ಪ್ರಕಟ ಮಾಡಿಕೊಂಡಿದ್ದಾರೆ ಅವರು ಪರಮಾತ್ಮರಾಗಿದ್ದಾರೆ. ನಾನು ಕೂಡ ಆ ದಶೆಯನ್ನು ಪ್ರಕಟ ಮಾಡಿಕೊಳ್ಳಲು ಯೋಗ್ಯನಿದ್ದೇನೆ. ಅದಕ್ಕಾಗಿ ನಾನು ಕೂಡ ಪರಮಾತ್ಮನಿದ್ದೇನೆ. ಜಿನೇಂದ್ರನಿದ್ದೇನೆ.

ಯಾವ ಪ್ರಕಾರ ಮಂಜುಗಡ್ಡೆಯ ಶೀತಲ ಶಿಲೆಯ ಯಾವುದೇ ಭಾಗದಲ್ಲಿ ಮೇಲೆ, ಕೆಳಗೆ, ಮಧ್ಯದೊಳಗೆ ಎಲ್ಲಿಯೂ ಉಷ್ಣತೆಯ ಅಂಶವೇ ಇರುವುದಿಲ್ಲ, ಅದೇ ಪ್ರಕಾರ ಅವಿಕಾರಿಯಾದ ಚೈತನ್ಯ ಪಿಂಡದಲ್ಲಿ ಎಲ್ಲಿಯೂ ಮೋಹ - ರಾಗ - ದ್ವೇಷಗಳು ಇರುವುದಿಲ್ಲ, ಹೀಗೆ ಆತ್ಮನು ಶಾಂತರಸದ ಶಿಲೆಯಿದಾನೆ. ಭಗವಾನ ಆತ್ಮನು ದೇಹದಿಂದ ರಹಿತ, ಶುಭಾಶುಭ ಭಾವಗಳಿಂದ ರಹಿತ ಅರೂಪಿ ಚಿದ್ಘನ ವೀತರಾಗ ಚೈತನ್ಯ ಶಿಲೆಯಿದ್ದಾನೆ.

ನಿನ್ನ ಹಾಗೂ ನನ್ನ ಜಾತಿಯಲ್ಲಿ ಸ್ವಲ್ಪವೂ ಅಂತರವಿಲ್ಲ, ಆದರೆ ನಾನು ಸ್ವರೂಪ ಪ್ರಕಟ ಮಾಡಿಕೊಂಡಿದ್ದೇನೆ. ನೀನು ಪ್ರಕಟ ಮಾಡಿಕೊಂಡಿಲ್ಲ, ಇಷ್ಟು ಮಾತ್ರ ಅಂತರವಿದೆಯೆಂದು ಭಗವಂತರು ಹೇಳುತ್ತಾರೆ. ಆದುದರಿಂದ ಪರಮಾತ್ಮನ ಸಮಾನವಾಗಿಯೇ ನಿನ್ನ ಆತ್ಮನಿದ್ದಾನೆ. ನಿರ್ಭ್ರಾಂತನಾಗಿ ನಿಶ್ಶಂಕತೆಯಿಂದ ಅವನ ಭಾವನೆ ಮಾಡು. ಶಕ್ತಿಯಿಂದ ಸಮಸ್ತ ಆತ್ಮರುಗಳು ಭಗವಂತರಿದ್ದಾರೆ. ನೀನು ನಿನ್ನ ಚೈತನ್ಯ ಸತ್ತಾವನ್ನು ಸ್ವೀಕಾರ ಮಾಡು ! ತಿಳಿಯುವುದು ..... ತಿಳಿಯುವುದು .... ತಿಳಿಯುವುದು.... ಇದು ತಿಳಿದುಕೊಳ್ಳುವ ಜ್ಞಾನ ಶಕ್ತಿಯ ಅಚಿಂತ್ಯತೆಯಿದೆ, ಅಮರ್ಯಾದತೆಯಿದೆ, ಅಳತೆ ರಹಿತತೆಯಿದೆ. ಅವನೇ ನಾನಿದ್ದೇನೆ, ಜ್ಞಾನದ ಜತೆಯಲ್ಲಿರುವ ಆನಂದವೇ ನಾನಿದ್ದೇನೆ. ಅತೀಂದ್ರಿಯ ಮತ್ತು ಪೂರ್ಣ ಆನಂದವೇ ನನ್ನ ಸ್ವರೂಪವಿದೆ. ಇಂಥ ಜ್ಞಾನಾನಂದ ಸ್ವರೂಪನಾದ ಆತ್ಮನ ದೃಷ್ಟಿ ಮಾಡುತ್ತಿದ್ದಂತೆಯೇ, ಸತ್ಯ ಸ್ವರೂಪವನ್ನು ಸ್ವೀಕಾರ ಮಾಡುತ್ತಿರುವಂತೆಯೇ ಪರ್ಯಾಯದಲ್ಲಿ ಸತ್ಯದಶೆಯು ಪ್ರಕಟವಾಗುವುದು ಅದುವೇ ಆತ್ಮನ ವಾಸ್ತವಿಕ ನಿಜಧರ್ಮವಿದೆ. ಮತ್ತು ರಾಗ - ದ್ವೇಷಗಳನ್ನು ಸ್ವೀಕಾರ ಮಾಡುವುದೇ ವಾಸ್ತವಿಕ ಅಧರ್ಮವಿದೆ, ಹಿಂಸೆಯಿದೆ. ಅದರಲ್ಲಿ ಆತ್ಮ ಸ್ವಭಾವದ ಅನಾದರವಾಗುತ್ತದೆ.

ಯಾವ ಪ್ರಕಾರ ಹಿಪ್ಪಲಿಯಲ್ಲಿ ಕಾರತನವನ್ನು ಮತ್ತು ಹಸಿರು ವರ್ಣವನ್ನು ಸ್ವೀಕಾರ ಮಾಡದಿರುವಲ್ಲಿ ಹಿಪ್ಪಲಿಯ ಸ್ವಭಾವದ ಘಾತವಾಗುತ್ತದೆ, ಏಕೆಂದರೆ ಅದರಲ್ಲಿ ಅಸ್ತಿಯ ನಾಸ್ತಿಯಾಗುತ್ತದೆ. ಅದೇ ಪ್ರಕಾರ ಸತ್ ಸ್ವರೂಪನಾದ ತನ್ನ ಭಗವಾನ ಆತ್ಮನನ್ನು ಅಸ್ವೀಕಾರ ಮಾಡುವಲ್ಲಿ ಅಸ್ತಿ ಸ್ವರೂಪದ ನಾಸ್ತಿಯಾಗುತ್ತದೆ, ಇದುವೇ ಹಿಂಸೆಯಿದೆ.

ಈ ಶಾಸ್ತ್ರದಲ್ಲಂತೂ ಕೇವಲ ತತ್ತ್ವಗಳ ಸಿದ್ಧಾಂತವೇ ತುಂಬಿಕೊಂಡಿದೆ. ಭ್ರಾಂತಿಯನ್ನು ಬಿಟ್ಟುಕೊಟ್ಟು ಯಾವ ಜಿನೇಂದ್ರರಿದ್ದಾರೆ ಅವನೇ ನಾನಿದ್ದೇನೆಂಬ ಭಾವನೆ ಭಾವಿಸು. ಅಲ್ಪಜ್ಞತೆ ಮತ್ತು ರಾಗ-ದ್ವೇಷಗಳ ಪರ್ಯಾಯಗಳಿದ್ದರೂ

ಕೂಡ ನಾನು ಪೂರ್ಣ ಅಖಂಡ ವೀತರಾಗನಿದ್ದೇನೆ, ಭಗವಂತನೇ ಇದ್ದೇನೆಂದು ನಿಭ್ರಾಂತ ಶ್ರದ್ಧೆ ಮಾಡುವುದರಲ್ಲಿ ಅತ್ಯಂತ ಉಗ್ರ ಪುರುಷಾರ್ಥ ಬೇಕಾಗುವುದು. ಇಂಥ ಉಗ್ರ ಪುರುಷಾರ್ಥದ ಮುಖಾಂತರವೇ ನಿರ್ಣಯವಾಗುವ ಸಾಧ್ಯತೆಯಿದೆ.

ಅಯ್ಯಾ ಸೋದರನೇ ! ನಿನ್ನ ಒಟ್ಟುಗೂಡಿಸುವಿಕೆಯು ಇನ್ನೂ ಪರದ್ರವ್ಯ ಮತ್ತು ಪರಭಾವಗಳಲ್ಲಿಯೇ ನಡೆಯುತ್ತಿದೆ, ಆದರೆ ಅದು ನಿನಗೆ ದುಃಖದ ಕಾರಣವಿದೆ. ಅದನ್ನು ಬಿಟ್ಟುಕೊಟ್ಟು ಸ್ವದ್ರವ್ಯದಲ್ಲಿ ಒಟ್ಟುಗೂಡಿಸುವುದನ್ನು ಮಾಡು ಅದರಿಂದ ನಿನಗೆ ಸುಖವಾಗುವುದು. ಭಗವಾನ ಆತ್ಮನ ಪೂರ್ಣ ಸ್ವಭಾವದಲ್ಲಿ ಯಾವ ಜೀವನು ದೃಷ್ಟಿ-ಜ್ಞಾನವನ್ನು ಒಂದುಗೂಡಿಸುತ್ತಾನೆ ಅವನೇ ಯೋಗಿಯಿದಾನೆ. ಯೋಗಿಯ ಈ ವ್ಯಾಪಾರವೇ ಯೋಗವಿದೆ ಮತ್ತು ಈ ಯೋಗವೇ ಧರ್ಮವಿದೆ. ಇಂಥ ಯೋಗಿತನವನ್ನು ಪ್ರಕಟ ಮಾಡಿಕೊಳ್ಳದೆಯೇ ವ್ರತ,ತಪಸ್ಸುಗಳನ್ನು ಮಾಡಿದರು ಕೂಡ ಆತ್ಮ ಕಲ್ಯಾಣವಾಗುವುದಿಲ್ಲ. ಸರ್ವಜ್ಞ ಪಿತಾಮಹರು ನಿನಗೆ ಉತ್ತರಾಧಿಕಾರದ ರೂಪದಲ್ಲಿ ಯಾವ ಜಿನವಾಣಿಯನ್ನು ದಯಪಾಲಿಸಿದಾರೆ, ಅದರ ಪುಟಗಳನ್ನು ಬಿಡಿಸಿ ಓದಿದರೆ ನಿನಗೆ ಸತ್ಯಸ್ವರೂಪವು ತಿಳಿದು ಬರುವುದು.

ಪೂರ್ಣಾನಂದದ ಪ್ರಾಪ್ತಿಯಾಗುವುದರ ಹೆಸರು ಮೋಕ್ಷವಿದೆ ಮತ್ತು ಇಂಥ ತನ್ನ ತ್ರಿಕಾಲ ಪೂರ್ಣಾನಂದ ಸ್ವಭಾವದ ದೃಷ್ಟಿ-ಜ್ಞಾನ ಮಾಡಿ ಅದರಲ್ಲಿ ಏಕಾಕಾರವಾಗುವುದು ಅದು ಒಂದೇ ಮೋಕ್ಷದ ಉಪಾಯವಿದೆ. ಆತ್ಮನ ತ್ರಿಕಾಲ ಪೂರ್ಣ ಸ್ವರೂಪವು ಹೇಗೆ ಇದೆ ಹಾಗೆಯೇ ಶ್ರದ್ಧೆಯಲ್ಲಿ ಸ್ವೀಕರಿಸುವುದು, ಜ್ಞಾನದಲ್ಲಿ ತಂದುಕೊಳ್ಳುವುದು ಮತ್ತು ಅದರಲ್ಲಿ ಸ್ಥಿರಗೊಳ್ಳುವುದು ಅದುವೇ ಮೋಕ್ಷದ ಉಪಾಯವಿದೆ. ಯಾವ ಪ್ರಕಾರ ಜಿನೇಂದ್ರರ ಸ್ವರೂಪವಿದೆ ಅದೇ ಪ್ರಕಾರ ಈ ಆತ್ಮನ ಮೂಲ ಸ್ವರೂಪವಿದೆ.

ನಿಶ್ಚಯದಿಂದ ನಿಜಾತ್ಮನ ಶ್ರದ್ಧೆ, ಜ್ಞಾನ ಮತ್ತು ಸ್ಥಿರತೆಯೇ ಮೋಕ್ಷ ಮಾರ್ಗವಿದೆ. ವರ್ತಮಾನದಲ್ಲಿ ಅಂತರ್ಯದೊಳಗೆ ಎಷ್ಟು ಏಕಾಗ್ರತೆ ಮಾಡಲಾಗುವುದು ಅಷ್ಟು ಧರ್ಮವಿದೆ ಮತ್ತು ಎಷ್ಟು ಶುಭಾಶುಭ ವಿಕಲ್ಪಗಳಿವೆ ಅವೆಲ್ಲವೂ ಅಧರ್ಮವಿದೆ. ಯಾವ ಜೀವನು ಅರಹಂತರ ಸ್ವರೂಪವನ್ನು ಎಂದರೆ ಅವರ ದ್ರವ್ಯವನ್ನು, ಅವರ ಅನಂತ ಗುಣಗಳನ್ನು ಮತ್ತು ಅವರ ವರ್ತಮಾನ ಅವಸ್ಥೆಯನ್ನು ತಿಳಿಯುತ್ತಾನೆ ಅವನು ತನ್ನ ಆತ್ಮನ ದ್ರವ್ಯ-ಗುಣ-ಪರ್ಯಾಯವನ್ನು ತಿಳಿಯುತ್ತಾನೆ ಮತ್ತು ಅವನ ಮೋಹವು ನಾಶಕ್ಕೆ ಪ್ರಾಪ್ತವಾಗುತ್ತದೆ. ಹೀಗೆ ಭಗವಂತರ ಸಮಾನವಾಗಿ ತಮ್ಮ ಆತ್ಮನನ್ನು ಸ್ವೀಕರಿಸಬೇಕು, ಅವನಲ್ಲಿ ಏಕಾಕಾರವಾಗಬೇಕು ಇದುವೇ ನಿಜವಾಗಿ ಸ್ವಾನುಭವದ ಕಲೆಯಿದೆ.

ತನ್ನ ಸ್ವಭಾವದ ಮಹಿಮೆಯು ಬಂದ ನಂತರವಂತೂ ರಾಗ-ದ್ವೇಷ, ಭೋಗ-ಸಂಪತ್ತು ಮೊದಲಾದವುಗಳ ಮಹಿಮೆಯು ಹೊರಟು ಹೋಗುತ್ತದೆ. ಅತೀಂದ್ರಿಯ ಸುಖದ ದೃಷ್ಟಿಯಾಗುತ್ತಿರುವಂತೆಯೇ ಇಂದ್ರಿಯ ಸುಖ, ನಿಮಿತ್ತ, ಸಂಯೋಗಿ ಪದಾರ್ಥಗಳ ಮತ್ತು ಪುಣ್ಯ - ಪಾಪದ ಭಾವಗಳ ಮಹಿಮೆಯು ಉಳಿಯುವುದಿಲ್ಲ. ಈ ಮನುಷ್ಯ ಭವದಲ್ಲಿ ಆತ್ಮ ವಸ್ತುವನ್ನು ಪ್ರಾಪ್ತ ಮಾಡಿಕೊಳ್ಳುವ - ಅಪೂರ್ವ ಅವಸರವು ದೊರಕಿದೆ. ಅದನ್ನು ತಪ್ಪಿಸಿಕೊಂಡು ಬಿಟ್ಟರೆ ಪುನಃ ಎಂಭತ್ತುನಾಲ್ಕು ಲಕ್ಷ ಯೋನಿಗಳಲ್ಲಿ ಜನ್ಮ - ಮರಣ ಮಾಡುತ್ತ ಘೋರ ಸಂಸಾರಸಾಗರದಲ್ಲಿ ಮುಳುಗಿಹೋಗಬೇಕಾಗುವುದು. ಅಲ್ಲಿಂದ ಬಿಡಿಸುವವರು ಯಾರೂ ಇಲ್ಲ.

ಈಗ ಆತ್ಮನ ಗುಣಗಳ ಭಾವನೆ ಮಾಡಬೇಕೆಂದು ಹೇಳುತ್ತಾರೆ, -

ಜಾ ತೇ ಚಉ ಪಂಚ ವಿ ಣವಹ ಸತ್ತಹ ಛಹ ಪಂಚೇಹ
ಚಉಗುಣ-ಸಹಿಯಉ ಸೋ ಮುಣಹ ಏಯಇ ಲಕ್ಖಣ ಜಾಣ ॥76॥

ಮೂರು ಎರಡು ಐದು ನಾಲ್ಕು ಪುನರೊಂಭತ್ತು ಏಳು ಆರು
ದೊರೆಕೊಂಡೀ ಗುಣಲಕ್ಷಣದ ತಿಳಿದುಕೊ ಆ ಪರಮಾತ್ಮನನು ॥76॥

ಅರ್ಥ :- ಆ ತನ್ನ ಆತ್ಮನನ್ನು ಎರಡು, ಮೂರು, ನಾಲ್ಕು, ಐದು, ಒಂಭತ್ತು, ಏಳು, ಆರು, ಐದು ಮತ್ತು ನಾಲ್ಕು ಗುಣ ಸಹಿತನೆಂದು ತಿಳಿ. ಹೀಗೆ ಆ ಪರಮಾತ್ಮನ ಅಥವಾ ಆತ್ಮನ ಲಕ್ಷಣಗಳಿವೆಯೆಂದು ತಿಳಿ.

ಅನಂತ ಗುಣಗಳ ಪಿಂಡನಾದ ಆತ್ಮನು ಏಕರೂಪನಿದ್ದಾನೆ; ಅವನ ಲಕ್ಷ್ಯ ಮಾಡಿ ಅವನಲ್ಲಿ ಸ್ಥಿರವಾಗುವುದು ಅದು ನಿಶ್ಚಯವಿದೆ ಮತ್ತು ಅವನಲ್ಲಿ ಸ್ಥಿರವಾಗುವ ಮೊದಲು ತಮ್ಮ ವಿವಿಧ ಗುಣಗಳ ವಿಚಾರ ಮಾಡುವುದು ಅದು ವ್ಯವಹಾರವಿದೆ. ಇದು ಅತ್ಯಂತ ನಿಕಟವರ್ತಿಯಾದ ವ್ಯವಹಾರವಿದೆ. ದೇವ-ಶಾಸ್ತ್ರ-ಗುರು ಮೊದಲಾದವರ ಭಕ್ತಿಯ ವ್ಯವಹಾರವಂತೂ ಹೊರಗಿನ, ದೂರದ ವ್ಯವಹಾರವಿದೆ.

ವೀತರಾಗ, ಆನಂದ ಸ್ವರೂಪ, ಅನಂತ ಗುಣಗಳ ಭಂಡಾರನಾದಂಥ ಆತ್ಮನನ್ನು ಒಂದು ಜ್ಞಾಯಕರೂಪನೆಂದು ಮನ್ನಿಸುವುದು ಇದು ಧರ್ಮ ಮಾಡುವಂಥವನ ಮುಖ್ಯ ಕರ್ತವ್ಯವಿದೆ. ಧರ್ಮಾತ್ಮನು ಸ್ವರೂಪದಲ್ಲಿ ಸ್ಥಿರವಾಗುವ ಸಾಧ್ಯತೆಯಿಲ್ಲದಿರುವಾಗ ಎರಡು, ಮೂರು, ನಾಲ್ಕು ಮೊದಲಾದ ಗುಣಗಳಿಂದ ವಿಚಾರ ಮಾಡುತ್ತಾನೆ, ಭಾವನೆ ಭಾವಿಸುತ್ತಾನೆ ಅದು ವ್ಯವಹಾರವಿದೆ. ಈ ಯೋಗಸಾರದ ವ್ಯವಹಾರವು ಕೂಡ ಭಿನ್ನ ಪ್ರಕಾರದ್ದಿದೆ. ಇಲ್ಲಿ ಸಂಕ್ಷೇಪದಲ್ಲಿ ಅತ್ಯಂತ ಉಪಯುಕ್ತ ಮಾತುಗಳನ್ನು ಹೇಳಿದ್ದಾರೆ.

ಜ್ಞಾತಾ - ದೃಷ್ಟಾ ಆತ್ಮನು ತನ್ನ ಮೂಲ ಸ್ವರೂಪವನ್ನು ತಿಳಿದುಕೊಂಡು ಅದರಲ್ಲಿ ಸ್ಥಿರವಿರುವುದಂತೂ ಅವನ ಮುಖ್ಯ ಕರ್ತವ್ಯವಿದೆ. ಆದರೆ ತನ್ನ ಪುರುಷಾರ್ಥದ ಅಶಕ್ತತೆಯಿಂದ ಸ್ವಭಾವದಲ್ಲಿ ಸ್ಥಿರವಾಗುವ ಸಾಧ್ಯತೆಯಿಲ್ಲದಾಗ ನನ್ನ ಆತ್ಮನು ಜ್ಞಾನ ಸ್ವರೂಪನಿದ್ದಾನೆ, ಆನಂದ ಸ್ವರೂಪನಿದ್ದಾನೆ, ಸುಖ ಸ್ವರೂಪನಿದ್ದಾನೆ, ವೀರ್ಯ, ಸ್ವಚ್ಛತ್ವ, ಪ್ರಭುತ್ವ ಮೊದಲಾದ ಅನಂತ ಶಕ್ತಿ ಸ್ವರೂಪದಿಂದ ಸ್ವಯಂ ವಿರಾಜಿಸುತ್ತಿದ್ದಾನೆಂದು ವಿಚಾರ ಮಾಡುವುದು ಅದು ವ್ಯವಹಾರವಿದೆ.

ಆತ್ಮನು ಅನಂತ ಗುಣವುಳ್ಳವನಿದ್ದಾನೆಂದ ಮೇಲೆ ಅವನ ಪರ್ಯಾಯಗಳು ಕೂಡ ಅನಂತವಿವೆ. ಇಂಥ ಏಕರೂಪನಾದ ಆತ್ಮನನ್ನು ಗುಣಹಾಗೂ ಪರ್ಯಾಯವೆಂದು ಎರಡು ರೂಪದಿಂದ ವಿಚಾರ ಮಾಡುವುದು ಅದು ವ್ಯವಹಾರವಿದೆ. ಒಂದ ಒಂದಲೆ ಒಂದು ಮತ್ತು ಎರಡ ಒಂದಲೆ ಎರೆಡು. ಈ ಎರಡು ತನದ ವಿಚಾರದಲ್ಲಿಯೇ ವಿಕಲ್ಪವು ಎದ್ದು ನಿಲ್ಲುತ್ತದೆ-ವ್ಯವಹಾರವು ಎದ್ದು ನಿಲ್ಲುತ್ತದೆ. ಏಕರೂಪನಾದ ಆತ್ಮನಲ್ಲಿ ನಿಮಗ್ನವಾಗುವ ಸಾಧ್ಯತೆಯಿಲ್ಲದಾಗ ಆತ್ಮನನ್ನು ಅನೇಕ ಸ್ವರೂಪದಿಂದ ಭಾವಿಸಲಾಗುತ್ತದೆ, ಆದರೆ ಅದು ಯೋಗಸಾರವಲ್ಲ.

ಪ್ರಭು ! ಇವಂತೂ ಕೇವಲ ಸಾರಭೂತವಾದ ಮಾತುಗಳಿವೆ. ಆತ್ಮನನ್ನು ವಿಕಲ್ಪಪೂರ್ವಕವಾಗಿ ವಿಚಾರ ಮಾಡುವುದರಿಂದ ವ್ಯವಹಾರವು ಎದ್ದು ನಿಲ್ಲುತ್ತದೆ, ಇಂಥ ಮಾತುಗಳು ಇಲ್ಲಿ ಇಲ್ಲ.

ಭಗವಾನ ಆತ್ಮನು ದರ್ಶನ-ಜ್ಞಾನಸ್ವರೂಪನಿದ್ದಾನೆಂದು ಕೂಡ ಎರಡು ರೂಪದಿಂದ ಆತ್ಮನ ವಿಚಾರ ಮಾಡುವ ಸಾಧ್ಯತೆಯಿದೆ. ಧರ್ಮಾತ್ಮ ಜೀವನು ಇಡೀ ಲೋಕದಲ್ಲಿ ಪ್ರತಿಯೊಂದನ್ನು ತಿಳಿಯುತ್ತಾನೆ - ನೋಡುತ್ತಾನೆ, ಆದರೆ ಯಾವುದರ ಮೇಲೂ ತನ್ನತನವನ್ನು ಸ್ಥಾಪಿಸುವುದಿಲ್ಲ, ನಾನು ಸ್ವ-ಪರಗಳನ್ನು ತಿಳಿದುಕೊಳ್ಳುವ ಸ್ವಭಾವದ ಧಾರಕನಿದ್ದೇನೆಂಬ ವಿಕಲ್ಪವು ಕೂಡ ಧರ್ಮಾತ್ಮನಿಗೆ ಬರುವುದು. ಆದರೆ ಇದು ವೀತರಾಗತೆಯ ವ್ಯವಹಾರವಿದೆ. ಈ ವೀತರಾಗತೆಯ ವ್ಯವಹಾರವು ಕೂಡ ಬಂಧದ ಕಾರಣವಿದೆ. ಆದುದರಿಂದ ಇಂಥ ವಿಚಾರಗಳಿಂದ ಕೂಡ ಧರ್ಮಾತ್ಮನಿಗೆ ಹರ್ಷವಾಗುವುದಿಲ್ಲ, ಖೇದವಾಗುತ್ತದೆ. ಏಕೆಂದರೆ ನನ್ನ ಪುರುಷಾರ್ಥದ ಅಶಕ್ತತೆಯಿಂದ ಮಧ್ಯದಲ್ಲಿ ಇಂಥ ವ್ಯವಹಾರವು ಬರುತ್ತಿದೆಯಲ್ಲ ! ಎಂದು ಖೇದವಾಗುತ್ತದೆ.

ಅಯ್ಯಾ ಸೋದರನೇ ! ತ್ರಿಲೋಕನಾಥ ಪರಮೇಶ್ವರರ ಮಾರ್ಗವಂತೂ ಅದು ಅಲೌಕಿಕವಿದೆ. ಪ್ರತಿಯೊಬ್ಬ ಆತ್ಮನು ಸ್ವಯಂ ಪರಮೇಶ್ವರನಿದ್ದಾನೆ. ಪರಮ ಈಶ್ವರತೆಯ - ಮಹಾನತೆಯ ಪುಂಜನಿದ್ದಾನೆ. ಅದರಲ್ಲಿ ಕೂಡ ಒಂದು ಗುಣದಿಂದ ಈಶ್ವರನಿಲ್ಲ ಎನ್ನುವಂತಿಲ್ಲ; ಆದರೆ ಪ್ರತಿಯೊಂದು ಗುಣದಿಂದ ಆತ್ಮನು ಅನಂತ ಈಶ್ವರತೆಯ ಪಿಂಡನಿದ್ದಾನೆ. ಒಂದೊಂದು ಗುಣವಂತೂ ಈಶ್ವರವಿದ್ದೇ ಇದೆ, ಆದರೆ ಅದರ ಒಂದೊಂದು ಪರ್ಯಾಯವು ಕೂಡ

ಐಶ್ವರ್ಯವಂತವಿವೆ. ಹೀಗೆ ಅನಂತ ಗುಣ - ಪರ್ಯಾಯಗಳ ಈಶ್ವರತೆಯ ಪುಂಜನು ಒಬ್ಬ ಆತ್ಮನಿದ್ದಾನೆ. ಇಂಥ ನಿಜಾತ್ಮನನ್ನು ತಿಳಿದುಕೊಳ್ಳದೆ ಸಮಸ್ತ ಪ್ರಾಣಿಕೋಟಿಯು ದುಃಖಿಯಿದೆ.

ಇದು ತ್ರಿಲೋಕನಾಥ ಸರ್ವಜ್ಞ ಪರಮೇಶ್ವರರು ಜಗತ್ತಿಗೆ ತೋರಿಸಿಕೊಟ್ಟ ಮಾರ್ಗವಿದೆ. ಇದಂತೂ ಅಲೌಕಿಕವಾಗಿಯೇ ಇರಬಹುದಲ್ಲವೇ ! ಲೌಕಿಕದೊಡನೆ ಅದರ ಸಂಪರ್ಕವಾಗುವುದಿಲ್ಲ, ಇದು ಜಗತ್ತಿನಿಂದ ಭಿನ್ನ ಜಾತಿಯ ಪರಮೇಶ್ವರರ ಮಾರ್ಗವಿದೆ.

ಧರ್ಮಾತ್ಮ ಜೀವನು 'ಉತ್ಪಾದ - ವ್ಯಯ -ಧ್ರುವ'ವೆಂದು ಮೂರು ಪ್ರಕಾರದಿಂದ ಕೂಡಿ ಆತ್ಮನ ವಿಚಾರ ಮಾಡುತ್ತಾನೆ. ಯಾರಿಗೆ ಆತ್ಮನ ದೃಷ್ಟಿ ಮತ್ತು ಅನುಭವವಾಗಿ ಹೋಗಿದೆ ಅವರು ಕೂಡ ಇಂಥ ವಿಚಾರ ಮಾಡುತ್ತಾರೆ. ಮತ್ತು ಯಾರಿಗೆ ಆತ್ಮನ ದೃಷ್ಟಿ ಹಾಗೂ ಅನುಭವ ಮಾಡಿಕೊಳ್ಳುವುದಿದೆ ಅವರು ಕೂಡ ಅನುಭವದ ಪೂರ್ವದಲ್ಲಿ ಇದೇ ಜಾತಿಯ ವಿಚಾರ ಮಾಡುತ್ತಾರೆ. ಆತ್ಮನು ಧ್ರುವ ಅಪೇಕ್ಷೆಯಿಂದ ಯಾವಾಗಲೂ ಸ್ಥಿರವಿರುತ್ತಾನೆ, ಉತ್ಪಾದ ಅಪೇಕ್ಷೆಯಿಂದ ನವೀನ ಪರ್ಯಾಯರೂಪನಾಗುತ್ತಾನೆ ಮತ್ತು ವ್ಯಯದ ಅಪೇಕ್ಷೆಯಿಂದ ಪೂರ್ವರೂಪದಿಂದ ನಷ್ಟವಾಗುತ್ತಾನೆ. ಹೀಗೆ ಭಗವಾನ ಆತ್ಮನು ಮೂರು ರೂಪದಿಂದ ಪರಿಣಮಿಸುತ್ತಾನೆಂದು ಹೇಳುವುದು ಕೂಡ ವ್ಯವಹಾರವಿದೆ. ಸಮಯಸಾರದ ಎಂಟನೆಯ ಗಾಥೆಗೆ ಅನುಸರಿಸಿ 'ವ್ಯವಹಾರ'ದ ಉಪದೇಶ ಕೊಡುವಂಥವರು ಅಥವಾ ಕೇಳುವಂಥವರು ಯಾವುದನ್ನೂ ಅನುಸರಿಸುವುದು ಯೋಗ್ಯವಿಲ್ಲ. ಉತ್ಪಾದ ಮತ್ತು ವ್ಯಯರೂಪದಿಂದ ನಿರಂತರ ಬದಲಾಗುತ್ತಿದ್ದರು ಕೂಡ ವಸ್ತುವು ಧ್ರುವವಿದೆಯೆಂಬುದು ಅನುಸರಿಸಲು ಯೋಗ್ಯವಿದೆ. ಭಗವಂತರ ಭಕ್ತಿಯ ವ್ಯವಹಾರವಂತೂ ಅತ್ಯಂತ ಸ್ಥೂಲವಿದೆ. ಇಲ್ಲಿಯಂತೂ ಆತ್ಮನನ್ನು ಉತ್ಪಾದ - ವ್ಯಯ - ಧ್ರೌವ್ಯರೂಪವಾಗಿ ವಿಚಾರ ಮಾಡುವುದು ಕೂಡ ವ್ಯವಹಾರವಿದೆಯೆಂದು ಹೇಳಲಾಗಿದೆ.

ಆತ್ಮನು ಸಮ್ಯಗ್ದರ್ಶನ - ಜ್ಞಾನ - ಚಾರಿತ್ರ ಸ್ವರೂಪನಿದ್ದಾನೆಂದು ಹೀಗೆ ಮೂರು ಭೇದದಿಂದ ಕೂಡ ಆತ್ಮ ಸ್ವರೂಪದ ವಿಚಾರವಾಗುವ ಸಾಧ್ಯತೆಯಿದೆ. ಇನ್ನು ಸಮ್ಯಗ್ದರ್ಶನ - ಜ್ಞಾನ - ಚಾರಿತ್ರ ಮತ್ತು ಪರಮಾನಂದದ ಉಗ್ರ ವೀತರಾಗ ದಶೆ ಎಂದರೆ ಸಮ್ಯಕ್ ತಪ. ಈ ನಾಲ್ಕು ಆರಾಧನೆಯ ರೂಪದಿಂದ ಕೂಡ ಧರ್ಮಾತ್ಮನು ಆತ್ಮನ ವಿಚಾರ ಮಾಡುತ್ತಾನೆ.

ಪ್ರಭು ! ನಿನ್ನ ಮನೆಯಲ್ಲಿ ನಿರ್ವಿಕಲ್ಪ ರೀತಿಯಿಂದ ಪ್ರವೇಶ ಮಾಡಿದಲ್ಲದೆ ಬಿಡುಗಡೆಯಿಲ್ಲವೆಂದು ಭೇದದ ವಿಚಾರ ಮಾಡುವುದು ಕೂಡ ಹೊರಗೆ ಬರುವುದೇ ಇದೆ.

ಅನಂತ ದರ್ಶನ, ಅನಂತ ಜ್ಞಾನ, ಅನಂತ ಸುಖ ಮತ್ತು ಅನಂತ ವೀರ್ಯವೆಂದು ಈ ನಾಲ್ಕು ಅನಂತ ಚತುಷ್ಟಯ ರೂಪದಿಂದ ಕೂಡ ಆತ್ಮನ ಸ್ವರೂಪದ ವಿಚಾರ ಮಾಡಲಾಗುತ್ತದೆ. ಆದರೆ ಒಂದು ಅಭೇದ ಸ್ವರೂಪವನ್ನು ನಾಲ್ಕು ರೂಪದಿಂದ ವಿಚಾರ ಮಾಡುವುದು ಅದು ವ್ಯವಹಾರವಿದೆ ಇಂಥ ವ್ಯವಹಾರವು ಅವಶ್ಯವಾಗಿ ಬರುವುದು ಆದರೆ ಅದರಲ್ಲಿ ಹರುಷ ಪಡುವಂತಿಲ್ಲ. ಸಮ್ಯಗ್ದರ್ಶನವಾದ ನಂತರ ಸರ್ವಜ್ಞತೆಯು ಕೂಡಲೆ ಬಂದು ಬಿಡುವುದಿಲ್ಲ. ಆದುದರಿಂದ ಸರ್ವಜ್ಞವಾಗುವ ಮೊದಲು ಮಧ್ಯದಲ್ಲಿ ಇಂಥ ವ್ಯವಹಾರವು ಬಂದಲ್ಲದೆ ಇರುವುದಿಲ್ಲ.

ಭಗವಾನ ಆತ್ಮನು ಆನಂದ, ಬೋಧ, ಚೈತನ್ಯ ಮತ್ತು ಅಸ್ತಿತ್ವವೆಂಬ ಈ ನಾಲ್ಕು ಪ್ರಾಣಗಳನ್ನು ಧರಿಸುವಂಥವನಿದ್ದಾನೆ. ಶರೀರ, ವಾಣಿ, ಕರ್ಮ ಮೊದಲಾದುವನ್ನಂತೂ ಆತ್ಮನು ವ್ಯವಹಾರದಿಂದ ಕೂಡ ಧಾರಣ ಮಾಡುವುದಿಲ್ಲ.

ಆತ್ಮನು ತನ್ನ ದ್ರವ್ಯ-ಕ್ಷೇತ್ರ-ಕಾಲ-ಭಾವದ ಅಧಿಪತಿಯಿದ್ದಾನೆ. ಅನ್ಯವಸ್ತುವಿನ ದ್ರವ್ಯ-ಕ್ಷೇತ್ರ-ಕಾಲ-ಭಾವದ ಅಧಿಪತಿಯಿಲ್ಲ. ಅಖಂಡ ಏಕರೂಪವಾದ ಆತ್ಮ ದ್ರವ್ಯದ ಶ್ರದ್ಧೆ, ಜ್ಞಾನ ಮತ್ತು ಸ್ಥಿರತೆಯೇ ಸಾಕ್ಷಾತ್ ಮೋಕ್ಷಮಾರ್ಗವಿದೆ. ಆದರೊಳಗೆ ನಾನು ಶಾಂತ.... ಶಾಂತ.... ಉಪಶಮರಸದ ಪಿಂಡನಿದ್ದೇನೆಂದು ವಿಕಲ್ಪ ಉತ್ಪನ್ನವಾಗುವುದು ಅದು ಕೂಡ ಭೇದವಿರುವುದರಿಂದ ವ್ಯವಹಾರವಿದೆ.

ಐದು ಭಾವಗಳ ಸ್ವರೂಪದಿಂದ ಆತ್ಮನ ವಿಚಾರ ಮಾಡುವುದರಲ್ಲಿ ಬಂದರೆ ಆತ್ಮನು ಅನಂತ ಜ್ಞಾನ, ಅನಂತ ದರ್ಶನ, ಕ್ಷಾಯಿಕ ಸಮ್ಯಕ್ತ್ವ, ಕ್ಷಾಯಿಕ ಚಾರಿತ್ರ ಮತ್ತು ಅನಂತ ವೀರ್ಯ ಸ್ವರೂಪನಿದ್ದಾನೆ. ಅಥವಾ ಅವನು ಉದಯ, ಉಪಶಮ, ಕ್ಷಯೋಪಶಮ, ಕ್ಷಾಯಿಕ ಮತ್ತು ಪರಮ ಪಾರಿಣಾಮಿಕ ಭಾವವೆಂದು ಈ ಐದು ರೂಪದಿಂದ ಆತ್ಮನಿದ್ದಾನೆ. ಆತ್ಮನಲ್ಲಿ ಉಪಶಮ ಸಮ್ಯಕ್ತ್ವ ಮತ್ತು ಉಪಶಮ ಚಾರಿತ್ರರೂಪದಿಂದಾಗುವ ಶಕ್ತಿಯಿದೆ, ಆತ್ಮನಲ್ಲಿ ಕ್ಷಯೋಪಶಮ ಜ್ಞಾನ, ದರ್ಶನ, ಆನಂದ ಮೊದಲಾದ ರೂಪದಿಂದಾಗುವ ಶಕ್ತಿಯಿದೆ, ಆತ್ಮನಲ್ಲಿ ಕ್ಷಾಯಿಕ ಸಮ್ಯಗ್ದರ್ಶನ ಮತ್ತು ಚಾರಿತ್ರರೂಪದಿಂದಾಗುವ ಶಕ್ತಿಯಿದೆ. ಮತ್ತು ಉದಯಭಾವದಲ್ಲಿ ರಾಗ-ದ್ವೇಷ ಮೊದಲಾದ ವಿಕಾರರೂಪದಿಂದ ಪರಿಣಮಿಸುವ ಪರ್ಯಾಯದ ಯೋಗ್ಯತೆಯಿದೆ. ಕರ್ಮದ ಕಾರಣ ಅಥವಾ ಪರದ್ರವ್ಯದ ಕಾರಣ ಆತ್ಮನು ಉದಯ ಭಾವರೂಪವಾಗಿ ಪರಿಣಮಿಸುವುದಿಲ್ಲ; ತನ್ನ ಪರ್ಯಾಯದ ಆ ಸಮಯದ ಯೋಗ್ಯತೆಯಿಂದ ಸ್ವಯಂ ಪರಿಣಮಿಸುತ್ತಾನೆ. ಅದು ದ್ರವ್ಯದ ತ್ರಿಕಾಲೀ ಗುಣವಲ್ಲ. ಆದರೆ ಪರ್ಯಾಯದ ಶಕ್ತಿಯು ಅಂಥದಿದೆ.

ಉಪಶಮ, ಕ್ಷಯೋಪಶಮ ಹಾಗೂ ಕ್ಷಾಯಿಕ ಇವು ಮೂರು ನಿರ್ಮಲ ಪರ್ಯಾಯ ಮತ್ತು ಉದಯಭಾವ ಇದು ವಿಕಾರೀ ಪರ್ಯಾಯ ಹೀಗೆ ಇವು ನಾಲ್ಕು ಪರ್ಯಾಯಗಳಿವೆ. ಐದನೆಯದಾದ ಪರಮ ಪಾರಿಣಾಮಿಕ ಭಾವವು ಇದು ಆತ್ಮನ ತ್ರಿಕಾಲಿ ಗುಣವಿದೆ ಎಂದರೆ ದ್ರವ್ಯರೂಪವಿದೆ. ಹೀಗೆ ಐದು ಭಾವರೂಪದಿಂದ ಒಬ್ಬ ಆತ್ಮನನ್ನು ವಿಚಾರಿಸುವುದು ಅದು ಕೂಡ ವ್ಯವಹಾರವಿದೆ.

ಯಾವಾಗ ಮುನಿರಾಜರುಗಳು ಉಪಶಮ ಶ್ರೇಣಿಯನ್ನು ಹತ್ತುತ್ತಾರೆ ಆಗ ಕ್ಷಾಯಿಕ ಸಮ್ಯಕ್ತ್ವ, ಉಪಶಮ ಚಾರಿತ್ರ, ಉದಯಭಾವ, ಕ್ಷಾಯೋಪಶಮಿಕ ಜ್ಞಾನ ಮತ್ತು ಪರಮ ಪಾರಿಣಾಮಿಕ ಭಾವ ಈ ಐದು ಭಾವಗಳು ಮುನಿರಾಜರಿಗೆ ಒಂದು ಸಮಯದಲ್ಲಿ ಒಟ್ಟಿಗೆ ಇರುತ್ತವೆ.

ಅರಹಂತ, ಸಿದ್ಧ, ಆಚಾರ್ಯ, ಉಪಾಧ್ಯಾಯ ಮತ್ತು ಸಾಧು ಈ ಪಂಚ ಪರಮೇಷ್ಠಿ ಪದವನ್ನು ಧಾರಣ ಮಾಡುವಂಥ ಭಗವಾನ ಆತ್ಮನು ಸ್ವಯಂ ಒಬ್ಬನೇ ಇದ್ದಾನೆ. ಐದೂ ಪದಗಳ ರೂಪವಾಗುವ ಶಕ್ತಿಯು ಪ್ರತಿಯೊಬ್ಬ ಆತ್ಮನಲ್ಲಿ ಇದೆ. ಈ ಪ್ರಕಾರ ಐದು ಭೇದರೂಪವಾಗಿ ವಿಚಾರಿಸುವುದು ಕೂಡ ವ್ಯವಹಾರವಿದೆ.

ನಾರಕ, ತಿರ್ಯಂಚ, ಮನುಷ್ಯ ಮತ್ತು ದೇವ ಈ ನಾಲ್ಕು ಗತಿ ಮತ್ತು ಪಂಚಮ ಗತಿಯಾದ ಮೋಕ್ಷ ರೂಪದಿಂದ ಪರಿಣಮಿಸುವ ಸಾಮರ್ಥ್ಯವು ನನ್ನಲ್ಲಿ ಇದೆಯೆಂದು ಧರ್ಮಾತ್ಮನು ವಿಚಾರಿಸುತ್ತಾನೆ. ಆರು ರೂಪದಿಂದ ನನ್ನ ಆತ್ಮನ ವಿಚಾರ ಮಾಡುವುದಾದರೆ ಅನಂತ ದರ್ಶನ, ಜ್ಞಾನ, ಸುಖ, ವೀರ್ಯ ಕ್ಷಾಯಿಕ ಸಮ್ಯಕ್ತ್ವ ಮತ್ತು ಕ್ಷಾಯಿಕ ಚಾರಿತ್ರರೂಪದಿಂದ ನಾನು ವಿರಾಜಮಾನನಿದ್ದೇನೆ, ಅಥವಾ ಆರು ಗುಣಗಳಿಂದ ನಾನು ಶೋಭಾಯಮಾನನಿದ್ದೇನೆ. ಪೂರ್ವ, ಪಶ್ಚಿಮ, ದಕ್ಷಿಣ, ಉತ್ತರ, ಊರ್ಧ್ವ ಮತ್ತು ಅಧೋ ಈ ಆರು ದಿಶೆಗಳಲ್ಲಿ ಗಮನ ಮಾಡುವ ಸಾಮರ್ಥ್ಯವು ನನ್ನಲ್ಲಿ ಇದೆ. ಯಾವುದೇ ಕರ್ಮ ಅಥವಾ ಧರ್ಮ ದ್ರವ್ಯವು ನನ್ನನ್ನು ಗಮನ ಮಾಡಿಸುವುದಿಲ್ಲ, ಅಥವಾ ಆತ್ಮನು ಅಸ್ತಿತ್ವ ವಸ್ತುತ್ವ ದ್ರವ್ಯತ್ವ ಪ್ರಮೇಯತ್ವ ಅಗುರುಲಘುತ್ವ ಮತ್ತು ಪ್ರದೇಶತ್ವವೆಂಬ ಈ ಆರು ಸಮ್ಯಕ್ ಗುಣಗಳನ್ನು ಧಾರಣ ಮಾಡುವಂಥವನಿದ್ದಾನೆ.

ಧರ್ಮಾತ್ಮನು ದರ್ಶನ, ಜ್ಞಾನ ಮೊದಲಾದ ಏಳು ಗುಣಗಳಿಂದ ಅಥವಾ ಅಸ್ತಿ, ನಾಸ್ತಿ ಮೊದಲಾದ ಏಳು ಭಂಗಗಳ ರೂಪದಿಂದಲೂ ಆತ್ಮನ ವಿಚಾರ ಮಾಡುತ್ತಾನೆ. ಅಥವಾ ಜೀವ ದ್ರವ್ಯದ ಜೀವ , ಅಜೀವ, ಆಸ್ರವ, ಬಂಧ, ಸಂವರ, ನಿರ್ಜರೆ ಮತ್ತು ಮೋಕ್ಷ ಈ ಏಳು ತತ್ತ್ವಗಳ ರೂಪದಿಂದ ಕೂಡ ವಿಚಾರ ಮಾಡುತ್ತಾನೆ. ಮತ್ತು ನೈಗಮ ಮೊದಲಾದ ಏಳು ನಯಗಳಿಂದಲೂ ಆತ್ಮನ ವಿಚಾರ ಮಾಡುತ್ತಾನೆ.

ಧರ್ಮಾತ್ಮನು ಜ್ಞಾನಾವರಣ ಮೊದಲಾದ ಎಂಟು ದ್ರವ್ಯ ಕರ್ಮಗಳಿಂದ ರಹಿತ ಮತ್ತು ಸಮ್ಯಕ್ತ್ವ ಮೊದಲಾದ ಎಂಟು ಗುಣಗಳಿಂದ ಸಹಿತನಾದ ಆತ್ಮನ ವಿಚಾರ ಮಾಡುತ್ತಾನೆ.

ಧರ್ಮಾತ್ಮನು ಕೇವಲೀ ಭಗವಂತರಿಗೆ ಒಂಭತ್ತು ಲಬ್ಧಿಯ ಪರ್ಯಾಯಗಳು ಪ್ರಕಟವಾಗುತ್ತವೆ ಅವುಗಳ ವಿಚಾರ ಮಾಡುತ್ತಾನೆ ಮತ್ತು ಆ ಪರ್ಯಾಯಗಳನ್ನು ಪ್ರಕಟಪಡಿಸುವ ಸಾಮರ್ಥ್ಯವು ತನ್ನಲ್ಲಿದೆಯೆಂದು ಶ್ರದ್ಧೆ ಮಾಡುತ್ತಾನೆ.

ಸಾಮಾನ್ಯ ಜನರಿಗೆ ಈ ಮೇಲೆ ಹೇಳಿದ ಎಲ್ಲ ಅಂಕಗಳ ವಿವರಣೆಯು ಸ್ಮರಣೆಯಲ್ಲಿ ಉಳಿಯುವುದಿಲ್ಲ. ಆದರೆ ಭಾವವು ಮಾತ್ರ ಸ್ಮರಣೆಯಲ್ಲಿ ಉಳಿಯಬಹುದಾಗಿದೆ. ನಮಗೆ ಅಂಕಗಳಿಂದ ಕಾರ್ಯವಿಲ್ಲ. ಆದರೆ ಭಾವಗಳಿಂದ ಕಾರ್ಯವಿದೆ.

ಹೀಗೆ ವಿವಿಧ ಪ್ರಕಾರದಿಂದ ಆತ್ಮನ ಭಾವನೆ ಮಾಡುತ್ತ - ಮಾಡುತ್ತ ಅವುಗಳಿಂದ ದೂರವಾಗಿ ಅಂತರ್ಯದಲ್ಲಿ ಏಕಾಕಾರವಾಗುವುದು ಇದು ಸ್ವಾನುಭೂತಿಯಿದೆ. ಇಂಥ ಗುಣಗಳ ಭಾವನೆಯು ಅದು ವಿಕಲ್ಪವಿದ್ದರೂಕೂಡ ಆದರ ಹಿಂದೆ ರಾಗದ ಪುಷ್ಟಿಯಾಗುವುದಿಲ್ಲ.ಆದರೆ ಸ್ವಭಾವದ ಪುಷ್ಟಿಯಾಗುತ್ತದೆ.

ಈಗ ಎರಡು ಅವಗುಣಗಳ ತ್ಯಾಗ ಮಾಡಿ ಎರಡು ಗುಣಗಳ ವಿಚಾರ ಮಾಡಬೇಕೆಂದು ಹೇಳುತ್ತಾರೆ.

ಬೇ ಛಂಡಿವಿ ಬೇ ಗುಣ ಸಹಿಉ ಜೋ ಅಪ್ಪಣಿ ವಸೇಇ
ಜಿಣು ಸಾಮಿಉ ಏಮಇ ಭಣಇ ಲಹು ಣಿವ್ವಾಣು ಲಹೇಇ ॥77॥

ಎರಡು ತೆಜಿಸಿ ಎರಡು ಗುಣಸಹ ಆತ್ಮನೊಳಗೆ ಲೀನವಾದರೆ
ತ್ವರಿತ ಶಿವಪದ ಪಡೆವನೆಂದು ಸಕಲ ಜಿನವರ ಪೇಳ್ವರು ॥77॥

ಅರ್ಥ :- ಯಾರು ಎರಡನ್ನು ಎಂದರೆ ರಾಗ - ದ್ವೇಷಗಳನ್ನು ಬಿಟ್ಟುಕೊಟ್ಟು ಜ್ಞಾನ-ದರ್ಶನ ಈ ಎರಡು ಗುಣಧಾರಿಯಾದ ಆತ್ಮನಲ್ಲಿ ಸ್ಥಿರರಾಗುತ್ತಾರೆ ಅವರು ಶೀಘ್ರದಲ್ಲಿಯೇ ನಿರ್ವಾಣ ಪಡೆಯುತ್ತಾರೆಂದು ಜಿನೇಂದ್ರ ಭಗಂವಂತರು ಹೇಳುತ್ತಾರೆ.

ಎಲೈ ಆತ್ಮನೇ ! ನೀನು ರಾಗ - ದ್ವೇಷಗಳನ್ನು ಬಿಟ್ಟುಕೊಟ್ಟು ಜ್ಞಾನ -ದರ್ಶನಧಾರಿಯಾದ ಸ್ವರೂಪದಲ್ಲಿ ನೆಲೆಸಿಬಿಡೆಂದು ಜಿನೇಂದ್ರ ಭಗವಂತರು ಹೇಳುತ್ತಾರೆ. ನಿಜಸ್ವರೂಪದ ಅಭಿರುಚಿ, ಜ್ಞಾನ ಮತ್ತು ಅದರಲ್ಲಿ ಸ್ಥಿರತೆಯು ಅದನ್ನು ಸ್ವರೂಪದಲ್ಲಿ ವಾಸಿಸುವುದೆಂದು ಹೇಳುತ್ತಾರೆ. ಎಲೈ ಜೀವನೇ ! ಯಾವ ಜೀವನು ತಿಳಿಯುವ-ನೋಡುವ ಸ್ವಭಾವವುಳ್ಳ ಓರ್ವ ಆತ್ಮನಲ್ಲಿ ನಿಮಗ್ನನಾಗುತ್ತಾನೆ ಆ ಜೀವನು ಶೀಘ್ರವಾಗಿ ನಿರ್ವಾಣ ಪದವನ್ನು ಪ್ರಾಪ್ತಮಾಡಿಕೊಳ್ಳುತ್ತಾನೆಂದು ಶ್ರೀ ಜಿನೇಂದ್ರ ಭಗವಂತರು ಅಪ್ಪಣೆ ಕೊಡಿಸಿದ್ದಾರೆ.

ರಾಗ-ದ್ವೇಷಗಳು ಬಂಧದ ಕಾರಣಗಳಿದ್ದು ಭಗವಾನ ಆತ್ಮನು ಅಖಂಡ ವೀತರಾಗ ಸ್ವರೂಪನಿದ್ದಾನೆ. ಜ್ಞೇಯಗಳಲ್ಲಿ ಇದು ಇಷ್ಟ ಮತ್ತು ಇದು ಅನಿಷ್ಟವೆಂದು ಎರಡು ಭೇದ ಮಾಡುವುದು ಅದು ರಾಗ - ದ್ವೇಷವಿದೆ. ಇದು ಅನುಕೂಲ ಮತ್ತು ಇದು ಪ್ರತಿಕೂಲವೆಂದು ವಿಕಲ್ಪವುಂಟಾಗುವುದು ಅದು ಆತ್ಮನ ಸ್ವರೂಪವಲ್ಲ. ಇದೇ ಪ್ರಕಾರ ದ್ರವ್ಯಗಳಲ್ಲಿ ಕೂಡ ಕೆಲವು ಅನುಕೂಲ ಮತ್ತು ಕೆಲವು ಪ್ರತಿಕೂಲವೆಂದು ದ್ರವ್ಯಗಳ ಸ್ವರೂಪವಿಲ್ಲ.

ಅಜ್ಞಾನಿಯು ಶರೀರವು ನಿರೋಗವಿದ್ದರೆ ಧರ್ಮವಾಗುವುದು ಮತ್ತು ಎಲ್ಲ ಪ್ರಕಾರದ ಅನುಕೂಲತೆಗಳಿದ್ದರೆ ಧರ್ಮವಾಗುವ ಸಾಧ್ಯತೆಯಿದೆಯೆಂದು ಮನ್ನಿಸುತ್ತಾನೆ. ಅವನಿಗೆ ಜಿನೇಂದ್ರ ಭಗವಂತರು ಹೇಳುವುದೇನೆಂದರೆ ಅಯ್ಯಾ ಪ್ರಭು ! ವಸ್ತುವಿನ ಸ್ವರೂಪದಲ್ಲಿ ಅನುಕೂಲತೆ ಅಥವಾ ಪ್ರತಿಕೂಲತೆಯೇ ಇಲ್ಲ. ಶರೀರ ಮೊದಲಾದವುಗಳಂತೂ ತಿಳಿದುಕೊಳ್ಳಲು ಯೋಗ್ಯ ಎಂದರೆ ಜ್ಞೇಯವಿವೆ. ಜ್ಞೇಯ ಪದಾರ್ಥಗಳು ಧರ್ಮ ಮಾಡುವುದರಿಂದ ಆತ್ಮನನ್ನು ತಡೆಯುವುದಿಲ್ಲ. ಆದಕ್ಕಾಗಿ ಎಲೈ ಸೋದರನೇ ! ನೀನು ರಾಗ - ದ್ವೇಷಗಳನ್ನು ಸಂಪೂರ್ಣವಾಗಿ ಬಿಟ್ಟುಕೊಟ್ಟು ಸ್ವಭಾವದ ಸಾಧನೆ ಮಾಡು !

ಆತ್ಮನನ್ನು ಹೊರತುಪಡಿಸಿ ಪರ ಪದಾರ್ಥಗಳಲ್ಲಿ ಇಷ್ಟಾನಿಷ್ಟತೆಯ ಮನ್ನಣೆ ಮಾಡುವುದು ಅದು ಅನಂತಾನು ಬಂಧೀ ಕ್ರೋಧ - ಮಾನ, ಮಾಯೆ ಮತ್ತು ಲೋಭವಿದೆ. ಇವುಗಳಲ್ಲಿ ಕ್ರೋಧ ಮತ್ತು ಮಾನ ಇವೆರಡು ದ್ವೇಷರೂಪವಿದ್ದರೆ ಮಾಯೆ ಮತ್ತು ಲೋಭ ಇವೆರಡು ರಾಗರೂಪವಿವೆ. ಮಿಥ್ಯಾದೃಷ್ಟಿ ಜೀವನು ಪರಪದಾರ್ಥಗಳಲ್ಲಿ ಅಹಂಕಾರ ಮತ್ತು ಮಮಕಾರ ಮಾಡುತ್ತಾನೆ ಎಂದರೆ ಇವು ನಾನಿದ್ದೇನೆ ಮತ್ತು ಇವು ನನ್ನವಿವೆಯೆಂದು ಮಿಥ್ಯಾತ್ವದ ಸೇವನೆ ಮಾಡುತ್ತಾನೆ. ಇಂದ್ರಿಯ ಸುಖವನ್ನು ನಿಜವಾದ ಸುಖವೆಂದು ತಿಳಿದುಕೊಳ್ಳುತ್ತಾನೆ. ಇಂಥ ತಿಳಿವಳಿಕೆಯೇ ಮಿಥ್ಯಾ ಬುದ್ಧಿಯಿದೆ.

ಮಿಥ್ಯಾದೃಷ್ಟಿ ಜೀವನು ತನಗೆ ರುಚಿಸುವಂಥ ಪದಾರ್ಥಗಳಲ್ಲಿ ಮತ್ತು ಅವುಗಳಲ್ಲಿ ಸಹಾಯಕವಾದ ಪದಾರ್ಥಗಳಲ್ಲಿ ಪ್ರೀತಿ ಮಾಡುತ್ತಾನೆ. ಇನ್ನು ತನಗೆ ರುಚಿಸದಂಥ ಪದಾರ್ಥಗಳಲ್ಲಿ ಮತ್ತು ಅವುಗಳಲ್ಲಿ ಸಹಾಯಕವಾದ ಪದಾರ್ಥಗಳಲ್ಲಿ ದ್ವೇಷ ಮಾಡುತ್ತಾನೆಂದು ಪಂ.ಟೋಡರಮಲ್ಲರು ಮೋಕ್ಷಮಾರ್ಗಪ್ರಕಾಶಕದಲ್ಲಿ ಹೇಳಿದ್ದಾರೆ. ಮತ್ತು ಭಗವಂತರು ಹೇಳುವುದೇನೆಂದರೆ ಎಲೈ ಜೀವನೇ ! ನೀನು ಇಂಥ ಅನಂತಾನುಬಂಧೀ ಕಷಾಯ ಹಾಗೂ ಮಿಥ್ಯಾತ್ವದ ತ್ಯಾಗ ಮಾಡಿ ಸ್ವರೂಪದ ಶ್ರದ್ಧೆ ಮಾಡು ! ಅದರಿಂದ ಶೀಘ್ರವಾಗಿಯೇ ನಿರ್ವಾಣದ ಪ್ರಾಪ್ತಿಯಾಗುವುದು.

ಜ್ಞಾನಿಗಳು ರಾಗ-ದ್ವೇಷ ಇವೆರಡೂ ದೋಷಗಳನ್ನು ತ್ಯಾಗ ಮಾಡಿ, ಜ್ಞಾನ-ದರ್ಶನ ಇವೆರಡೂ ಗುಣಗಳನ್ನು ಗ್ರಹಣ ಮಾಡುತ್ತಾರೆ. ನಾಲ್ಕನೆಯ ಗುಣಸ್ಥಾನದಲ್ಲಿ ಕೂಡ ಸಮ್ಯಕ್‌ದೃಷ್ಟಿಯು ರಾಗ-ದ್ವೇಷಗಳಲ್ಲಿ ಏಕತ್ವ ಬುದ್ಧಿ ಮಾಡುವುದಿಲ್ಲ. ಜ್ಞಾನಿಗಳಿಗೆ ರಾಗ-ದ್ವೇಷಗಳಿರುತ್ತವೆ ನಿಜ; ಆದರೆ ಜ್ಞಾನಿಗಳು ಅವನ್ನು ರೋಗ ಸಮಾನವಾಗಿ ತಿಳಿಯುತ್ತಾರೆ; ಅಹಿತರೂಪವಿವೆಯೆಂದು ಮನ್ನಿಸುತ್ತಾರೆ. ಹಿತರೂಪವಂತೂ ಒಂದು ತನ್ನ ಶುದ್ಧ ಸ್ವರೂಪದ ದೃಷ್ಟಿ ಜ್ಞಾನ ಮತ್ತು ಸ್ಥಿರತೆಯೇ ಇದೆ.

ಅಜ್ಞಾನಿ ಜೀವರುಗಳು ಅನಂತ ಕಾಲದಿಂದ ತಮ್ಮ ಸ್ವರೂಪದ ದೃಷ್ಟಿಯನ್ನೇ ಮಾಡಲಿಲ್ಲ. ಅದಕ್ಕಾಗಿಯೇ ಜ್ಞಾನಿಗಳು ಅವರಿಗೆ ಹೇಳುತ್ತಾರೆ - ಮೊದಲು ನೀನು ನಿನ್ನ ಅತೀಂದ್ರಿಯ ಆನಂದ ಸ್ವರೂಪನಾದ ಆತ್ಮನ ಶ್ರದ್ಧೆ ಮತ್ತು ಜ್ಞಾನ ಮಾಡಿಕೊಳ್ಳು. ಆ ನಿನ್ನ ಸ್ವರೂಪವಲ್ಲದಂಥ ರಾಗ - ದ್ವೇಷಗಳಲ್ಲಿನ ಏಕತೆಯ ಶ್ರದ್ಧೆಯನ್ನು ಬಿಟ್ಟುಕೊಡು !

ಪ್ರತಿಯೊಬ್ಬ ಆತ್ಮನು ಸೂರ್ಯನ ಸಮಾನವಾಗಿ ಸ್ವ-ಪರ ಪ್ರಕಾಶಕ ಸಾಮರ್ಥ್ಯವುಳ್ಳವನಿದ್ದಾನೆ. ತನ್ನನ್ನು ತಾನು ತಿಳಿದುಕೊಳ್ಳುತ್ತಾನೆ. ಇದೇ ಪ್ರಕಾರ ಆತ್ಮನದು ಸರ್ವಜ್ಞತ್ವ ಮತ್ತು ಸರ್ವದರ್ಶಿತ್ವ ಸ್ವಭಾವವಿದೆ. ಇಂಥ ಆತ್ಮನ ಶ್ರದ್ಧೆ-ಜ್ಞಾನ ಮಾಡುವುದು ಇದು ಪ್ರಥಮ ಭೂಮಿಕೆಯಿದೆ.

ಯಾವ ಪ್ರಕಾರ ಸಿದ್ಧ ಭಗವಂತರಲ್ಲಿ ಅತೀಂದ್ರಿಯ ಆನಂದವಿದೆ ಅದೇ ಪ್ರಕಾರ ನನ್ನಲ್ಲಿ ಕೂಡ ಅತೀಂದ್ರಿಯ ಆನಂದವಿದೆ. ಅದರ ಅನುಭವ ಮಾಡಿಕೊಳ್ಳುವುದೇ ನನ್ನ ನಿಜವಾದ ಕರ್ತವ್ಯವಿದೆ. ಮತ್ತು ಇದುವೇ ನನ್ನ ಭೋಜನವಿದೆಯೆಂದು ಮೊದಲು ಶ್ರದ್ಧೆಯಲ್ಲಿ ತಂದುಕೊಳ್ಳು. ತನ್ನ ಸತ್ತಾದ ಭೂಮಿಯಲ್ಲಿಯೇ ಕರ್ತಾ-ಭೋಕ್ತಾತನವಿದೆ. ಪರಸತ್ತಾದಲ್ಲಿ ಇರುವಂಥ ಪದಾರ್ಥಗಳ ಕರ್ತೃ-ಭೋಕ್ತೃವು ಆತ್ಮನಿಲ್ಲ.

ಪ್ರಶ್ನೆ :- ಆತ್ಮನು ಪರವನ್ನು ಭೋಗಿಸುತ್ತಾನೆಂದು ಭ.ಕುಂದಕುಂದಾಚಾರ್ಯದೇವರು ಹೇಳಿದ್ದಾರಲ್ಲವೇ ?

ಉತ್ತರ :- ಅದಂತೂ ನಿಮಿತ್ತದ ಕಥನವಿದೆ. ವಾಸ್ತವದಲ್ಲಿ ಆತ್ಮನು ಪರವನ್ನು ಭೋಗಿಸುವುದೇ ಇಲ್ಲ. ಆತ್ಮನು ಪರರೂಪವಾದಲ್ಲದೆ ಪರವನ್ನು ಹೇಗೆ ಮಾಡುವನು ಮತ್ತು ಹೇಗೆ ಭೋಗಿಸುವನು ? ಕುಂಭಕಾರನು ಕೊಡದ ಕರ್ತೃವಿಲ್ಲ, ಆದರೆ ಮೃತ್ತಿಕೆಯೇ ಕೊಡವನ್ನು ಮಾಡುತ್ತದೆಯೆಂದು ಸ್ವಯಂ ಭ.ಕುಂದಕುಂದಾಚಾರ್ಯದೇವರು ಹೇಳುತ್ತಾರೆ. ಎಂದರೆ ವಸ್ತುವು ಸ್ವಯಂ ಸ್ವತಂತ್ರತೆಯಿಂದ ಪರಿಣಮಿಸುತ್ತದೆ; ಅದನ್ನು ಬೇರೆ ಯಾರೂ ಮಾಡುವ ಅಥವಾ ಭೋಗಿಸುವ ಸಾಧ್ಯತೆಯಿಲ್ಲ. ಅಜ್ಞಾನದ ಅವಸ್ಥೆಯಲ್ಲಿ ಜೀವವು ರಾಗ-ದ್ವೇಷಗಳನ್ನು ಮಾಡುತ್ತದೆ. ಹಾಗೂ

ಭೋಗಿಸುತ್ತದೆ ಮತ್ತು ಜ್ಞಾನದ ದಶೆಯಲ್ಲಿ ಜೀವನು ದರ್ಶನ-ಜ್ಞಾನ-ಚಾರಿತ್ರಗಳನ್ನು ಮಾಡುತ್ತಾನೆ. ಮತ್ತು ಅವನ್ನು ಭೋಗಿಸುತ್ತಾನೆ. ಪರ ಪದಾರ್ಥಗಳನ್ನು ಆತ್ಮನು ಅಜ್ಞಾನದ ದಶೆಯಲ್ಲಿ ಕೂಡ ಭೋಗಿಸುವ ಸಾಧ್ಯತೆಯಿಲ್ಲ, ಅಯ್ಯಾ ಸೋದರನೇ! ಜಗತ್ತಿನ ಪದಾರ್ಥಗಳು ತಮ್ಮ ವರ್ತಮಾನ ಅವಸ್ಥೆಯ ರೂಪವಾಗಿ ಪರಿಣಮಿಸುತ್ತಲಿವೆ. ಮತ್ತು ಮೊದಲಿನ ಅವಸ್ಥೆಯಿಂದ ಬದಲಾಗುತ್ತಿವೆ ಅದರಲ್ಲಿ ನೀನು ಮಾಡುವ ಅಥವಾ ಭೋಗಿಸುವುದೆಲ್ಲಿ ಬರುತ್ತದೆ.

ಪ್ರತಿಯೊಂದು ಜೀವವು ಸ್ವರೂಪದಿಂದ ಪರಮಾತ್ಮವಿದೆ. ನಾನು ಅತೀಂದ್ರಿಯ ಪೂರ್ಣ ಆನಂದ ಸ್ವರೂಪದ ಪ್ರಭು ಇದ್ದೇನೆಂದು ಪುನಃ ಪುನಃ ಭಾವನೆ ಮಾಡುವುದು ಎಂದರೆ ಸ್ವರೂಪದಲ್ಲಿ ಏಕಾಗ್ರತೆ ಮಾಡುವುದರಿಂದ ಸಮ್ಯಗ್ದರ್ಶನ-ಜ್ಞಾನ-ಚಾರಿತ್ರಗಳು ಪ್ರಕಟವಾಗುತ್ತವೆ. ಮತ್ತು ಮಿಥ್ಯಾತ್ವ ಹಾಗೂ ಅನಂತಾನುಬಂಧೀ ಕಷಾಯಗಳು ಮುರಿದು ಬೀಳುತ್ತವೆ. ಆಗ ಜೀವನು ನಿರ್ವಾಣ ಪದವನ್ನು ಪ್ರಾಪ್ತಮಾಡಿಕೊಳ್ಳಲು ಯೋಗ್ಯನಾಗುತ್ತಾನೆ.

ಈಗ ಮೂರರ ತ್ಯಾಗ ಮಾಡಿ ಮೂರು ಗುಣಗಳ ವಿಚಾರ ಮಾಡಬೇಕೆಂದು ಹೇಳುತ್ತಾರೆ, -

ತಿಹಿಂ ರಹಿಯಉ ತಿಹಿಂ ಗುಣ-ಸಹಿಉ ಜೋ ಅಪ್ಪಾಣಿ ವಸೇಇ
ಸೋ ಸಾಸಯ-ಸುಹ-ಭಾಯಣು ವಿ ಜಿಣವರು ಏಮ ಭಣೇಇ ॥78॥

ಮೂರು ರಹಿತ ಮೂರುಗುಣಸಹ ಆತ್ಮನೊಳಗೆ ಲೀನವಾದರೆ
ಚಿರಸುಖವನು ತಾ ಪಡೆವನೆಂದು ಸಕಲ ಜಿನವರ ಪೇಳ್ವರು ॥78॥

ಅರ್ಥ :- ರಾಗ-ದ್ವೇಷ-ಮೋಹ ಈ ಮೂರರಿಂದ ರಹಿತನಾದ ಸಮ್ಯಗ್ದರ್ಶನ - ಜ್ಞಾನ - ಚಾರಿತ್ರ ಈ ಮೂರು ಗುಣಗಳಿಂದ ಸಹಿತನಾದ ಆತ್ಮನಲ್ಲಿ ಯಾರು ನಿವಾಸ ಮಾಡುತ್ತಾರೆ ಅವರು ಅವಿನಾಶಿಯಾದ ಸುಖದ ಭಾಜನರಾಗುತ್ತಾರೆಂದು ಶ್ರೀಜಿನೇಂದ್ರ ದೇವರು ಹೇಳುತ್ತಾರೆ.

ಯಾವ ಜೀವರುಗಳು ಮೋಹ - ರಾಗ - ದ್ವೇಷ ಈ ಮೂರು ದೋಷಗಳ ತ್ಯಾಗ ಮಾಡಿ ಸಮ್ಯಗ್ದರ್ಶನ-ಜ್ಞಾನ-ಚಾರಿತ್ರ ಈ ಮೂರು ಗುಣಗಳ ಮೂಲಕ ಆತ್ಮನಲ್ಲಿ ಸ್ಥಿರರಾಗುತ್ತಾರೆ ಅವರು ಅವಿನಾಶಿ ಸುಖದ ಭಾಜನರಾಗುತ್ತಾರೆಂದು ಶ್ರೀ ಜಿನೇಂದ್ರದೇವರು ದಿವ್ಯ ಧ್ವನಿಯಲ್ಲಿ ಹೇಳಿದ್ದಾರೆ. ಮತ್ತು ಅದನ್ನು ಸಂತರು ಜಗತ್ತಿನ ಎದುರು ಪ್ರಸಿದ್ಧ ಮಾಡಿದ್ದಾರೆ.

ಯಾರಿಗೆ ಪರಮಾನಂದ ಸ್ವರೂಪನಾದ ತನ್ನ ಆತ್ಮನ ಪ್ರಾಪ್ತಿಯ ಅಪೇಕ್ಷೆಯಿದೆ ಅವರು ರಾಗ - ದ್ವೇಷ - ಮೋಹ ಈ ಮೂರು ದೋಷಗಳನ್ನು ಬಿಟ್ಟುಕೊಟ್ಟು ಶ್ರದ್ಧೆ - ಜ್ಞಾನ - ಚಾರಿತ್ರರೂಪವಾದ ರತ್ನತ್ರಯದ ಮೂಲಕ ಆತ್ಮನಲ್ಲಿ ಸ್ಥಿರವಾಗುವುದೇ ಅದರ ಉಪಾಯವಿದೆ. ಆದರೆ ಜೀವನು ಅನಾದಿಯಿಂದ ತನ್ನ ಸ್ವರೂಪವನ್ನು ನೋಡಬೇಕಾಗಿರುವ ಕಣ್ಣುಗಳನ್ನೇ ಮುಚ್ಚಿಬಿಟ್ಟಿದ್ದಾನೆ, ಮತ್ತು ಪರ ಪದಾರ್ಥಗಳನ್ನೇ ನೋಡುತ್ತಲಿದ್ದಾನೆ. ತಮ್ಮ ಸ್ವರೂಪದ ಪ್ರಾಪ್ತಿಯ ಭಾವನೆಯುಳ್ಳ ಜೀವರುಗಳು ತಮ್ಮ ಸ್ವರೂಪದ ದೃಷ್ಟಿ, ಜ್ಞಾನ, ಶ್ರದ್ಧೆ ಮಾಡಬೇಕಾಗುವುದು ಮತ್ತು ಸ್ವರೂಪದಲ್ಲಿ ಲೀನತೆ ಮಾಡಬೇಕಾಗುವುದು. ಹೀಗೆ ಮಾಡುವುದರಿಂದ ಜೀವರುಗಳು ಮುಕ್ತಿಯ ಸಮೀಪ ತಲುಪುತ್ತಾರೆ ಎಂದರೆ ಅಲ್ಪಕಾಲದಲ್ಲಿ ಅವರಿಗೆ ಶಾಶ್ವತ ಸುಖದ ಪ್ರಾಪ್ತಿಯಾಗುತ್ತದೆ.

ಪ್ರಶ್ನೆ :- ಪ್ರಭು ! ಈ ಜ್ಞಾನ ನೇತ್ರಗಳನ್ನು ಯಾರು ತೆರೆಯುವರು ?

ಉತ್ತರ :- ತಮ್ಮ ಜ್ಞಾನ ನೇತ್ರಗಳನ್ನು ತಾವೇ ತೆರೆಯಬೇಕು. ಅವನ್ನು ಗುರುಗಳು ತೆರೆಯುವುದಿಲ್ಲ, ಗುರುಗಳು ಅವರು ತಮ್ಮ ಜ್ಞಾನ ನೇತ್ರಗಳನ್ನು ತೆರೆಯುತ್ತಾರೆ ಮತ್ತು ಶಿಷ್ಯರ ಜ್ಞಾನ ನೇತ್ರಗಳು ತೆರೆಯುವಲ್ಲಿ ಗುರುಗಳ ವಾಣಿಯು ನಿಮಿತ್ತವಾಗುತ್ತದೆ. ಆದರೆ ಗುರುಗಳೇನು ಶಿಷ್ಯರ ಕಣ್ಣುಗಳನ್ನು ತೆರೆಯುವುದಿಲ್ಲ, ಉಪಾದಾನವಂತೂ ತಮ್ಮದೇ ಇದೆ. ಶ್ರೀಮದ್ ರಾಯಚಂದರು ಹೀಗೆ ಹೇಳುತ್ತಾರೆ, -

ಶುದ್ಧ ಬುದ್ಧ ಚೈತನ್ಯಘನ ಸ್ವಯಂ ಜ್ಯೋತಿ ಸುಖಧಾಮ ।
ಬೀಜೂ ಕಹಿಯೇ ಕೇಟಲು ಕರ ವಿಚಾರ ತೋ ಪಾಮ ॥

ಪ್ರಭು ನೀನು ವಿಚಾರ ಮಾಡಿದರೆ ಪಡೆಯಬಹುದಾಗಿದೆಯೆಂದು ಹೇಳಿದ್ದಾರೆ. ಗುರುಗಳು ಶಿಷ್ಯನಿಗೆ ಜ್ಞಾನ ಕೊಡುವುದಿಲ್ಲ. 'ತಾನೇ ತನ್ನ ಗುರು ಇದ್ದಾನೆಂ'ದು ಇಷ್ಟೋಪದೇಶದಲ್ಲಿ ಆಚಾರ್ಯ ಪೂಜ್ಯಪಾದರು ಹೇಳುತ್ತಾರೆ. ತಾನೇ ತಿಳಿದುಕೊಳ್ಳುವವನಿದ್ದಾನೆ. ಆತ್ಮನು ತನ್ನ ಹಿತ ಬಯಸುತ್ತಾನೆ, ಆ ಹಿತವನ್ನು ತಿಳಿಸಿಕೊಡುವ ಮತ್ತು ಹಿತ ರೂಪವಾಗಿ ಸ್ವಯಂ ಪ್ರವರ್ತನೆ ಮಾಡುವವರು ಅವರು ಗುರುಗಳಿದ್ದಾರೆ, ಈ ಪ್ರಕಾರ ನಿಶ್ಚಯ ಗುರುಗಳ ಸ್ವರೂಪವಿದೆ.

ಯಾರಿಗೆ ನಿಶ್ಚಯ ಗುರುತನವು ಪ್ರಕಟವಾಗಿದೆ ಅವರು ವ್ಯವಹಾರ ಗುರುವಿನ ಉಪಕಾರ ಮನ್ನಿಸುತ್ತಾರೆ. ಮುನಿರಾಜರುಗಳು ಕೂಡ ನಮ್ಮ ಗುರುಗಳ ಪ್ರತಾಪದಿಂದ ನಾವು ಭವಸಾಗರ ದಾಟಿದೆವೆಂದು ಹೇಳುತ್ತಾರೆ. ಶ್ರೀ ನೇಮಿಚಂದ ಸಿದ್ಧಾಂತಚಕ್ರವರ್ತಿಗಳು ಕೂಡ ಗೊಮ್ಮಟಸಾರದಲ್ಲಿ ಇದನ್ನೇ ಹೇಳಿದ್ದಾರೆ. ಭ. ಕುಂದಕುಂದಾ ಚಾರ್ಯದೇವರು ಕೂಡ ಸರ್ವಜ್ಞ ಭಗವಂತರಿಂದ ಹಿಡಿದು ನಮ್ಮ ಗುರುಗಳವರೆಗೆ ಎಲ್ಲರೂ ಕೃಪೆ ಮಾಡಿ ನಮಗೆ ಈ ಶುದ್ಧಾತ್ಮನ ಸ್ವರೂಪವನ್ನು ತಿಳಿಸಿಕೊಟ್ಟು ಅದರಲ್ಲಿಯೇ ನಿಮಗ್ನವಾಗುವ ಉಪದೇಶ ಕೊಟ್ಟಿದ್ದಾರೆಂದು ಹೇಳುತ್ತಾರೆ.

ನಾನು ವರ್ತಮಾನದಲ್ಲಿಯೇ ಎಂಟು ಕರ್ಮಗಳಿಂದ ರಹಿತ, ಪುಣ್ಯ-ಪಾಪದ ವಿಕಾರಗಳಿಂದ ರಹಿತ ಮತ್ತು ಶರೀರ ಮೊದಲಾದ ನೋಕರ್ಮಗಳಿಂದ ಕೂಡ ರಹಿತನಾದ ಪೂರ್ಣ ಪರಮಾತ್ಮನಿದ್ದೇನೆಂದು ಜ್ಞಾನಿಗಳು ತಮ್ಮ ದೃಷ್ಟಿಯಲ್ಲಿ ಸ್ವೀಕಾರ ಮಾಡಿರುತ್ತಾರೆ. ದೃಷ್ಟಿಯ ಈ ಪ್ರಕಾರದ ಸಾಮರ್ಥ್ಯವು ಆತ್ಮನೊಳಗಿಂದಲೇ ಬರುತ್ತದೆ; ಜ್ಞಾನಿಗಳ ದೃಷ್ಟಿಯು ದ್ರವ್ಯ ಸ್ವಭಾವವನ್ನು ಹೊರತುಪಡಿಸಿ ಬೇರಾವುದನ್ನು ಸ್ವೀಕರಿಸುವುದೇ ಇಲ್ಲ. ವರ್ತಮಾನ ಅವಸ್ಥೆಯು ರಾಗಮಯ ಮತ್ತು ಕರ್ಮದ ನಿಮಿತ್ತವಿದ್ದರು ಕೂಡ ಅದರಿಂದ ಭೇದಜ್ಞಾನ ಮಾಡಿ ತಮ್ಮ ವೀತರಾಗ ವಿಜ್ಞಾನ ಮಯನಾದ ಆತ್ಮನನ್ನು ಅನುಭವಿಸುತ್ತಾರೆ. ಆ ಪುರುಷಾರ್ಥದ ಬಲವಿಷ್ಟಿರಬೇಕು! ಇಂಥ ಪುರುಷಾರ್ಥಿಜೀವರುಗಳು ಅಲ್ಪಕಾಲದಲ್ಲಿ ಮೋಕ್ಷ ಪಡೆಯುತ್ತಾರೆ.

ವ್ಯವಹಾರದಲ್ಲಿ ಶತ್ರು-ಮಿತ್ರ, ಧನಿಕ-ದರಿದ್ರ, ರಾಜ - ಪ್ರಜೆ, ಗುರು-ಶಿಷ್ಯ, ದೇವ -ನಾರಕಿ, ಪಶು-ಮನುಷ್ಯ, ಸೂಕ್ಷ್ಮ - ಬಾದರ, ಅನಾಥ-ಸನಾಥ ಮೊದಲಾದ ಅನೇಕ ಪ್ರಕಾರದ ಭೇದಗಳನ್ನು ಹೇಳುತ್ತಾರೆ., ಅವುಗಳಲ್ಲಿ ಸಂಸಾರದ ಲೋಲುಪತೆಯುಳ್ಳ ಜೀವರುಗಳು ಇಷ್ಟಾನಿಷ್ಟದ ಬುದ್ಧಿ ಮಾಡಿ ರಾಗ - ದ್ವೇಷಗಳನ್ನು ಮಾಡುತ್ತಾರೆ. ಹೀಗೆ ವ್ಯವಹಾರ ನಯದಿಂದ ಜಗತ್ತಿನ ಸ್ವರೂಪವು ರಾಗ - ದ್ವೇಷಗಳಾಗುವಲ್ಲಿ ನಿಮಿತ್ತವಾಗುತ್ತದೆ. ಆದುದರಿಂದ ಜ್ಞಾನಿಗಳು ನಿಶ್ಚಯ ದೃಷ್ಟಿಯಿಂದಲೇ ಜಗತ್ತಿನ ಸ್ವರೂಪವನ್ನು ನೋಡುತ್ತಾರೆ. ನಿಶ್ಚಯ ದೃಷ್ಟಿಯಿಂದ ಸಮಸ್ತ ಜೀವರುಗಳು ಏಕ ಪ್ರಕಾರದ ಪರಮಾತ್ಮರಿದ್ದಾರೆ. ಭಗವಾನ ಆತ್ಮನ ಸ್ವಭಾವವೇ ತನ್ನನ್ನು ತನ್ನ ರೂಪವಾಗಿ ಮತ್ತು ಪರವನ್ನು ಪರರೂಪವಾಗಿ ತಿಳಿಯುವುದಿದೆ - ನೋಡುವುದಿದೆ.

ರತ್ನತ್ರಯ ಸ್ವರೂಪಿಯಾದ ಆತ್ಮನು ಅಭೇದ ದೃಷ್ಟಿಯಿಂದ ಏಕರೂಪನಿದ್ದಾನೆ. ಶುದ್ಧ ಸ್ಫಟಿಕಮಣಿಯ ಸಮಾನ ನಿರ್ಮಲನಿದ್ದಾನೆ. ಪರಮ ನಿರಂಜನ, ಪರಮಜ್ಞಾನಿ, ಪರಮ ಆನಂದಮಯ, ಪರಮ ಪರಮೇಶ್ವರನಿದ್ದಾನೆ. ಹೀಗೆ ಮತ್ತೆ ಮತ್ತೆ ತಮ್ಮ ಆತ್ಮನನ್ನು ಧ್ಯಾನಿಸುವುದರಿಂದ ಸ್ವಯಂ ಆತ್ಮಾನುಭವವು ಪ್ರಾಪ್ತವಾಗುತ್ತದೆ. ಅದುವೇ ನಿಜವಾದ ಮೋಕ್ಷಮಾರ್ಗವಿದೆ.

ಧರ್ಮಾತ್ಮನು ತನ್ನ ಸ್ವರೂಪದ ವಿಚಾರ ಹೇಗೆ ಮಾಡುತ್ತಾನೆಂಬುದನ್ನು ಪಂ.ಬನಾರಸೀದಾಸರು ಹೇಳುತ್ತಾರೆ.

ಕಹೇ ವಿಚಕ್ಷಣ ಪುರುಷ ಸದಾ ಮೈ ಏಕ ಹೂ, ಅಪನೇ ರಸ ಸೋ ಭರ್‍ಯೋ ಅನಾದಿ ಟೇಕ ಹೂ
ಮೋಹಕರ್ಮ ಮಮ ನಹೀ ನಹಿಭ್ರಮಕೂಪ ಹೈ, ಶುದ್ಧಚೇತನಸಿಂಧು ಹಮಾರೋ ರೂಪ ಹೈ

ಮೋಹವಂತೂ ಭ್ರಾಂತಿಯ ಬಾವಿಯಿದೆ ಮತ್ತು ಭಗವಾನ ಆತ್ಮನು ಶುದ್ಧ ಚೇತನದ ಸಾಗರನಿದ್ದಾನೆಂದು ದೃಷ್ಟಿಮಾಡುವವನೇ ಸಮ್ಯಕ್ ದೃಷ್ಟಿಯಿದ್ದಾನೆ.

ಈಗ ನಾಲ್ಕರ ತ್ಯಾಗ ಮಾಡಿ ನಾಲ್ಕು ಗುಣಗಳ ವಿಚಾರ ಮಾಡಬೇಕೆಂದು ಹೇಳುತ್ತಾರೆ, -

ಚಉ-ಕಸಾಯ-ಸಣ್ಣಾ-ರಹಿಉ ಚಉ-ಗುಣ-ಸಹಿಯಉ ವುತ್ತು
ಸೋ ಅಪ್ಪಾ ಮುಣಿ ಜೀವ ತುಹು ಜಿಮ ಪರು ಹೋಹಿ ಪವಿತ್ತು ॥79॥

ರಹಿತ ನಾಲ್ಕು ಕಷಾಯ ಸಂಜ್ಞೆ ಸಹಿತ ನಾಲ್ಕು ಗುಣಗಳಿಂದ
ಇಹನು ಅವನು ಆತ್ಮನೆಂದು ತಿಳಿಯೆ ನೀ ಪರಿಶುದ್ಧನಾಗುವೆ ॥79॥

ಅರ್ಥ :- ಆತ್ಮನನ್ನು ಕ್ರೋಧ ಮೊದಲಾದ ನಾಲ್ಕು ಕಷಾಯಗಳಿಂದ ರಹಿತ, ಆಹಾರ-ಭಯ-ಮೈಥುನ-ಪರಿಗ್ರಹವೆಂಬ ನಾಲ್ಕು ಸಂಜ್ಞೆಗಳಿಂದ ರಹಿತ ಮತ್ತು ದರ್ಶನ-ಜ್ಞಾನ-ಸುಖ-ವೀರ್ಯವೆಂಬ ನಾಲ್ಕು ಗುಣಗಳಿಂದ ಸಹಿತನೆಂದು ಹೇಳಲಾಗಿದೆ. ಇಂಥ ಆತ್ಮನನ್ನು ಎಲೈ ಜೀವನೇ ! ನೀನು ಮನನ ಮಾಡು, ಅದರಿಂದ ನೀನು ಪರಮ ಪವಿತ್ರನಾಗುವೆ.

ನನ್ನ ಭಗವಾನ ಆತ್ಮನು ಕ್ರೋಧ,ಮಾನ, ಮಾಯೆ, ಲೋಭವೆಂಬ ನಾಲ್ಕು ಕಷಾಯಗಳಿಂದ ಹಾಗೂ ಆಹಾರ, ಭಯ,ಮೈಥುನ,ಪರಿಗ್ರಹವೆಂಬ ನಾಲ್ಕು ಸಂಜ್ಞೆಗಳಿಂದ ರಹಿತನಿದ್ದಾನೆ ಮತ್ತು ಅನಂತ ದರ್ಶನ, ಅನಂತಜ್ಞಾನ, ಅನಂತ ಸುಖ, ಅನಂತ ವೀರ್ಯವೆಂಬ ನಾಲ್ಕು ಗುಣಗಳಿಂದ ಸಹಿತನಿದ್ದಾನೆಂದು ಎಲೈ ಜೀವನೇ ! ನೀನು ಮನನ ಮಾಡು. ಹೀಗೆ ಮನನ ಮಾಡಿ ಅಂಥ ಸ್ವಭಾವದ ಆಶ್ರಯ ತೆಗೆದುಕೊಂಡರೆ ನೀನು ಪರಮ ಪವಿತ್ರನಾಗುವೆ.

ಈ ಜೀವನು ತನ್ನನ್ನು ತಾನು ಮರೆತು ದುಃಖಿಯಾಗಿದ್ದಾನೆ. ಇವನಿಗೆ ತನ್ನ ಭಗವಾನ ಆತ್ಮನು ಹೇಗಿದ್ದಾನೆಂಬುದನ್ನು ತಿಳಿದುಕೊಳ್ಳುವುದರ ಪ್ರಜ್ಞೆಯೇ ಇಲ್ಲ, ದಯೆ, ದಾನ, ಭಕ್ತಿ, ಪೂಜೆ ಮೊದಲಾದವುಗಳನ್ನು ಮಾಡುತ್ತಾನೆ; ಆದರೆ ಮೊದಲು ನಾನು ಯಾರಿದ್ದೇನೆ, ನನ್ನ ಸ್ವರೂಪವೇನಿದೆಯೆಂಬುದನ್ನು ತಿಳಿದುಕೊಳ್ಳಬೇಕಾಗುವುದು.

ಮಾವಿನ ಮರಕ್ಕೆ ಹಣ್ಣುಗಳು ತಗಲಿದ ಮೇಲೆ ಅವುಗಳ ಭಾರಕ್ಕೆ ಅದು ಮಣಿಯುತ್ತದೆ. ಅದೇ ಪ್ರಕಾರ ನಿನ್ನಲ್ಲಿ ತಪಸ್ಸು ಮತ್ತು ವಿನಯ ಮೊದಲಾದ ಗುಣಗಳು ಪ್ರಕಟವಾಗಿದ್ದರೆ ಸ್ವಾಭಾವಿಕವಾಗಿ ನಮ್ರತೆಯು ಬರಬೇಕಾಗುವುದೆಂದು ಮುನಿರಾಜರು ಜ್ಞಾನಿಗಳಿಗೆ ಹೇಳುತ್ತಾರೆ. ಯಾವ ಪ್ರಕಾರ ರೋಗಿಗಳ ಕುರಿತು ದಯೆಯು ಬರುತ್ತದೆ. ಅದೇ ಪ್ರಕಾರ ಅಪರಾಧಿಗಳ ಕುರಿತು ಕೂಡ ದಯೆ ತರಬೇಕಾಗುವುದು. ಕ್ರೋಧ, ಮಾನ, ಮಾಯೆ, ಲೋಭ ಮೊದಲಾದವುಗಳಿಂದ ಮನಸ್ಸನ್ನು ದೂರವಿಡಬೇಕಾಗುವುದು ಮತ್ತು ಆಹಾರ ಮೊದಲಾದ ನಾಲ್ಕು ಸಂಜ್ಞೆಗಳನ್ನು ಜಯಿಸಬೇಕಾಗುವುದು. ಅದರಂತೆ ಅನಂತ ಜ್ಞಾನ-ದರ್ಶನ-ಸುಖ-ವೀರ್ಯ ರೂಪದ ಅನಂತ ಚತುಷ್ಟಯಗಳಿಂದ ಯುಕ್ತನಾದ ಆತ್ಮನನ್ನು ಧ್ಯಾನಿಸಬೇಕಾಗುವುದು. ಏಕೆಂದರೆ ಯಾರಿಗೆ ನಿರ್ದೋಷ-ಪವಿತ್ರರಾಗಬೇಕಾಗಿದೆ ಅವರು ನಿರ್ದೋಷ - ಪವಿತ್ರನಾದ ಭಗವಾನ ಆತ್ಮನನ್ನು ಧ್ಯಾನಿಸಿದಾಗಲೇ ಪವಿತ್ರರಾಗುವ ಸಾಧ್ಯತೆಯಿದೆ. ಪವಿತ್ರವಾದ ಸ್ವರೂಪವನ್ನು ಧ್ಯಾನಿಸುವುದರಿಂದ ಯಾವ ಸ್ವಾನುಭವವು ಪ್ರಕಟವಾಗುವುದು ಅದರ ಉಗ್ರತೆಯೇ ಶುಕ್ಲಧ್ಯಾನವಿದೆ ಮತ್ತು ಅದರ ಅಲ್ಪನಿರ್ದೋಷತೆಯು ಅದು ಧರ್ಮಧ್ಯಾನವಿದೆ.

ಎಲ್ಲಿ ಮಗರಮಚ್ಛ ಎಂದರೆ ಮಹಾಮತ್ಸ್ಯವಿರುತ್ತದೆ ಅಲ್ಲಿ ಅನ್ಯ ಜೀವಗಳು ಇರುವ ಸಾಧ್ಯತೆಯಿಲ್ಲವೆಂದು ಆತ್ಮಾನುಶಾಸನದಲ್ಲಿ ಹೇಳಿದೆ. ಏಕೆಂದರೆ ಮಹಾಮತ್ಸ್ಯವು ಅವನ್ನು ತಿಂದು ಹಾಕುತ್ತದೆ. ಅದೇ ಪ್ರಕಾರ ಎಲ್ಲಿಯವರೆಗೆ ಗಂಭೀರ ಮತ್ತು ನಿರ್ಮಲವಾದ ಮನಸ್ಸು ರೂಪದ ಸರೋವರದಲ್ಲಿ ಕ್ರೋಧ, ಮಾನ, ಮಾಯೆ, ಲೋಭ ರೂಪದ ಮಹಾಮತ್ಸ್ಯಗಳ ವಾಸವಿರುತ್ತದೆ ಅಲ್ಲಿಯವರೆಗೆ ಗುಣಗಳ ಸಮೂಹವು ಶಂಕಾರಹಿತವಾಗಿ ಇರುವ ಸಾಧ್ಯತೆಯಿಲ್ಲ,

ಆದುದರಿಂದ ಎಲೈ ಜೀವನೇ ! ನೀನು ಸಮತೆ ಮತ್ತು ಇಂದ್ರಿಯ ನಿಗ್ರಹದ ಮೂಲಕ ಆ ನಾಲ್ಕು ಕಷಾಯಗಳನ್ನು ಮತ್ತು ನಾಲ್ಕು ಸಂಜ್ಞೆಗಳನ್ನು ಗೆಲ್ಲುವ ಸಲುವಾಗಿ ಪ್ರಯತ್ನ ಮಾಡು !

ಐದರ ಯುಗಲದಿಂದ ರಹಿತ ಮತ್ತು ದಶಗುಣ ಸಹಿತನಾದ ಆತ್ಮನ ಧ್ಯಾನ ಮಾಡೆಂದು ಈಗ ಹೇಳುತ್ತಾರೆ -

ಬೇ-ಪಂಚಹ ರಹಿಯಉ ಮುಣಹಿ ಬೇ-ಪಂಚಹ ಸಂಜುತ್ತು
ಬೇ-ಪಂಚಹ ಜೋ ಗುಣಸಹಿಉ ಸೋ ಅಪ್ಪಾ ಣಿರು ವುತ್ತು ॥80॥

ರಹಿತ ತಾ ಈರ್ಯೆದರಿಂದ ಸಹಿತ ತಾ ಇರ್ಯೆದರಿಂದ
ಸಹಿತ ಗುಣ ಈರ್ಯೆದರಿಂದ ಪೇಳ್ದರವನನು ಆತ್ಮನೆಂದು ॥80॥

ಅರ್ಥ :- ಎರಡು ಪ್ರಕಾರದ ಐದರಿಂದ ರಹಿತನಾದ ಎಂದರೆ ಐದು ಇಂದ್ರಿಯಗಳನ್ನು ನಿರೋಧ ಮಾಡಿ ಮತ್ತು ಐದು ಅವ್ರತಗಳನ್ನು ತ್ಯಾಗ ಮಾಡಿ, ಎರಡು ಪ್ರಕಾರದ ಐದರಿಂದ ಸಹಿತನಾಗಿ ಎಂದರೆ ಇಂದ್ರಿಯಗಳ ನಿಗ್ರಹರೂಪದ ಸಂಯಮ ಮತ್ತು ಐದು ಮಹಾವ್ರತಗಳಿಂದ ಸಹಿತನಾಗಿ ಆತ್ಮನ ಮನನ ಮಾಡಬೇಕು. ಯಾವನು ಉತ್ತಮ ಕ್ಷಮೆ ಮೊದಲಾದ ಹತ್ತು ಗುಣಗಳಿಂದ ಸಹಿತನಿದ್ದಾನೆ ಮತ್ತು ಅನಂತ ಜ್ಞಾನ ಮೊದಲಾದ ಹತ್ತು ಗುಣಗಳಿಂದ ಸಹಿತನಿದ್ದಾನೆ ಅವನನ್ನು ನಿಶ್ಚಯದಿಂದ ಆತ್ಮನೆಂದು ಹೇಳಲಾಗುತ್ತದೆ.

ಜ್ಞಾಯಕ ಸ್ವಭಾವದ ಧ್ಯಾನ ಮಾಡುವುದೇ ಯಥಾರ್ಥ ಧ್ಯಾನವಿದೆ. ಆದರೆ ಜ್ಞಾನಿಯು ಯಾವಾಗ ಧ್ಯಾನದಲ್ಲಿ ಸ್ಥಿರವಾಗುವ ಸಾಧ್ಯತೆಯಿಲ್ಲ ಆಗ ಭಿನ್ನ ಗುಣಗಳಿಂದ ಆತ್ಮನ ಸ್ವಭಾವದ ವಿಚಾರ ಮಾಡುವುದು ಅದು ವ್ಯವಹಾರವಿದೆ.

ಪಂಚೇಂದ್ರಿಯ ವಿಷಯಗಳಲ್ಲಿ ಮೋಸ ಹೋದ ಮನಸ್ಸು ಎಂದರೆ ಅವುಗಳ ಕಡೆಗೆ ಸಾವಧಾನವಿರುವ ಮನಸ್ಸು ಆತ್ಮನ ಧ್ಯಾನ ಮಾಡುವ ಸಾಧ್ಯತೆಯಿಲ್ಲ, ಅದರಂತೆ ಪಂಚೇಂದ್ರಿಯಗಳಲ್ಲಿ ಸಂತುಷ್ಟವಿರುವ ಮನಸ್ಸು ಅತೀಂದ್ರಿಯ ಆತ್ಮನ ಧ್ಯಾನ ಮಾಡುವ ಸಾಧ್ಯತೆಯಿಲ್ಲ. ಆದುದರಿಂದ ಪಂಚೇಂದ್ರಿಯಗಳನ್ನು ಹಿಡಿತದಲ್ಲಿ ಇಟ್ಟುಕೊಂಡು ಇಂದ್ರಿಯ ವಿಜಯಿಯಾಗಬೇಕಾಗುವುದು. ಮತ್ತು ಪಂಚ ಮಹಾವ್ರತ ಪಾಲಿಸಬೇಕಾಗುವುದು.

ಸಾಧು ಪದದಲ್ಲಿ ಮುನಿರಾಜರು ದ್ರವ್ಯ ಮತ್ತು ಭಾವ ಇವೆರಡೂ ಪರಿಗ್ರಹದಿಂದ ರಹಿತರಿರುತ್ತಾರೆ. ಮುನಿಗಳಿಗೆ ಅಂತರ್ಯದಲ್ಲಿ ರಾಗರಹಿತ ನಿರ್ಗ್ರಂಥ ದಶೆಯಿದ್ದರೆ ಬಾಹ್ಯದಲ್ಲಿ ವಸ್ತ್ರರಹಿತ ನಿರ್ಗ್ರಂಥ ದಶೆಯಿರುತ್ತದೆ. ಇಂಥ ಮುನಿಯಾಗಿ ತನ್ನ ಶುದ್ಧಾತ್ಮನ ಮನನ ಮಾಡಬೇಕಾಗುವುದು. ನಿಜ ಶುದ್ಧಾತ್ಮನ ಮನನ ಮಾಡುವುದೆಂದರೇನೇ ಮುನಿತನವಿದೆ. ಶುದ್ಧಾತ್ಮ ಸ್ವರೂಪದ ಮನನ ಎಂದರೆ ಅದರಲ್ಲಿ ಏಕಾಗ್ರವಾಗುವುದು ಅದು ಮುನಿಯ ಕರ್ತವ್ಯವಿದೆ. ಗ್ರಹಸ್ಥಾಶ್ರಮದಲ್ಲಿ ಕೂಡ ತನ್ನ ಶುದ್ಧಾತ್ಮನಲ್ಲಿ ಆಂಶಿಕ ಏಕಾಗ್ರತೆ ಮಾಡಿ ನಿರ್ಮಲತೆಯನ್ನು ಪ್ರಕಟಪಡಿಸುವವನನ್ನು ಸಮ್ಯಕ್‌ದೃಷ್ಟಿ ಅಥವಾ ಶ್ರಾವಕನೆಂದು ಹೇಳಲಾಗುತ್ತದೆ.

ಜ್ಞಾನಿಗಳು ಹತ್ತು ಗುಣಗಳಿಂದ ಆತ್ಮನ ವಿಚಾರ ಮಾಡುತ್ತಾರೆ - ಭೇದ ದೃಷ್ಟಿಯಿಂದ ಆತ್ಮನ ಮನನ ಮಾಡುತ್ತಾರೆ. ಈ ಆತ್ಮನು ಕ್ರೋಧರೂಪದ ವಿಕಾರದಿಂದ ರಹಿತ ಪೃಥ್ವಿಯ ಸಮಾನ ಕ್ಷಮಾಗುಣಧಾರಿಯಿದ್ದಾನೆ. ಶಾಸ್ತ್ರಗಳಲ್ಲಿ ಕ್ಷಮಾ ಗುಣದ ಕಥನ ಮಾಡುವಾಗ ಅದಕ್ಕೆ ಪೃಥ್ವಿಯ ಉಪಮೆ ಕೊಡಲಾಗುತ್ತದೆ. ಯಾವ ಪ್ರಕಾರ ಪೃಥ್ವಿಯನ್ನು ಯಾರಾದರೂ ಅಗೆಯಲಿ, ಹೊಡೆಯಲಿ, ಸುಡಲಿ, ಅದರ ಮೇಲೆ ವಿಷ್ಟಾ ಮೊದಲಾದ ಮಲಿನ ಪದಾರ್ಥಗಳನ್ನು ಎಸೆದರು ಕೂಡ ಪೃಥ್ವಿಯು ಕ್ರೋಧಮಾಡುವುದಿಲ್ಲ, ಅದೇ ಪ್ರಕಾರ ಕ್ಷಮಾಗುಣದ ಭಂಡಾರನಾದಂಥ ಭಗವಾನ ಆತ್ಮನು ಕ್ರೋಧ ಮಾಡುವುದಿಲ್ಲ, ಅವನು ಕೇವಲ ಜ್ಞಾತಾ-ದೃಷ್ಟಾನಾಗಿಯೇ ಇರುತ್ತಾನೆ.

ಆತ್ಮನು ಮಾರ್ದವ ಧರ್ಮಧಾರಿಯಿದ್ದಾನೆ ಎಂದರೆ ನಿರ್ಮಾನತೆಯ-ಕೋಮಲತೆಯ ಪಿಂಡನಿದ್ದಾನೆ. ಮಾಯೆಯ ಅಭಾವದಿಂದ ಆತ್ಮನು ಉತ್ತಮ ಆರ್ಜವ ಧರ್ಮಧಾರಿಯಾದ ಸರಳ ಪರಮಾತ್ಮನಿದ್ದಾನೆ. ಮಹಾ ಸತ್ಯ

ಸ್ವರೂಪವನ್ನು ಧಾರಣ ಮಾಡುವಂಥವನಿದ್ದಾನೆ. ಲೋಭದ ಅಭಾವದಲ್ಲಿ ಆತ್ಮನು ಉತ್ತಮ ಶೌಚಧರ್ಮಧಾರಿಯಿದ್ದಾನೆ, ಪವಿತ್ರನಿದ್ದಾನೆ, ಸಂತೋಷ ಸ್ವರೂಪನಿದ್ದಾನೆ. ಇಂಥ ಆತ್ಮಸ್ವರೂಪದ ದೃಷ್ಟಿ ಮಾಡಿ ಅದರಲ್ಲಿ ಸ್ಥಿರವಾಗುವುದೇ ನಿಜವಾಗಿ ಆತ್ಮನ ಕಲ್ಯಾಣದ ಉಪಾಯವಿದೆ.

ಆತ್ಮನು ಸಂಯಮಧರ್ಮಧಾರಿಯಿದ್ದಾನೆ, ಅವನಲ್ಲಿ ಅಸಂಯಮದ ಅಭಾವವಿದೆ. ಸಮಸ್ತ ಇಚ್ಛೆಗಳ ಅಭಾವ ಸ್ವರೂಪವಾದ ವೀತರಾಗ ಸ್ವರೂಪದಲ್ಲಿ - ಶುದ್ಧತೆಯಲ್ಲಿ ಏಕಾಕಾರವಾಗಿ ತಪಿಸುವುದು ಎಂದರೆ ಅದರಲ್ಲಿಯೇ ಪ್ರತಪನ ಮಾಡುವುದು ಅದು ಉತ್ತಮ ತಪ ಧರ್ಮವಿದೆ. ಬಾಹ್ಯದಲ್ಲಿನ ತಪವಂತೂ ಅದು ವ್ಯವಹಾರವಿದೆ. ಆತ್ಮನಂತೂ ತ್ರಿಕಾಲ ಪರಮತಪಸ್ವಿಯಿದ್ದಾನೆ, ಅವನ ಧ್ಯಾನ ಮಾಡುವುದು ಅದು ಉತ್ತಮ ತಪವಿದೆ.

ಜನರಿಗೆ ತ್ಯಾಗದ ಮಹಿಮೆಯು ಅತಿಶಯವಾಗಿ ಬರುತ್ತದೆ. ಬಾಹ್ಯ ವಸ್ತುಗಳ ತ್ಯಾಗ ಮಾಡುವುದು ಅಥವಾ ಶಾಸ್ತ್ರ ಔಷಧ ಮೊದಲಾದವುಗಳ ದಾನ ಕೊಡುವುದು ಅದೇನು ಉತ್ತಮ ತ್ಯಾಗವಲ್ಲ. ವಾಸ್ತವಿಕ ತ್ಯಾಗ ಧರ್ಮವಂತೂ ಶುದ್ಧ ಸ್ವರೂಪದಲ್ಲಿ ಏಕಾಗ್ರವಾಗಿ ಪರ್ಯಾಯದಲ್ಲಿ ಶುದ್ಧತೆಯನ್ನು ಪ್ರಕಟಮಾಡುವುದು. ಮತ್ತು ಅಶುದ್ಧತೆಯ ತ್ಯಾಗ ಮಾಡುವುದು ಅದು ಉತ್ತಮ ತ್ಯಾಗ ಧರ್ಮವಿದೆ.

ನನ್ನ ಸ್ವರೂಪದಲ್ಲಿ ಅನ್ಯ ಆತ್ಮರುಗಳ ಹಾಗೂ ಪುದ್ಗಲ, ಧರ್ಮ, ಅಧರ್ಮ, ಆಕಾಶ, ಕಾಲಗಳ ಅಭಾವವಿದೆ. ರಾಗ, ಶರೀರ, ಮನಸ್ಸು, ವಾಣಿ ಮೊದಲಾದವು ನನ್ನವಲ್ಲವೆಂದು ಅಂತರ್ಯದಲ್ಲಿ ಭಾವನೆ ಮಾಡುವುದರ ಹೆಸರು ಆಕಿಂಚನಧರ್ಮವಿದೆ. ಆತ್ಮನು ತ್ರಿಕಾಲ ಅಪರಿಗ್ರಹಿಯಿದ್ದಾನೆ. ಅವನ ಧ್ಯಾನಮಾಡಿ ಪರ್ಯಾಯದಲ್ಲಿ ಅಪರಿಗ್ರಹ ದಶೆ ಪ್ರಾಪ್ತಮಾಡುವುದು ಅದು ನಿಜವಾದ ಆಕಿಂಚನಧರ್ಮವಿದೆ. ಆತ್ಮನು ಪರಮ ಅಸಂಗನಿದ್ದಾನೆ ಅವನಿಗೆ ಯಾವುದರ ಸಂಗವಿಲ್ಲ.

ಈ ಆತ್ಮನು ಉತ್ತಮ ಬ್ರಹ್ಮಚರ್ಯಗುಣಧಾರಿಯಿದ್ದಾನೆ. ನಿರಂತರ ತನ್ನ ಬ್ರಹ್ಮಭಾವದಲ್ಲಿ ಲೀನನಿರುತ್ತಾನೆ. ಉತ್ತಮ ಬ್ರಹ್ಮ ರೂಪವಾಗಿಯಂತೂ ಆತ್ಮನು ಅನಾದಿ-ಅನಂತನಿದ್ದಾನೆ. ಅವನಲ್ಲಿ ಲೀನವಾಗುವುದು ಅದು ಉತ್ತಮ ಬ್ರಹ್ಮಚರ್ಯ ಧರ್ಮವಿದೆ ಮತ್ತು ದೇಹದಿಂದ ಬ್ರಹ್ಮಚರ್ಯ ಪಾಲಿಸುವುದು ಅದು ವ್ಯವಹಾರ ಬ್ರಹ್ಮಚರ್ಯವಿದೆ.

ಎಲೈ ಜೀವನೇ ! ನೀನು ಈ ಪ್ರಕಾರ ದಶಲಕ್ಷಣ ಧರ್ಮದಿಂದ ನಿನ್ನ ಸ್ವರೂಪದ ವಿಚಾರ ಮಾಡು ಅಥವಾ ಬೇರೆ ಹತ್ತು ಗುಣಗಳಿಂದ ನಿನ್ನ ಸ್ವರೂಪದ ವಿಚಾರ ಮಾಡು !

ಆತ್ಮನು ಅನಂತ ಜ್ಞಾನ,ಅನಂತ ದರ್ಶನ, ಕ್ಷಾಯಿಕ ಸಮ್ಯಕ್ತ್ವ, ಕ್ಷಾಯಿಕ ಚಾರಿತ್ರ, ಅನಂತ ದಾನ, ಅನಂತ ಲಾಭ, ಅನಂತ ಭೋಗ, ಅನಂತ ಉಪಭೋಗ, ಅನಂತ ವೀರ್ಯ ಮತ್ತು ಅನಂತ ಸುಖವೆಂದು ಹತ್ತು ವಿಶೇಷಣಗಳಿಂದ ಸಹಿತನಿದ್ದಾನೆ; ಪರಮಾತ್ಮ ಸ್ವರೂಪನಿದ್ದಾನೆ.

ಒಂದೊಂದು ಗುಣದ ವ್ಯಾಖ್ಯೆ ಮಾಡುತ್ತ ಆತ್ಮನು ಸರ್ವಜ್ಞ ಮತ್ತು ಸರ್ವದರ್ಶಿಯಿದ್ದರು ಕೂಡ ಆತ್ಮಜ್ಞ ಮತ್ತು ಆತ್ಮದರ್ಶಿಯಿದ್ದಾನೆಂದು ಭೇದದಿಂದ ವಿಚಾರ ಮಾಡಬೇಕೆಂದು ಮುನಿರಾಜರು ಹೇಳುತ್ತಾರೆ. ಆತ್ಮನು ಎಲ್ಲವನ್ನು ತಿಳಿಯುವಂಥವ - ನೋಡುವಂಥವನಿದ್ದರೂ ಅವನು ಆತ್ಮಜ್ಞ ಮತ್ತು ಆತ್ಮದರ್ಶಿಯಿದ್ದಾನೆ. ಆತ್ಮಜ್ಞನೇ ಸರ್ವಜ್ಞನಿದ್ದಾನೆ ಮತ್ತು ಸರ್ವಜ್ಞನೇ ಆತ್ಮಜ್ಞನಿದ್ದಾನೆ. ಇನ್ನು ಸರ್ವಜ್ಞವೆಂದು ಹೇಳುವುದರಲ್ಲಿ ಪರವನ್ನು ತಿಳಿದುಕೊಳ್ಳುವಿಕೆಯು ಬಂದು ಬಿಟ್ಟತೆಂಬುದಾಗಿಲ್ಲ ; ಆದರೆ ಸರ್ವಜ್ಞತೆಯು ಇದು ಆತ್ಮನ ಸ್ವಭಾವವೇ ಇದೆ. ಜ್ಞೇಯಗಳ ಅಪೇಕ್ಷೆಯಿಂದ ಅವನನ್ನು ಸರ್ವಜ್ಞವೆಂದು ಹೇಳಲಾಗುತ್ತದೆ ಮತ್ತು ತನ್ನ ಅಪೇಕ್ಷೆಯಿಂದ ಅವನನ್ನೇ ಆತ್ಮಜ್ಞವೆಂದು ಹೇಳಲಾಗುತ್ತದೆ.

ಶುದ್ಧ ಸಮ್ಯಗ್ದರ್ಶನದ ಧಾರಿಯಾದ ಆತ್ಮನು ನಿರಂತರ ಆತ್ಮ ಪ್ರತೀತಿ ಮಾಡುತ್ತಿರುತ್ತಾನೆ. ಜ್ಞಾನಿಗಳು ಯಾವಾಗ ಪೂರ್ಣ ಸ್ವರೂಪದ ಪ್ರತೀತಿ ಮಾಡುತ್ತಾರೆ ಆಗ ಆತ್ಮನಂತೂ ತ್ರಿಕಾಲ ಪ್ರತೀತಿವಂತನೇ ಇದ್ದಾನೆಂದು ಪ್ರತೀತಿಯಲ್ಲಿ ಬರುತ್ತದೆ. ಮತ್ತು ಎಲ್ಲ ಕಷಾಯ ಭಾವಗಳ ಅಭಾವದಿಂದ ಆತ್ಮನು ವೀತರಾಗ ಚಾರಿತ್ರದಿಂದ ವಿಭೂಷಿತನಿದ್ದಾನೆ.

ಯಾವಾಗ ವೀತರಾಗ ಚಾರಿತ್ರವು ಪರ್ಯಾಯದಲ್ಲಿ ಆಂಶಿಕರೂಪದಿಂದ ವ್ಯಕ್ತವಾಗುತ್ತದೆ ಆಗ ಆತ್ಮನು ತ್ರಿಕಾಲ ವೀತರಾಗ ಸ್ವರೂಪನೇ ಇದ್ದಾನೆಂಬುದು ಅನುಭವದಲ್ಲಿ ಬರುತ್ತದೆ.

ಅತೀಂದ್ರಿಯ ಆನಂದ ಸ್ವರೂಪನಾದ ಆತ್ಮನಲ್ಲಿ ಏಕಾಗ್ರವಾಗಿ ಪರ್ಯಾಯದಲ್ಲಿ ಆನಂದದ ದಾನ ಕೊಡುವುದು ಅದು ಯಥಾರ್ಥದಾನವಿದೆ. ಮುನಿರಾಜರುಗಳಿಗೆ ಆಹಾರದಾನ ಕೊಡುವುದು ಅದಂತೂ ಶುಭರಾಗವಿದೆ. ನಿಜವಾಗಿಯಂತೂ ಆತ್ಮನು ಒಂದು ಕಣದ ದಾನವನ್ನು ಕೂಡ ಕೊಡುವ ಸಾಧ್ಯತೆಯಿಲ್ಲ ಮತ್ತು ತೆಗೆದುಕೊಳ್ಳುವ ಸಾಧ್ಯತೆಯೂ ಇಲ್ಲ, ಏಕೆಂದರೆ ಆತ್ಮನು ಪುದ್ಗಲದ ಅಧಿಪತಿಯಿಲ್ಲ, ಪುದ್ಗಲದಲ್ಲಿ ಅದಲು-ಬದಲಾಗುವುದು ಅದಂತೂ ಜಡದ ಆಟವಿದೆ. ತಿನ್ನುವುದು-ಉಣ್ಣುವುದು, ಕೊಡುವುದು-ತೆಗೆದುಕೊಳ್ಳುವುದು, ಬರುವುದು-ಹೋಗುವುದು ಮೊದಲಾದುವೆಲ್ಲವೂ ಜಡದ ಕ್ರಿಯೆಯಿವೆಯೆಂದು ಪಂ.ದೀಪಚಂದರು ಅನುಭವ ಪ್ರಕಾಶದಲ್ಲಿ ಹೇಳಿದ್ದಾರೆ. ಈ ದೀಪಚಂದರು ಪಂ.ಟೋಡರಮಲ್ಲರಿಗಿಂತ ಮೊದಲು ಆಗಿ ಹೋದ ದಿಗಂಬರ ಜೈನ ವಿದ್ವಾಂಸರಿದ್ದಾರೆ. ಅಯ್ಯಾ! ಮೊದಲಿನ ವಿದ್ವಾಂಸರುಗಳು ಕೂಡ ಸಮ್ಯಕ್ ಜ್ಞಾನಿಗಳಿದ್ದರು.

ದೀಪಚಂದರು ಇನ್ನೂ ಮುಂದುವರೆದು ಹೇಳುತ್ತಾರೆ. ನರ - ನಾರಕ ಮೊದಲಾದ ಪರ್ಯಾಯಗಳು, ಸ್ವರ್ಗದ ವೈಭವ ಮೊದಲಾದವುಗಳೆಲ್ಲವು ಪುದ್ಗಲದ ನಾಟಕವಿವೆ. ತಿನ್ನುವುದು ಕುಡಿಯುವುದು, ಸಂಪಾದಿಸುವುದು ಇವೆಲ್ಲವು ಪುದ್ಗಲದ ರಂಗಭೂಮಿಯಿವೆ. ಇವು ಆತ್ಮನ ಕಾರ್ಯಗಳಲ್ಲ, ಆದುದರಿಂದ ಎಲೈ ಚಿದಾನಂದನೇ ! ನೀನು ಅವುಗಳಲ್ಲಿ ರಮಿಸಬೇಡ, ಅದು ನಿನಗೆ ಶೋಭೆ ಕೊಡುವುದಿಲ್ಲ.

ಯಾವ ಪ್ರಕಾರ ಸರ್ಪವು ಒಬ್ಬನಿಗೆ ದಂಶ ಮಾಡುವುದು ಮತ್ತು ಇನ್ನೊಬ್ಬನಿಗೆ ವಿಷವೇರುವುದು ಅದು ಅಶಕ್ಯವಿದೆ. ಅದೇ ಪ್ರಕಾರ ಎಲೈ ಚೇತನನೇ ! ಈ ತಿನ್ನುವ-ಉಣ್ಣುವ ಮೊದಲಾದುವನ್ನು ಮಾಡುವುದು ಜಡವಿದೆ. ಮತ್ತು ನಾನು ಉಂಡೆನು, ನಾನು ಕುಡಿದೆನು, ನಾನು ಭೋಗಿಸಿದೆನೆಂದು ನೀನು ಮನ್ನಿಸುವೆ ಇದು ಸತ್ಯವಿದೆಯೇನು?

ದಾರಿಯಿಂದ ಹೋಗುತ್ತಿರುವ ವ್ಯಕ್ತಿಯು ದಾರಿಯ ಪಕ್ಕದಲ್ಲಿರುವ ವಸ್ತುಗಳನ್ನೆಲ್ಲ ತನ್ನವೆಂದು ಮನ್ನಿಸಿಕೊಂಡರೆ ಅವನು ನಿಜವಾಗಿ ಹುಚ್ಚನಿದ್ದಾನೆ. ಅದೇ ಪ್ರಕಾರ ಈ ಜೀವನು ಯಾವ ಗತಿಯಲ್ಲಿ ಹೋಗುತ್ತಾನೆ. ಅಲ್ಲಿನ ಸ್ತ್ರೀ, ಪುತ್ರ, ಪರಿವಾರ, ಧನ-ಸಂಪತ್ತುಗಳೆಲ್ಲವನ್ನು ತನ್ನವೆಂದು ಮನ್ನಿಸುತ್ತಾನೆ ಇದು ನಿಜವಾಗಿ ಮರುಳತನವೇ ಇದೆಯಲ್ಲವೇ !

ಸೇವಕನು ಊಟ ಮಾಡಿದರೆ ನನ್ನ ಹೊಟ್ಟೆ ತುಂಬಿಹೋಯಿತೆಂದು ಯಜಮಾನನು ಮನ್ನಿಸುವುದಿಲ್ಲ, ಆದರೆ ಎಲೈ ಜೀವನೇ ! ನೀನು ಜಡವು ಭೋಜನ ಮಾಡುವುದರಿಂದ ನನ್ನ ಭೋಜನವಾಯಿತೆಂದು ಮನ್ನಿಸುತ್ತಿರುವೆ, ಈ ನಿನ್ನ ನಡತೆಯು ನಿನಗೇ ದುಃಖದಾಯಕವಿದೆ. ಈ ಮಾತುಗಳನ್ನೆಲ್ಲ ಪಂ. ದೀಪಚಂದರು ಹೇಳಿದ್ದಾರೆ. ಪಂ.ದೀಪಚಂದರು ಅನುಭವ ಪ್ರಕಾಶ, ಚಿದ್ವಿಲಾಸ ಮತ್ತು ಆತ್ಮಾವಲೋಕನ ಮೊದಲಾದ ಗ್ರಂಥಗಳನ್ನು ರಚಿಸಿದ್ದಾರೆ. ಅವರ ಗ್ರಂಥಗಳು ಆಗಮ ಪ್ರಮಾಣದಿಂದ ಮತ್ತು ಅಂತರ್ದೃಷ್ಟಿಯಿಂದ ಅತ್ಯಂತ ಮಹತ್ವಪೂರ್ಣವಿವೆ. ಆದರೆ ಜನರಿಗೆ ಅವನ್ನು ಓದಲು ಸಮಯವೇ ದೊರಕದಿರುವುದು ದುಃಖದ ಸಂಗತಿಯಿದೆ.

ನಿರಂತರ ಸ್ವಾನುಭವ ಮಾಡುವುದು ಇದು ಪರಮ ಲಾಭವಿದೆಯೆಂದು ಆಚಾರ್ಯ ಯೋಗೀಂದುದೇವರು ಹೇಳುತ್ತಾರೆ. ಮಕ್ಕಳು, ಧನ ಅಥವಾ ಕೀರ್ತಿಯ ಲಾಭವಾಗುವುದು ಅದು ಲಾಭವಲ್ಲ, ಆದರೆ ಪರ್ಯಾಯದಲ್ಲಿ ನಿರ್ವಿಕಾರತೆಯು ಪ್ರಕಟವಾಗುವುದು ಅದು ನಿಜವಾದ ಲಾಭವಿದೆ.

ಪ್ರಶ್ನೆ :- ಪ್ರಭು ! ಜಡದ ಕ್ರಿಯೆಯನ್ನು ಆತ್ಮನ ಕ್ರಿಯೆಯೆಂದು ಮನ್ನಿಸಬಾರದು ನಿಜ ; ಆದರೆ ಧರ್ಮ ಕಾರ್ಯದಲ್ಲಿ ದಾನ ಕೊಡಬೇಕೋ ಅಥವಾ ಕೊಡಬಾರದೋ ?

ಉತ್ತರ :- ಅಯ್ಯಾ ಸೋದರನೇ ! ಯಾರಿಗೆ ಯಾರು ದಾನ ಕೊಡುವ ಸಾಧ್ಯತೆಯಿದೆ ? ದಾನ ಕೊಡುವ

ಭಾವವು ಅದು ಶುಭ ಭಾವವಿದೆ. ಆದರೆ ಈ ಶುಭ ಭಾವವಾದರೆ ದಾನ ಕೊಡಲಾಗುತ್ತದೆ ಎಂಬುದಾಗಿಲ್ಲ, ಮತ್ತು ಹಣ ಕೊಡುವುದರಿಂದ ಶುಭ ಭಾವವಾಯಿತೆಂದೂ ಇಲ್ಲ ; ಮತ್ತು ಶುಭ ಭಾವವಾದರೆ ಧರ್ಮವಾಗುವುದೆಂದು ಕೂಡ ಇಲ್ಲ.

ಆನಂದ ಸ್ವರೂಪನಾದ ಆತ್ಮನ ದೃಷ್ಟಿ ಮಾಡಿ ಆನಂದದ ಅನುಭವ ಮಾಡುವುದರ ಹೆಸರು ಭೋಗವಿದೆ ಮತ್ತು ಪುನಃ ಪುನಃ ಅದರದೇ ಅನುಭವ ಮಾಡುವುದರ ಹೆಸರು ಉಪಭೋಗವಿದೆ. ಆತ್ಮನು ಜಡ ವಸ್ತುವನ್ನು ಭೋಗಿಸುವ ಸಾಧ್ಯತೆಯೇ ಇಲ್ಲವೆಂದ ಮೇಲೆ ಅದರ ಉಪಭೋಗವನ್ನೆಲ್ಲಿಂದ ಮಾಡುವನು ?

ಆತ್ಮನು ಅನಂತ ವೀರ್ಯದ ಅಧಿಪತಿಯಿದ್ದಾನೆ. ಅವನು ತನ್ನ ಶಕ್ತಿ ರೂಪದಿಂದ ಪರಿಣಮನ ಮಾಡುವಲ್ಲಿ ಆಯಾಸಗೊಳ್ಳುವುದಿಲ್ಲ, ಆದರೆ ಅವನ ಶಕ್ತಿಯ ವೃದ್ಧಿಯಾಗುತ್ತದೆ.

ಜೀವನು ಯಾವಾಗ ಓರ್ವ ಅಖಂಡ ಆತ್ಮನನ್ನು ಅಭೇದ ನಯದಿಂದ ಧ್ಯಾನಿಸುತ್ತಾನೆ. ಆಗ ಅವನಿಗೆ ಸ್ವಾನುಭವದ ಲಾಭವಾಗುತ್ತದೆ, ಅದುವೇ ಆತ್ಮದರ್ಶನವಿದೆ, ಅದುವೇ ಸುಖ-ಶಾಂತಿಯಿದೆ, ಅದುವೇ ಆತ್ಮ ಸಮಾಧಿಯಿದೆ ಮತ್ತು ಅದುವೇ ನಿಶ್ಚಯ ರತ್ನತ್ರಯದ ಏಕತೆಯಿದೆ. ಆದುದರಿಂದ ಮುಮುಕ್ಷು ಜೀವರುಗಳು ಅತ್ಯಂತ ಅಭಿರುಚಿಯಿಂದ ತಮ್ಮ ಆತ್ಮನ ಸೇವನೆ ಮಾಡಬೇಕಾಗುವುದು.

ಆತ್ಮ ನಿಮಗ್ನತೆಯಲ್ಲಿಯೇ ತಪ-ತ್ಯಾಗ ಮೊದಲಾದುವೆಲ್ಲವು ಇವೆಯೆಂದು ಈಗ ಹೇಳುತ್ತಾರೆ, -

ಅಪ್ಪಾ ದಂಸಣು ಣಾಣು ಮುಣಿ ಅಪ್ಪಾ ಚರಣು ವಿಯಾಣಿ
ಅಪ್ಪಾ ಸಂಜಮು ಸೀಲ ತಉ ಅಪ್ಪಾ ಪಚ್ಚಕ್ಖಾಣಿ ॥81॥

ಆತ್ಮ ದರ್ಶನ-ಜ್ಞಾನನಿಹನು ಆತ್ಮ ತಾ ಚಾರಿತ್ರನಿಹನು
ಆತ್ಮ ಸಂಯಮ ಶೀಲ ತಪನು ಆತ್ಮ ಪ್ರತ್ಯಾಖ್ಯಾನನಿಹನು ॥81॥

ಅರ್ಥ :- ಆತ್ಮನನ್ನೇ ಸಮ್ಯಗ್ದರ್ಶನ ಮತ್ತು ಸಮ್ಯಕ್ ಜ್ಞಾನವೆಂದು ತಿಳಿ, ಆತ್ಮನನ್ನು ಸಮ್ಯಕ್ಚಾರಿತ್ರವೆಂದು ತಿಳಿ, ಆತ್ಮನೇ ಸಂಯಮನಿದ್ದಾನೆ, ಶೀಲನಿದ್ದಾನೆ, ತಪನಿದ್ದಾನೆ, ಆತ್ಮನೇ ಪ್ರತ್ಯಾಖ್ಯಾನನಿದ್ದಾನೆ.

ಭ. ಕುಂದಕುಂದದೇವರು ತಮ್ಮ ಗ್ರಂಥಗಳಲ್ಲಿ ವ್ಯಕ್ತಪಡಿಸಿದ ಭಾವವನ್ನೇ ಇಲ್ಲಿ ವ್ಯಕ್ತಪಡಿಸಲಾಗಿದೆ.

ಅಯ್ಯಾ ಸೋದರನೇ ! ಈ ಮನುಷ್ಯ ದೇಹದ ಸ್ಥಿತಿಯು ಯಾವಾಗ ಪೂರ್ಣವಾಗುವುದೆಂಬುದರ ಅರಿವು ನಿನಗೆ ಸ್ವಲ್ಪಾದರೂ ಇದೆಯೇನು ? ನೀನು ನಿನ್ನ ಚಿಂತೆ ಮಾಡು ! ಪರದ ಚಿಂತೆಯಲ್ಲೇಕೆ ನಿಂತುಕೊಂಡಿರುವೆ?

ಶುದ್ಧ ಚೈತನ್ಯ ವೀತರಾಗ ಚಾರಿತ್ರಮಯನೂ ಶಾಂತಸ್ವರೂಪನೂ ಆದ ತನ್ನ ಆತ್ಮನ ದೃಷ್ಟಿ ಮಾಡಿ ಅವನಲ್ಲಿಯೇ ಸ್ಥಿರತೆ ಮಾಡುವುದರಿಂದ ಯಾವ ಚಾರಿತ್ರವು ಪ್ರಕಟವಾಗುತ್ತದೆ, ಆ ಚಾರಿತ್ರವೆಂದರೆ ಆತ್ಮನೇ ಇದ್ದಾನೆಂದು ಇಲ್ಲಿ ಹೇಳುತ್ತಾರೆ. ಏಕೆಂದರೆ ನಿರ್ಮಲ ಪರ್ಯಾಯವು ಆತ್ಮನ ಜತೆಯಲ್ಲಿ ಅಭೇದವಿದೆ. ಮಹಾವ್ರತಾದಿಗಳ ಭಾವರೂಪದ ವ್ಯವಹಾರ ಚಾರಿತ್ರವು ಅದು ಆತ್ಮವಲ್ಲ, ಏಕೆಂದರೆ ಅದಂತೂ ರಾಗವಿದ್ದು ಅದು ಆತ್ಮನ ಜತೆಯಲ್ಲಿ ಅಭೇದವಿರುವುದಿಲ್ಲ.

ಆತ್ಮನೇ ಸಂಯಮನಿದ್ದಾನೆ, ಆತ್ಮನೇ ಶೀಲನಿದ್ದಾನೆ, ಆತ್ಮನೇ ತಪಸ್ಸು ಇದ್ದಾನೆ, ಮತ್ತು ಆತ್ಮನೇ ತ್ಯಾಗನಿದ್ದಾನೆ. ಏಕೆಂದರೆ ಆತ್ಮನ ಸ್ವಭಾವದಲ್ಲಿ ರಮಿಸುತ್ತಿದ್ದಂತೆಯೇ ನಿಶ್ಚಯನಯದಿಂದ ಮೋಕ್ಷದ ಸಮಸ್ತ ಸಾಧನಗಳು ಪ್ರಕಟವಾಗಿ ಬಿಡುತ್ತವೆ.

ನಿಜವಾದ ದೇವ-ಶಾಸ್ತ್ರ-ಗುರುಗಳ ಶ್ರದ್ಧೆ ಮತ್ತು ಸಪ್ತ ತತ್ತ್ವಗಳ ಶ್ರದ್ಧೆಯು ಅದು ವ್ಯವಹಾರ ಸಮ್ಯಗ್ದರ್ಶನವಿದೆ. ಆದರೆ ಅದಂತೂ ಶುಭರಾಗರೂಪವಿದೆ. ಮತ್ತು ನಿರ್ಮಲ ವೀತರಾಗ ಸ್ವರೂಪನಾದ ಆತ್ಮನ ಶ್ರದ್ಧೆ - ರುಚಿ

ಮಾಡುವುದರಿಂದ ಪರ್ಯಾಯದಲ್ಲಿ ಯಾವ ನಿರ್ಮಲ ಆನಂದವು ಪ್ರಕಟವಾಗುತ್ತದೆ ಅದು ನಿಶ್ಚಯ ಸಮ್ಯಗ್ದರ್ಶನವಿದೆ. ಜ್ಞಾನದಲ್ಲಿ ತಮ್ಮ ಶುದ್ಧ ಸ್ವಭಾವದ ಹೊಳೆಯುವಿಕೆ ಶುದ್ಧ ಸ್ವಭಾವದ ಪ್ರಕಟತೆ ಅದು ಸಮ್ಯಕ್‌ಜ್ಞಾನವಿದೆ. ಶುದ್ಧ ಸ್ವಭಾವದಲ್ಲಿ ಕ್ರೀಡೆ ಮಾಡಿದ ಮೇಲೆ ಯಾವ ನಿರ್ವಿಕಲ್ಪ ಆನಂದದ ಅನುಭವವಾಗುತ್ತದೆ, ಅದು ಸಮ್ಯಕ್ಚಾರಿತ್ರವಿದೆ.

ಐದು ಇಂದ್ರಿಯಗಳ ಹಾಗೂ ಮನಸ್ಸಿನ ನಿರೋಧ ಮಾಡುವುದು ಮತ್ತು ಷಟ್‌ಕಾಯ ಜೀವಗಳ ರಕ್ಷಣೆಯ ಭಾವವಾಗುವುದು ಅದು ವ್ಯವಹಾರ ಸಂಯಮವಿದೆ, ಮತ್ತು ತಮ್ಮ ಶುದ್ಧ ಸ್ವಭಾವದಲ್ಲಿ ಸ್ಥಿರವಿರುವುದು ಹಾಗೂ ರಾಗ-ದ್ವೇಷಗಳನ್ನು ಮಾಡದಿರುವುದು ಅದು ನಿಶ್ಚಯ ಸಂಯಮವಿದೆ.

ಮನ-ವಚನ-ಕಾಯ, ಕೃತ-ಕಾರಿತ-ಅನುಮೋದನವೆಂದು ಹೀಗೆ ಒಂಭತ್ತು ಪ್ರಕಾರದಿಂದ ಕಾಮ-ವಿಕಾರವನ್ನು ದೂರ ಮಾಡುವುದು ಅದು ವ್ಯವಹಾರ ಬ್ರಹ್ಮಚರ್ಯವಿದೆ ಮತ್ತು ತಮ್ಮ ಬ್ರಹ್ಮ ಎಂದರೆ ಆನಂದ ಸ್ವರೂಪನಾದ ನಿಜಾತ್ಮನಲ್ಲಿ ವಿಹರಿಸುವುದು, ರಮಿಸುವುದು ಅದು ನಿಶ್ಚಯ ಬ್ರಹ್ಮಚರ್ಯವಿದೆ.

ಪಂಚಮಕಾಲವಿದ್ದರು ಕೂಡ ವಸ್ತುವಿನ ಸ್ವರೂಪವಂತೂ ಹೇಗೆ ಇದೆ ಹಾಗೆಯೇ ಇದೆ. ಅದರಲ್ಲಿ ಯಾವುದೇ ಕಾಲದಿಂದ ಅಂತರವಾಗುವುದಿಲ್ಲ, ನಿಶ್ಚಯದಿಂದ ವಸ್ತುವಿನ ಸ್ವರೂಪವನ್ನು ಹೇಗೆ ಹೇಳಿದೆ ಅದುವೇ ಯಥಾರ್ಥವಿದೆ. ವ್ಯವಹಾರವಂತೂ ಕೇವಲ ತಿಳಿದುಕೊಳ್ಳಲು ಯೋಗ್ಯವಿದೆ. ಪಂಚಮಕಾಲದಲ್ಲಿ ಆದ ಸಂತರು ಕೂಡ ಆತ್ಮನ ಪ್ರತೀತಿ, ಜ್ಞಾನ ಮತ್ತು ಸ್ಥಿರತೆಗೇನೇ ರತ್ನತ್ರಯವೆಂದು ಹೇಳುತ್ತಾರೆ. ಅವರು ಆತ್ಮನ ಮಹಿಮೆಯನ್ನು ಹೇಳುತ್ತ - ಹಾಡುತ್ತ ಸೋತು ಹೋಗುವುದಿಲ್ಲ ; ಇನ್ನೂ ಉತ್ಸಾಹಿತರಾಗುತ್ತಾರೆ.

ನಿಶ್ಚಯದಿಂದ ಓರ್ವ ಶುದ್ಧ ನಿಜಾತ್ಮನಲ್ಲಿ ತಪಿಸುವುದು ಅದು ತಪಸ್ಸು ಇದೆ. ದೇಹದ ಕ್ರಿಯೆಯಿಂದ ತಪವಾಗುವುದಿಲ್ಲ ಏಕೆಂದರೆ ಅದು ಜಡವಿದೆ. ಅದರಂತೆ ಪುಣ್ಯ-ಪಾಪದ ಭಾವದಿಂದ ಕೂಡ ತಪವಾಗುವುದಿಲ್ಲ, ಏಕೆಂದರೆ ಅವು ಅನಾತ್ಮವಿದೆ. ಆದುದರಿಂದ ಆತ್ಮನ ಪ್ರತಪನವೇ ನಿಶ್ಚಯ ತಪವಿದೆ.

ತನ್ನ ಆತ್ಮನನ್ನು ಸಮಸ್ತ ಪರದ್ರವ್ಯ ಹಾಗೂ ಪರಭಾವಗಳಿಂದ ಭಿನ್ನವಾಗಿ ಅನುಭವ ಮಾಡುವುದು ಅದು ನಿಶ್ಚಯ ಪ್ರತ್ಯಾಖ್ಯಾನವಿದೆ. ಹೀಗೆ ಆತ್ಮಸ್ಥನಾಗಿರುವುದೇ ನಿಶ್ಚಯ ಶ್ರದ್ಧೆ - ಜ್ಞಾನ - ಚಾರಿತ್ರ - ತಪಸ್ಸು ಮತ್ತು ತ್ಯಾಗವಿದೆ. ಇಲ್ಲಿ ಭ. ಕುಂದಕುಂದಾಚಾರ್ಯದೇವರ ಗ್ರಂಥಗಳಾದ ಸಮಯಸಾರ, ನಿಯಮಸಾರದ ಆಧಾರ ಕೊಡುತ್ತಾರೆ. ಆಚಾರ್ಯ ಭಗವಂತರು ಹೇಳುವುದೇನೆಂದರೆ ನಿಶ್ಚಯದಿಂದ ನನ್ನ ಜ್ಞಾನದಲ್ಲಿ ಆತ್ಮನಿದ್ದಾನೆ, ನನ್ನ ದರ್ಶನದಲ್ಲಿ ಆತ್ಮನೇ ಸಮೀಪದಲ್ಲಿದ್ದಾನೆ, ಜ್ಞಾನದಲ್ಲಿ ಆತ್ಮನೇ ಸಮೀಪದಲ್ಲಿದ್ದಾನೆ, ಚಾರಿತ್ರದಲ್ಲಿ ಆತ್ಮನೇ ಸಮೀಪದಲ್ಲಿದ್ದಾನೆ, ಏಕೆಂದರೆ ನಾನು ಅದರಲ್ಲಿ ರಮಿಸುವಾಗ ಆತ್ಮನ ಸಮೀಪಕ್ಕೇ ತಲುಪುತ್ತೇನೆ.

ಈಗ ಪರಭಾವಗಳ ತ್ಯಾಗವೇ ಸನ್ಯಾಸವಿದೆಯೆಂದು ಹೇಳುತ್ತಾರೆ -

ಜೋ ಪರಿಯಾಣಇ ಅಪ್ಪ ಪರು ಸೋ ಪರು ಚಯಇ ಣಿಭಂತು
ಸೋ ಸಣ್ಣಾಸು ಮುಣೇಹಿ ತುಹು ಕೇವಲ-ಣಾಣಿಂ ಉತ್ತು ॥82॥

ನಿಜ-ಪರಗಳ ತಾ ತಿಳಿದವನು ಬಿಡುವನು ಅನ್ಯವ ನಿರ್ಭಯದಿ
ನಿಜದಿಂದದು ಸನ್ಯಾಸವಿದೆ ಪೇಳ್ದರು ಕೇವಲಜ್ಞಾನಿಗಳು ॥82॥

ಅರ್ಥ :- ಯಾರು ತಮ್ಮ ಆತ್ಮನನ್ನು ಹಾಗೂ ಪರ ಪದಾರ್ಥಗಳನ್ನು ತಿಳಿದುಕೊಳ್ಳುತ್ತಾರೆ ಅವರು ಯಾವುದೇ ಭ್ರಾಂತಿಯಿಲ್ಲದೆ ಪರಪದಾರ್ಥಗಳನ್ನು ತ್ಯಾಗ ಮಾಡಿ ಬಿಡುತ್ತಾರೆ. ಅಂಥವರನ್ನೇ ನೀನು ಸನ್ಯಾಸಿ ಅಥವಾ ತ್ಯಾಗಿಯೆಂದು ತಿಳಿದುಕೊಳ್ಳಬೇಕೆಂದು ಕೇವಲಜ್ಞಾನಿಗಳು ಹೇಳಿದ್ದಾರೆ.

ಯಾವನು ಆನಂದ ಸ್ವರೂಪನಾದ ಶುದ್ಧ ಆತ್ಮನನ್ನು ಸ್ವವೆಂದು ತಿಳಿಯುತ್ತಾನೆ ಮತ್ತು ಶರೀರ, ಕರ್ಮ, ಪುಣ್ಯ - ಪಾಪ ಮೊದಲಾದ ಪರದ್ರವ್ಯಗಳನ್ನು - ಪರಭಾವಗಳನ್ನು ಪರರೂಪವೆಂದು ತಿಳಿಯುತ್ತಾನೆ, ಆ ಜೀವನು ಯಾವುದೇ ಪ್ರಕಾರದ ಭ್ರಾಂತಿಯಿಲ್ಲದೆ ಪರವನ್ನು ತ್ಯಾಗ ಮಾಡಿ ಬಿಡುತ್ತಾನೆ; ಮತ್ತು ಸ್ವರೂಪದಲ್ಲಿ ಸ್ಥಿರನಾಗುತ್ತಾನೆ ಅವನೇ-ಅದೇ ಜೀವನೇ ಸನ್ಯಾಸಿಯಿದ್ದಾನೆ. ಇಂಥ ಸನ್ಯಾಸದ ಪ್ರಾರಂಭವು ಅವಿರತ ಸಮ್ಯಕ್‌ದೃಷ್ಟಿ ಗುಣಸ್ಥಾನದಿಂದ ಆಗಿ ಹೋಗುತ್ತದೆ. ಸಮ್ಯಕ್‌ದೃಷ್ಟಿಯ ಅಭಿಪ್ರಾಯದಲ್ಲಿ ರಾಗದ ತ್ಯಾಗವು ವರ್ತಿಸುತ್ತದೆ ಮತ್ತು ಸ್ವಭಾವದ ಗ್ರಹಣವಿರುತ್ತದೆ.

ಸಮ್ಯಕ್‌ದೃಷ್ಟಿ ಚಕ್ರವರ್ತಿಯು ಅಂತರ್ಯದಿಂದ ತೊಂಭತ್ತಾರು ಸಾವಿರ ರಾಣಿಯರ ಮತ್ತು ತೊಂಭತ್ತಾರು ಕೋಟಿ ಪದಾತಿಗಳ ಅಧಿಪತಿಯಾಗುವುದಿಲ್ಲ. ಜ್ಞಾನಿಗಳು ಪುದ್ಗಲಮಯವಾದ ಶರೀರ, ವಾಣಿ, ಮನಸ್ಸು ಮತ್ತು ಅಂತರ್ಯದಲ್ಲಿ ಉತ್ಪನ್ನವಾಗುವಂಥ ಶುಭಾಶುಭ ಭಾವಗಳ ಅಧಿಪತಿಯು ಕೂಡ ಇರುವುದಿಲ್ಲ. ಇಂಥ ಜ್ಞಾನಿಗಳು ದೃಷ್ಟಿಯ ಅಪೇಕ್ಷೆಯಿಂದ ಸನ್ಯಾಸಿಗಳಿದ್ದಾರೆ. ಆದರೆ ಸ್ಥಿರತೆಯ ಅಪೇಕ್ಷೆಯಿಂದಂತೂ ಮುನಿರಾಜರುಗಳೇ ನಿಜವಾದ ಸನ್ಯಾಸಿಗಳಿದ್ದಾರೆ.

ಆತ್ಮನಲ್ಲಿ ಸ್ವ-ಸ್ವಾಮಿ ಸಂಬಂಧವೆಂಬ ಹೆಸರಿನ ಒಂದು ಗುಣವಿದೆ. ಸ್ವ ಎಂದರೆ ತನ್ನ ಸಹಜಾತ್ಮ ಸ್ವರೂಪದ ಅಧಿಪತಿಯು (ಸ್ವಾಮಿಯು) ಆತ್ಮನಿದಾನೆ. ಆತ್ಮನು ವಿಕಲ್ಪಗಳ ಅಧಿಪತಿಯಿಲ್ಲ. ಆತ್ಮನು ತನ್ನ ಸ್ವದ್ರವ್ಯ, ಕ್ಷೇತ್ರ, ಕಾಲ, ಭಾವಗಳ ಅಧಿಪತಿಯಿದ್ದಾನೆ. ಆತ್ಮನು ಅನ್ಯ ದ್ರವ್ಯ-ಕ್ಷೇತ್ರ-ಕಾಲ-ಭಾವಗಳ ಅಧಿಪತಿಯಿಲ್ಲ.

ಏಕರೂಪದಿಂದ ವಿರಾಜಮಾನವಾದ ಶುದ್ಧ ವಸ್ತುವು ಅದು ನನ್ನ ದ್ರವ್ಯವಿದೆ. ಬಾಹ್ಯ ಸಂಪತ್ತು ಅದು ನನ್ನ ದ್ರವ್ಯವಿಲ್ಲ. ಆತ್ಮನ ಅಸಂಖ್ಯಾತ ಪ್ರದೇಶಿಯಾದ ಕ್ಷೇತ್ರವು ಅದು ನನ್ನ ಕ್ಷೇತ್ರವಿದೆ. ಮನೆಯ ಅಥವಾ ಶರೀರದ ಅಥವಾ ರಾಗದ ಕ್ಷೇತ್ರವು ಅದು ನನ್ನ ಕ್ಷೇತ್ರವಿಲ್ಲ. ನನ್ನ ಆತ್ಮ ಗುಣಗಳ ಸಮಯ - ಸಮಯದ ಪರಿಣಮನವು ಅದು ನನ್ನ ಕಾಲವಿದೆ. ಮತ್ತು ನನ್ನ ಆತ್ಮನ ಯಾವ ಶುದ್ಧ ಗುಣಗಳಿವೆ ಅವು ನನ್ನ ಭಾವಗಳಿವೆ. ನಾನು ಸಿದ್ಧ ಸಮಾನ ಶುದ್ಧ , ನಿರಂಜನ, ನಿರ್ವಿಕಾರ, ಚೈತನ್ಯಪೂರ್ಣ ಜ್ಞಾನ-ದರ್ಶನ ಮಯನಿದ್ದೇನೆ, ಹೀಗೆ ಸಮ್ಯಕ್‌ದೃಷ್ಟಿಯ ಅಭಿಪ್ರಾಯವಿರುತ್ತದೆ. ಸಮ್ಯಕ್‌ದೃಷ್ಟಿಯು ಅಪೂರ್ಣ ಅವಸ್ಥೆಯ ಅಥವಾ ರಾಗದ ಅವಸ್ಥೆಯ ಅಧಿಪತಿ ಯಾಗುವುದಿಲ್ಲ. ಈ ಅಪೇಕ್ಷೆಯಿಂದ ಜ್ಞಾನಿಗಳಿಗೆ ಪರದ ಸನ್ಯಾಸವಿದೆ - ಪರದ ತ್ಯಾಗವಿದೆ.

ಆತ್ಮನು ಅಗಾಧ .... ಅಗಾಧ .... ಅಗಾಧ ಆಳತೆಮೀರಿದ ಅಕೃತ್ರಿಮ ಚೈತನ್ಯ ಗುಣಗಳ ಮಹಾಸಾಗರನಿದ್ದಾನೆ. ಇಂಥ ದೃಷ್ಟಿಯ ಧಾರಕನಾದ ಸಮ್ಯಕ್‌ದೃಷ್ಟಿಯು ದೃಷ್ಟಿಯ ಅಪೇಕ್ಷೆಯಿಂದ ಪರಮ ಕೃತ ಕೃತ್ಯನಿದ್ದಾನೆ. ಜೀವನ ಮುಕ್ತನಿದ್ದಾನೆ ಮತ್ತು ನಿಜವಾದ ಸನ್ಯಾಸಿಯಿದ್ದಾನೆ.

ನಾಲ್ಕನೆಯ ಗುಣಸ್ಥಾನದಲ್ಲಿ ಸಮ್ಯಕ್‌ದೃಷ್ಟಿಗೆ ತ್ಯಾಗವಿರುವುದಿಲ್ಲವೆಂದು ಅಜ್ಞಾನೀ ಜನರು ಹೇಳುತ್ತಾರೆ. ಆದರೆ ಇಲ್ಲಿ ಯಾರು ತಮ್ಮ ಆತ್ಮನನ್ನು ತಿಳಿದುಕೊಂಡು ಪುಣ್ಯ - ಪಾಪ ಮೊದಲಾದ ಪರಭಾವಗಳ ತ್ಯಾಗ ಮಾಡುತ್ತಾರೆ ಅವರೇ ನಿಜವ್ವಾದ ಸನ್ಯಾಸಿಯಿದ್ದಾರೆಂದು ಮುನಿರಾಜರು ಹೇಳುತ್ತಾರೆ. ಶುದ್ಧ ಜ್ಞಾನಾನಂದ ಸ್ವರೂಪವಾದ ತಮ್ಮ ಸ್ವರೂಪದಲ್ಲಿ ಮತ್ತು ಅಜೀವ ಹಾಗೂ ವಿಕಾರ ಮೊದಲಾದ ಪರಭಾವಗಳ ಮಧ್ಯದಲ್ಲಿ ಯಾರಿಗೆ ಭೇದಜ್ಞಾನವಿದೆ, ಅವರ ದೃಷ್ಟಿಯೊಳಗಿಂದ ಪರಭಾವಗಳು ಹೊರಟು ಹೋಗಿರುತ್ತವೆ. ಧರ್ಮಾತ್ಮ ಜೀವರುಗಳು ತಮ್ಮ ಶುದ್ಧ ಸ್ವರೂಪದ ಆದರವನ್ನೇ ಮಾಡುತ್ತಾರೆ. ಅವರು ವಿಕಾರ ಹಾಗೂ ಸಂಯೋಗಗಳ ಆದರ ಮಾಡುವುದಿಲ್ಲ. ಏಕೆಂದರೆ ಧರ್ಮಾತ್ಮರ ದೃಷ್ಟಿಯಲ್ಲಿ ವಿಕಾರ ಹಾಗೂ ಸಂಯೋಗಗಳ ತ್ಯಾಗವಿದೆ. ಇಂಥ ತ್ಯಾಗವೇ ನಿಜವಾದ ಸನ್ಯಾಸವಿದೆ.

ಆತ್ಮನು ಶುದ್ಧ, ಅರೂಪಿ, ಆನಂದಘನನಿದ್ದಾನೆ. ಹೀಗೆ ತನ್ನ ಆತ್ಮನ ದೃಷ್ಟಿಯು ಪ್ರಕಟವಾಗಿರುವಂಥ ಜೀವನು ನನ್ನಿಂದ ಭಿನ್ನವಾದ ಆತ್ಮರುಗಳು ಜತೆಯಲ್ಲಿ ಹಾಗೂ ಪುದ್ಗಲ ಸ್ಕಂಧಗಳ ಜತೆಯಲ್ಲಿ ನನ್ನದು ಯಾವುದೇ ಸಂಬಂಧವಿಲ್ಲ,

ನಾನು ಪರದ್ರವ್ಯ ಹಾಗೂ ಪರಭಾವಗಳ ಸಂಬಂಧದಿಂದ ತ್ರಿಕಾಲ ರಹಿತನಿದ್ದೇನೆಂದು ವಿಚಾರ ಮಾಡುತ್ತಾನೆ. ಯಾವನ ದೃಷ್ಟಿಯಲ್ಲಿ ಆತ್ಮನು ಬರುತ್ತಾನೆ ಅವನು ವರ್ತಮಾನ ಪರ್ಯಾಯದಲ್ಲಿ ಕೂಡ ಪರದ್ರವ್ಯ ಹಾಗೂ ಪರಭಾವಗಳಿಂದ ಭಿನ್ನನಿರುತ್ತಾನೆ. ಅದನ್ನು ತ್ಯಾಗವೆಂದು ಹೇಳಲಾಗುತ್ತದೆ.

ಯಾವ ಪ್ರಕಾರ ಮಗನ ಮದುವೆಯ ಸಂದರ್ಭದಲ್ಲಿ ಅಥವಾ ಯಾವುದಾದರೊಂದು ವಿಶೇಷ ಪ್ರಸಂಗದಲ್ಲಿ ಮೈಮೇಲೆ ಧರಿಸಲು ಹತ್ತಿಪತ್ತು ಸಾವಿರ ರೂಪಾಯಿಯ ಒಡವೆಗಳನ್ನು ಕೈಗಡ ತಂದಿರುತ್ತದೆ ಅವನ್ನು ತಮ್ಮ ಮೂಲ ಧನದಲ್ಲಿ ಗಣಿಸಲಾಗುವುದಿಲ್ಲ; ಅದೇ ಪ್ರಕಾರ ವಿಕಾರಗಳಂತೂ ಆಗಂತುಕ ಭಾವಗಳಿಂದ್ದು ಅವನ್ನು ಧರ್ಮಾತ್ಮರುಗಳು ತಮ್ಮ ಸ್ವಭಾವರೂಪದಲ್ಲಿ ಸ್ವೀಕಾರ ಮಾಡುವುದಿಲ್ಲ, ಏಕೆಂದರೆ ಅವು ತ್ರಿಕಾಲ ಉಳಿಯುವಂಥ ವಸ್ತುಗಳಲ್ಲ.

ನಾನು ಧರ್ಮ - ಅಧರ್ಮ, ಆಕಾಶ ಮತ್ತು ಕಾಲದ್ರವ್ಯದಿಂದ ಕೂಡ ಭಿನ್ನನಿದ್ದೇನೆ, ನಾನು ಜ್ಞಾನಾವರಣ ಮೊದಲಾದ ಎಂಟು ಕರ್ಮಗಳಿಂದ ರಹಿತನಿದ್ದೇನೆ, ಶರೀರ ಮೊದಲಾದ ಪರದ್ರವ್ಯ ಹಾಗೂ ರಾಗ ಮೊದಲಾದ ವಿಕಾರ ಭಾವಗಳು ಕೂಡ ನನ್ನಲ್ಲಿ ಇಲ್ಲ, ನನ್ನಲ್ಲಿ ಪಂಚೇಂದ್ರಿಯ ವಿಷಯಗಳ ಅಭಿಲಾಷೆಯದು ಕೂಡ ಅಭಾವವಿದೆಯೆಂದು ಧರ್ಮಾತ್ಮ ಜೀವನು ವಿಚಾರ ಮಾಡುತ್ತಾನೆ. ಅಸ್ಥಿರತೆಯ ವಶದಿಂದ ಪಂಚೇಂದ್ರಿಯ ವಿಷಯಗಳ ಕುರಿತು ರಾಗವು ಬಂದು ಬಿಡುತ್ತದೆ, ಆದರೆ ಅವುಗಳಲ್ಲಿ ಸುಖಬುದ್ಧಿಯಿರುವುದಿಲ್ಲ, ಆದುದರಿಂದ ಧರ್ಮಾತ್ಮನ ಅಭಿಪ್ರಾಯದಲ್ಲಿ ಪರಭಾವಗಳ ತ್ಯಾಗವು ವರ್ತಿಸುತ್ತದೆ.

'ಎಲ್ಲಿ ಚೇತನವಿದೆ ಅಲ್ಲಿ ಅನಂತ ಗುಣಗಳೆಂದು ಕೇವಲಿಗಳು ಹೇಳುವರು'. ಎಲ್ಲಿ ಚೈತನ್ಯ....ಚೈತನ್ಯ....ಜ್ಞಾಯಕ ಸ್ವಭಾವದ ಆತ್ಮನಿದ್ದಾನೆ ಅಲ್ಲಿಯೇ ಅನಂತ ಗುಣಗಳಿವೆಯೆಂದು ಭಗವಾನ ಸರ್ವಜ್ಞ ದೇವರು ಹೇಳುತ್ತಾರೆ. ಪರದಲ್ಲಿ, ಶರೀರದಲ್ಲಿ, ಕರ್ಮದಲ್ಲಿ ಅಥವಾ ರಾಗದಲ್ಲಿ ಆತ್ಮನ ಯಾವುದೇ ಗುಣವು ವಾಸಿಸುವುದಿಲ್ಲವೆಂದು ತಿಳಿದುಕೊಳ್ಳುವಂಥ ಜ್ಞಾನಿಗೆ ಬಾಹ್ಯದಲ್ಲಿ ಎಲ್ಲಿಯೂ ಸುಖದ ಭಾಸವಾಗುವುದಿಲ್ಲ.

ಸಮ್ಯಕ್‌ದೃಷ್ಟಿಯು ಆರು ಖಂಡಗಳ ಅಧಿಪತಿಯಾದ ಚಕ್ರವರ್ತಿಯಿರಲಿ, ತೊಂಭತ್ತಾರು ಸಾವಿರ ರಾಣಿಯರ ಸಂಯೋಗವಿರಲಿ ಮತ್ತು ಅಳತೆಯಿಲ್ಲದಷ್ಟು ವೈಭವವು ಬಿದ್ದುಕೊಂಡಿದ್ದರೂ ಕೂಡ ಅವನಿಗೆ ಅವುಗಳಲ್ಲಿ ಸ್ವಲ್ಪವು ಕೂಡ ಸುಖಬುದ್ಧಿಯಿರುವುದಿಲ್ಲ.

ಎಲ್ಲಿ ಸುಖವಿಲ್ಲ ಅಲ್ಲಿ ಸುಖವನ್ನು ಮನ್ನಿಸುವುದು ಇದಂತೂ ಮಿಥ್ಯಾದೃಷ್ಟಿಯ ಲಕ್ಷಣವಿದೆ. ಸಮ್ಯಕ್‌ದೃಷ್ಟಿಯು ಬಾಹ್ಯದಲ್ಲಿ ಭೋಗ ಭೋಗಿಸುತ್ತಿರುವುದು ಕಂಡು ಬಂದರು ಕೂಡ ಅವನ ದೃಷ್ಟಿಯು ತನ್ನ ಅತೀಂದ್ರಿಯ ಸುಖದ ಹೊರತಾಗಿ ಎಲ್ಲಿಯೂ ಸುಖ ಬುದ್ಧಿ ಮಾಡುವುದಿಲ್ಲ, ಆ ದೃಷ್ಟಿಯಲ್ಲಿ ಮಹಾನ ಪುರುಷಾರ್ಥದ ಜಾಗೃತಿಯಿದೆ. ಆ ದೃಷ್ಟಿಯು ನನ್ನ ಆತ್ಮನಲ್ಲಿಯೇ ಆನಂದವಿದೆಯೆಂದು ಹೇಳುತ್ತದೆ. ಇಂದ್ರಿಯ ಸುಖವಂತೂ ಸುಖವಲ್ಲವೇ ಅಲ್ಲ, ಅದಂತೂ ದುಃಖವಿದೆ, ಹಾಲಾಹಾಲ ವಿಷವಿದೆ, ಉಪಸರ್ಗವಿದೆ.

ಧರ್ಮಾತ್ಮ ಜೀವನು ಲೌಕಿಕ ಜ್ಞಾನವನ್ನು ಮತ್ತು ಶಾಸ್ತ್ರಜ್ಞಾನವನ್ನು ಜ್ಞಾನವೆಂದು ಮನ್ನಿಸುವುದಿಲ್ಲ, ಅವನಂತೂ ಅತೀಂದ್ರಿಯ ಜ್ಞಾನವನ್ನೇ ಜ್ಞಾನವೆಂದು ಮನ್ನಿಸುತ್ತಾನೆ ಮತ್ತು ಅತೀಂದ್ರಿಯ ಸುಖವನ್ನೇ ಸುಖವೆಂದು ಮನ್ನಿಸುತ್ತಾನೆ. ಅದು ಮನಸ್ಸಿನಿಂದ ಆಚೆ, ರಾಗದಿಂದ ಭಿನ್ನ, ಇಂದ್ರಿಯಗಳಿಂದ ರಹಿತ, ಇಂದ್ರಿಯಾತೀತ ಜ್ಞಾನ ಮತ್ತು ಸುಖವಿದೆ ಅದುವೇ ವಾಸ್ತವಿಕ ಜ್ಞಾನವಿದೆ, ಅದುವೇ ವಾಸ್ತವಿಕ ಸುಖವಿದೆ.

ಜನರು ರಜಕಣದ ಸಮಾನವಿರುವ ಧನದ ಬೆನ್ನು ಹತ್ತಿ ಧಾವಿಸುತ್ತಿದ್ದಾರಲ್ಲವೇ ! ಹಾಗೆ ಧರ್ಮಾತ್ಮನು ತನ್ನ ಧನವನ್ನು ಅಂತರ್ಯದಲ್ಲಿ ನೋಡುತ್ತಾನೆ ಮತ್ತು ಅದರ ಹಿಂದೆ ಧಾವಿಸುತ್ತಾನೆ. ಸಮ್ಯಕ್‌ದೃಷ್ಟಿ ಜೀವರುಗಳು ಬೇಕಾದರೆ ಸ್ತ್ರೀಯರಿರಲಿ ಅಥವಾ ಪುರುಷರಿರಲಿ, ಬೇಕಾದರೆ ಎಂಟು ವರುಷದ ಬಾಲಿಕೆಯಿದ್ದರು ಕೂಡ ಅವರು ತಮ್ಮ ಅತೀಂದ್ರಿಯ